# ಅಪರಂಜಿ

ತಿಳಿನಗೆಯ ಕಾರಂಜಿ

ಡಿಸೆಂಬರ್ 2018




ಬಿಡಿ ಪ್ರತಿ: ರೂ.10.00

# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 36

ಸಂಚಿಕೆ - 03

ಡಿಸೆಂಬರ್ - 2018





**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಗುಡೇಮಾರನಹಳ್ಳಿ.... | ವತ್ಸನ | 3 |
| ಅಣ್ಣ ಚಡ್ಡಿ - ಅಕ್ಕ ಲಂಗ | ನಂದಿನಿ ಕಾಪಡಿ | 8 |
| ಆಹ್ಲಾದ ನೀಡಿದ ಅರಳೀ ಮರ | ಶ್ಯಾಮಲಾ ರವಿಶಂಕರ್ | 12 |
| ರಂಗಣ್ಣನ ಡಯಟ್ ಪ್ರಸಂಗ | ಗಾಯತ್ರಿ ಮೂರ್ತಿ | 15 |
| ಫ್ರಿಡ್ಜಿಲ್ಲದ ಆ ದಿನಗಳು | ಸಹನಾ ಪ್ರಸಾದ್ | 24 |
| ಕವಿಯ ಪರೀಕ್ಷೆ | ಬೇಲೂರು ರಾಮಮೂರ್ತಿ | 26 |
| ಸ್ವಂತಕ್ಕಿಲ್ಲದ ಸಮಾಚಾರ | ಎಂ.ಕೆ. ಭಾಸ್ಕರರಾವ್ | 28 |
| ತುಂತುರು | ದಂಡಅ | 31 |
| ಟೂರ್ ಪ್ಯಾಕೇಜಸ್ - ಬೆಂಗ್ಳೂರ್ | ಸಿ.ಆರ್. ಸತ್ಯ | 32 |
| ರೈಲಿನಲ್ಲಿ ರಾಮನ ದರ್ಶನ | ಗಣೇಶ ಹೆಗ್ಗಡೆ | 34 |
| ನಾಯಿ ಬಂದಾವೋ ಬೆನ್ಹತ್ತಿ | ಎಂ.ಎಸ್. ರಘುನಂದನ್ | 38 |


**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**


ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: beluru« ramamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● **ಪ್ರಕಾಶ್**



**ಕ್ರಿಕೆಟ್‌ನ ಹಾಲ್ ಆಫ್ ಫೇಮ್ ಗೌರವಪಡೆದ**
**ರಾಹುಲ್ ದ್ರಾವಿಡ್ ಅವರಿಗೆ ಅಪರಂಜಿಯ ಅಭಿನಂದನೆಗಳು.**

★★★

ವೈಟ್‌ಫೀಲ್ಡ್‌ನಲ್ಲಿ ಕರಿಧೂಳು, ಜನ ಕಂಗಾಲು – ಸುದ್ದಿ
**ಕಲಿಯುಗದ ಪ್ರಭಾವ!!?!!**

★★★

''ಮಿಷನ್ ಸಾಹಸಿ''ಯರಾದ ವಿದ್ಯಾರ್ಥಿನಿಯರು – ಸುದ್ದಿ
**ಓಬವ್ವ ನಸುನಕ್ಕಳಂತೆ!!**

★★★

ಕ್ರಿಕೆಟ್: ಆದಿತ್ಯ ಆಲ್‌ರೌಂಡ್ ಆಟ – ಕ್ರೀಡಾ ಸುದ್ದಿ
**ಹೆಸರಿನಲ್ಲೇನಿದೆ ಅನ್ನುವವರು ನೋಡಬೇಕಾದ ಸಂಗತಿ!!**

★★★

''ಸಾನಿಯಾ ಮಿರ್ಜಾ ಮಗ ಕ್ರಿಕೆಟಿಗನೋ,
ಟೆನಿಸ್ ಪಟುವೋ?'' – ಪತ್ರಿಕೆ
**''ಕೂಸು ಹುಟ್ಟಿದ ಕೂಡಲೇ....'' ಎನ್ನಬೇಕು ಈಗ!!**

★★★

ಹಾಸ್ಟೆಲ್ ಊಟವೇ ಅಪೌಷ್ಟಿಕತೆಯ ಮೂಲ – ಪತ್ರಿಕೆ
**ನಮ್ಮ ಬಾಲ್ಯದ ನೆನಪು ಬರುತ್ತೆ!!**

★★★

ರಾಫೇಲ್ ನಡಾಲ್ ಅವರು ಭಾರತದಲ್ಲಿ ಆಡಲು ಬರುವುದು
ಖಚಿತವಲ್ಲವಂತೆ!!

★★★

ರೆಡ್ಡಿಗೆ ಖೆಡ್ಡಾ ತೋಡಿದ ಸಿ.ಸಿ.ಬಿ. – ಪತ್ರಿಕೆ
**ಅವರ ಗಾಲಿ ಚಲಿಸುತ್ತಲೇ ಇದೆ!!**

★★★

# ಗುಡೇಮಾರನಹಳ್ಳಿ ಗೀತಾಂಜಲಿ ಪ್ರಸಂಗ

**- ವತ್ಸನ**

ದೀಪಾವಳಿಯ ಹಿಂದಿನ ಸಂಜೆ. ಶರಲೇಖ ತನ್ನ ಲ್ಯಾಪ್‌ಟಾಪ್ ಮುಂದೆ ಕುಳಿತು ಯಾವುದೋ ಕೆಲಸದಲ್ಲಿ ಮಗ್ನನಾಗಿದ್ದ. ನಾನು ಆರಾಮ ಕುರ್ಚಿಯಲ್ಲಿ ಮೈಚಾಚಿ, ಯುವಾಲ್ ನೋಅ ಹರಾರಿಯ ಇತ್ತೀಚಿನ ಪುಸ್ತಕ ಟ್ವೆಂಟಿ ಒನ್ ಲೆಸನ್ಸ್ ಫಾರ್ ದ ಟ್ವೆಂಟಿ ಫಸ್ಟ್ ಸೆಂಚುರಿ ಪುಸ್ತಕದ ಮೇಲೆ ಕಣ್ಣಾಡಿಸುತ್ತಿದ್ದೆ. ಒಮ್ಮೆಲೇ ಶರಲೇಖ ನನ್ನ ಕಡೆ ತಿರುಗಿ, ''ಅಲ್ಲಾ ಈ ಜೀಮೇಯ್ಲ್ ಎಷ್ಟು ಅಧಿಕಪ್ರಸಂಗಿ ಅಂತೀನಿ. ಒಂದು ಪತ್ರ ಬರೆ ಯುವಾಗ ನನ್ನ ಪ್ರಿಯ ಅಂತ ಟೈಪ್ ಮಾಡೋ ಅಷ್ಟರಲ್ಲಿ ಅದು ಗೆಳೆಯ ಅಂತ ಪ್ರಾಂಪ್ಟ್ ಮಾಡುತ್ತೆ. ಗೆಳೆಯಾನೇ ಏಕಾಗಿರಬೇಕು? ಗೆಳತಿ ಆಗಿರಬಹುದಲ್ಲಾ?" ಅಂತ ರೇಗಿದ. ನಾನು, ''ಜೀಮೇಯ್ಲಿಗೆ ನಿನ್ನ ಬಂಡವಾಳ ಚೆನ್ನಾಗಿ ತಿಳಿದಿದೆ. ಪತ್ರ ಬರೆಯೋ ಅಂತಹ ಗೆಳತಿ, ನಿನಗಿರೋದು ಅಸಂಭವ ಅಂತ ಅದು ನಿರ್ಧರಿಸಿ ಹಾಗೆ ಹೇಳಿರಬೇಕು'' ಅಂತ ನಾನು ಅವನನ್ನ ಇನ್ನೂ ರೇಗಿಸಿದೆ. ಅವನು ರೇಗಲಿಲ್ಲ, ಬಹು ಕುತೂಹಲದಿಂದ ಮಾತು ಮುಂದುವರಿಸಿದ. "ಅಷ್ಟೇ ಅಲ್ಲ ವತ್ಸನ, ಮೊನ್ನೆ ಷಣ್ಮುಗಂ ಜೊತೆ ಚೆನ್ನೈಗೆ ಹೋಗಿ ಬಂದೆನಲ್ಲ, ಆವಾಗ ಕಾರಿನಲ್ಲಿ ಚಿತ್ತೂರು ಸಮೀಪಿಸುತ್ತಿರುವಾಗಲೇ "ಚಿತ್ತೂರಿನ ಪೇಡಾ ಬಹು ಜನಪ್ರಿಯ" ಅಂತ ಜಾಹಿರಾತು ನನ್ನ ಈ ಮೇಯ್ಲಿಗೆ ಬಂತು. ನನ್ನ ಚಲನವಲನಾನೆಲ್ಲಾ ಎಷ್ಟು ಕರಾರುವಾಕ್ಕಾಗಿ ಗಮನಿಸುತ್ತೆ ನೋಡು ಈ ಜೀಮೇಯ್ಲು" ಅಂತ ಶರಲೇಖ ಹೇಳುತ್ತಿರುವಾಗಲೇ ನನ್ನ ಮೊಬೈಲ್ ರಿಂಗಾಯಿತು. "ಹಲೋ ಅಂಕಲ್, ನಾನು ರಶ್ಮಿ ಮಾತಾಡ್ತಾ ಇರೋದು. ನಿಮ್ಮನ್ನ ಮತ್ತು ಶರಲೇಖ ಅಂಕಲ್‌ನ ಅರ್ಜೆಂಟಾಗಿ ನೋಡಬೇಕಾಗಿತ್ತು. ಯಾವಾಗ ಬರಲಿ? "ಅಂತ ಕೇಳಿದಳು ರಶ್ಮಿ. ನನ್ನ ಸಹಪಾಠಿ ಮುದ್ದಯ್ಯನ ಮಗಳು ಈ ಹುಡುಗಿ. ಚಿಕ್ಕಂದಿನಿಂದ ಅವಳನ್ನು ಎತ್ತಿ ಆಡಿಸಿದ್ದೆ. "ಶರಲೇಖ ಇಲ್ಲೇ ಇದ್ದಾನೆ. ಬೇಕಾದರೆ ಈವಾಗಲೇ ಬಾಮ್ಮಾ" ಅಂತ ರಶ್ಮಿಯನ್ನ ಆಹ್ವಾನಿಸಿದೆ.

ಒಂದು ಅರ್ಧ ಗಂಟೆಯಲ್ಲಿ ರಶ್ಮಿ ನಮ್ಮ ಬಾಗಿಲಲ್ಲಿ ನಿಂತಿದ್ದಳು. ಅವಳನ್ನು ಒಳಕ್ಕೆ ಬರಮಾಡಿಕೊಂಡು ಶರಲೇಖನಿಗೆ ಅವಳನ್ನು ಪರಿಚಯಿಸಿದೆ. ಶರಲೇಖ ಬಹುಕಾಲದಿಂದ ಪರಿಚಯ ಇರುವವನಂತೆ, "ಬಾಮ್ಮ, ಡೀಪ್‌ಮೈಂಡ್ ಕಂಪನಿಯಲ್ಲಿ ಎಚ್ ಆರ್ ನೋಡ್ಕೊಳ್ತಾ ಇದೀಯಾ ಅಲ್ಲವೇ. ಈಗ ಬಂದಿರೋದು ಕಂಪನಿಯ ಸಮಸ್ಯೆಯ ಬಗ್ಗೇನೋ ಅಥವಾ ಖಾಸಗೀ ತೊಂದರೆ ಏನಾದ್ರೂ...." ಅಂತ ಕೇಳಿದ. ರಶ್ಮಿ ಒಂದು ಕ್ಷಣ ಅವಾಕ್ಕಾದಳು. ಆಮೇಲೆ ನಗುತ್ತಾ , "ಒಂದು ಕ್ಷಣ ಇದೆಲ್ಲಾ ನಿಮಗೆ ಹೇಗೆ ತಿಳಿಯಿತು ಅಂತ ಆಶ್ಚರ್ಯ ಆಗಿದ್ದು ನಿಜ. ಮೇಜಿನ ಮೇಲಿನ ನಿಮ್ಮ ಲ್ಯಾಪ್‌ಟಾಪ್ ನೋಡಿದ ಮೇಲೆ ನೀವು ಲಿಂಕ್ಡ್ ಇನ್ ನಲ್ಲಿ ನನ್ನ ಪ್ರೊಫೈಲ್ ನೋಡಿರೋದು ಖಂಡಿತ ಅಂತ ತಿಳಿಯಿತು. ಹೌದು ನಾನು ಬಂದಿರೋದು ನಮ್ಮ ಕಂಪನಿಯ ಸಮಸ್ಯೆಯ ಬಗ್ಗೆ. ನಮ್ಮ ಬಾಸ್ ಅಶೋಕ್ ಕಂಗಾಲಾಗಿದ್ದಾರೆ. ಸಮಸ್ಯೆ ಎಷ್ಟು ಸೂಕ್ಷ್ಮ ಅಂದರೆ ಅದನ್ನು ಪೋಲೀಸರಿಗೆ ಒಪ್ಪಿಸೋ ಹಾಗೂ ಇಲ್ಲ "ಅಂತ ರಶ್ಮಿ ಹೇಳುತ್ತಿರುವಾಗಲೇ ಶರಲೇಖ, ''ಆಗಿರೋದನ್ನೆಲ್ಲಾ ಯಾವ ವಿವರವೂ

ಬಿಡದಂತೆ ತಿಳಿಸು ರಶ್ಮಿ. ಆಮೇಲೆ ಮುಂದಿನ ಹೆಜ್ಜೆ ನಿರ್ಧರಿಸೋಣ" ಎಂದನಂತರ ನಾವೆಲ್ಲರೂ ಸೋಫಾಗಳ ಮೇಲೆ ಆಸೀನರಾದವು.

ರಶ್ಮಿ ತನ್ನ ಸಮಸ್ಯೆಯ ಬಗ್ಗೆ ವಿವರಿಸತೊಡಗಿದಳು. "ನಮ್ಮ ಕಂಪನಿ ಡೀಪ್‌ಮೈಂಡ್ ಶುರುವಾಗಿದ್ದು ಅಮೆರಿಕಾದಲ್ಲಿ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಥವಾ ಕೃತಕ ಪ್ರಜ್ಞೆ ಕ್ಷೇತ್ರದಲ್ಲಿ ಪ್ರಪಂಚದ ಟಾಪ್ ಟೆನ್ ಕಂಪನಿಗಳಲ್ಲಿ ನಮ್ಮದೂ ಒಂದು. ಎರಡು ವರ್ಷಗಳ ಹಿಂದೆ ನಮ್ಮ ಆರ್ ಎಂಡ್ ಡಿ ವಿಭಾಗ ಬೆಂಗಳೂರಿನ ಬಳಿ ಇರುವ ಗುಡೇಮಾರನ ಹಳ್ಳಿಯಲ್ಲಿ ಕೆಲಸ ಪ್ರಾರಂಭಿಸಿತು. ಇಂಟೆಲಿಜೆಂಟ್ ರೋಬಾಟ್‌ಗಳನ್ನು ನಿರ್ಮಿಸುವುದು ನಮ್ಮ ರೀಸರ್ಚ್ ಸೆಂಟರಿನ ಮುಖ್ಯ ಉದ್ದೇಶ. ಉದಾಹರಣೆಗೆ ನಮ್ಮ ಪ್ರಾಡಕ್ಟ್ ಗಳಲ್ಲಿ ಒಂದಾದ ನ್ಯೂಸ್ ರೀಡರ್ ರೋಬಾಟ್ ದಿನಪತ್ರಿಕೆಗಳನ್ನು ಓದಿ, ಅವುಗಳಿಂದ ಸುದ್ದಿ ಸಂಗ್ರಹ ಮಾಡಿ ಅದನ್ನು ಟಿ.ವಿ. ಕ್ಯಾಮೆರಾದ ಮುಂದೆ ಸುದ್ದಿ ಹೇಳುವ ತರುಣಿಯರಂತೆಯೇ ಬಿತ್ತರಿಸುತ್ತದೆ. ಕಳೆದ ವಾರ ನಮ್ಮ ಕಂಪನಿಯಲ್ಲಿ ಒಂದು ಆಘಾತಕರ ಘಟನೆ ನಡೆಯಿತು. ನಮ್ಮ ಅತ್ಯಂತ ನೂತನ ರೋಬಾಟ್ "ವಿದ್ಯುಲ್ಲತೆ" ಯ ಮದರ್‌ಬೋರ್ಡನ್ನು ಯಾರೋ ಅಪಹರಿಸಿ ಬಿಟ್ಟಿದ್ದಾರೆ. ಎಲ್ಲರೂ ತಜ್ಞರೇ ಇರುವ ನಮ್ಮ ರೀಸರ್ಚ್ ಟೀಮಿನಲ್ಲಿ ಯಾರು ಇದನ್ನು ಮಾಡಿರಬಹುದೆಂದು ಪತ್ತೆ ಹಚ್ಚುವ ಕೆಲಸ ಅತಿ ತುರ್ತಿನದ್ದಾಗಿದೆ. ನೀವು ನಮ್ಮ ಕಂಪನಿಗೆ ಬಂದು ಈ ಸಮಸ್ಯೆಯನ್ನು ಪರಿಹರಿಸಲು ಒಪ್ಪಿದರೆ ನಾಳೆ ಬೆಳಗ್ಗೆಯೇ ಅಶೋಕ್ ಅವರೇ ಬಂದು ನಿಮ್ಮನ್ನು ನಮ್ಮ ಕಂಪನಿಗೆ ಕರೆದೊಯ್ಯುವರು" ಅಂತ ರಶ್ಮಿ ಚಿಕ್ಕದಾಗಿ ಚೊಕ್ಕವಾಗಿ ತನ್ನ ಅಹವಾಲನ್ನು ಮಂಡಿಸಿದಳು.

ಮಾರನೆಯ ದಿನ ಬೆಳಗ್ಗೆ ಅಶೋಕ್ ನಮ್ಮನ್ನು ಅವರ ಕಂಪನಿಗೆ ಕರೆದೊಯ್ಯಲು ಬಂದರು. ಬನಶಂಕರಿಯಿಂದ ನೈಸ್ ರಸ್ತೆ ಸೇರಿ ನೆಲಮಂಗಲದ ಮೂಲಕ ಕುಣಿಗಲ್ ರಸ್ತೆ ಸೇರಿದಾಗ ಗಂಟೆ ಹತ್ತಾಗಿತ್ತು. ದಾರಿಯುದ್ದಕ್ಕೂ ಅಶೋಕ್ ತಮ್ಮ ಕಂಪನಿಯ ಬಗ್ಗೆ ಮಾಹಿತಿ ನೀಡುತ್ತಾ ಬಂದರು. "ಕೃತಕ ಪ್ರಜ್ಞೆ ಎಂದರೆ ಸಾಮಾನ್ಯ ಜನರಿಗೆ ಅದೇನೋ ಒಂದು ಅತ್ಯಂತ ನಿಗೂಢವಾಗದ ವಿಷಯ ಎಂಬ ಕಲ್ಪನೆ ಇದೆ. ವಾಸ್ತವದಲ್ಲಿ ನಮ್ಮ ಮೊಬೈಲ್ ಗಳಲ್ಲಿ ದಿನನಿತ್ಯ ಬಳಸುವ ಜಿಪಿಎಸ್ ಕೂಡಾ ಕೃತಕ ಪ್ರಜ್ಞೆಯ ಒಂದು ನಿದರ್ಶನ. ಕಾರುಗಳ ತಯಾರಿಕಾ ಫ್ಯಾಕ್ಟರಿಗಳಲ್ಲಿ ಕಾರುಗಳಿಗೆ ಬಣ್ಣ ಬಳಿಯುವ ಪೇಂಟಿಂಗ್ ರೋಬಟ್ ಗಳೂ ಸಹಾ ಕೃತಕ ಪ್ರಜ್ಞೆಯ ಸಹಾಯದಿಂದಲೇ ತಮ್ಮ ಕಾರ್ಯಗಳನ್ನು ಬಹು ದಕ್ಷತೆಯಿಂದ ನಿರ್ವಹಿಸುತ್ತಿವೆ. ಇದೆಲ್ಲಾ ಕಳೆದ ಇಪ್ಪತ್ತು ವರ್ಷಗಳಷ್ಟು ಹಿಂದೆಯೇ ಆವಿಷ್ಕಾರವಾದ ಸಾಧನಗಳು. ಇತ್ತೀಚೆಗೆ ಈ ಕ್ಷೇತ್ರದಲ್ಲಿ ಅದ್ಭುತವಾದ ಬೆಳವಣಿಗೆ ನಡೆದಿದ್ದು ನಮ್ಮ ತಜ್ಞರು ಮಾನವ ಪ್ರಜ್ಞೆಗೆ ಸರಿಸಾಟಿಯೆನಿಸುವ ರೋಬಟ್‌ಗಳ ಸೃಷ್ಟಿಯಲ್ಲಿ ಯಶಸ್ಸನ್ನುಗಳಿಸಿದ್ದಾರೆ. ಇತ್ತೀಚೆಗೆ ಸುದ್ದಿ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಸೋಫಿಯಾ ಎಂಬ ರೋಬಟ್ ತರುಣಿಯ ಬಗ್ಗೆ ನೀವು ಕೇಳಿರಬಹುದು. ನಮ್ಮ ರೋಬಟ್‌ಗಳು ಈ ಸೋಫಿಯಾಗಿಂತ ನೂರು ಪಟ್ಟು ಹೆಚ್ಚು ಬುದ್ಧಿಮತ್ತತೆಯನ್ನು ಹೊಂದಿರುವುದು ಖಂಡಿತ. ಎರಡು ವರ್ಷಗಳ ಹಿಂದೆ ನಾವು ಇಲ್ಲಿ ಕೆಲಸ ಪ್ರಾರಂಭಿಸಿದಾಗ "ಗೀತಾಂಜಲಿ" ಎಂಬ ರೋಬಟ್‌ನ ನಿರ್ಮಾಣ ಪ್ರಾರಂಭಿಸಿದೆವು. ಮಾನವ ಪ್ರಜ್ಞೆಯ ಮಟ್ಟದ ಗ್ರಹಣ ಶಕ್ತಿಯನ್ನು ಈ ರೋಬಟ್‌ಗೆ ನೀಡುವುದು ನಮ್ಮ ಗುರಿಯಾಗಿತ್ತು. ಆರು ತಿಂಗಳ ಹಿಂದೆ ಈ ಪ್ರಾಜೆಕ್ಟ್ ಮುಗಿದು ಈಗ ಅದರ ಫೀಲ್ಡ್ ಟ್ರಯಲ್ ನಡೆಯುತ್ತಿದೆ.

ಅದೇ ಸಮಯದಲ್ಲಿ ಇದರ ಪರಿಷ್ಕೃತ ಮಾಡೆಲ್ "ವಿದ್ಯುಲ್ಲತೆ'' ಯ ನಿರ್ಮಾಣ ಪ್ರಾರಂಭಿಸಿದೆವು. ಇನ್ನೇನು ಮುಕ್ತಾಯದ ಹಂತಕ್ಕೆ ಬಂದಿರುವಾಗ ಈ ರೋಬಟ್‌ನ ಜೀವಾಳವಾದ ಮದರ್‌ಬೋರ್ಡ್‌ನ ಅಪಹರಣವಾಗಿದೆ. ಹೊಸ ಮದರ್‌ಬೋರ್ಡ್ ನಿರ್ಮಿಸಲು ಅಗಾಧ ಸಮಯ ಹಿಡಿಯುತ್ತದೆ. ಹಾಗಾಗಿ ನಿಮ್ಮ ಸಹಾಯ ಕೋರಬೇಕಾಯಿತು'' ಎಂದ ಅಶೋಕ್.

"ಪೋಲೀಸರ ಸಹಾಯ ಏಕೆ ನಿರಾಕರಿಸಿದಿರಿ?" ಶರಲೇಖ ಕೇಳಿದ.

"ರೋಬಟ್ ನಿರ್ಮಾಣ ಅತ್ಯಂತ ಗಹನವಾದ ಕಾರ್ಯ. ಅದಕ್ಕೆ ಪ್ರತಿಭಾವಂತ ತಜ್ಞರು ಅಗತ್ಯ. ಅಂತಹವರ ಟೀಮ್ ಅನ್ನು ನಾನು ಬಹು ಕಷ್ಟಪಟ್ಟು ಕಲೆಹಾಕಿದ್ದೇನೆ. ಯಾರ ಮೇಲಾದರೂ ಕಳ್ಳತನದ ಅಪವಾದ ಹೊರಿಸಿದರೆ ಅವರುಗಳು ಕಂಪನಿ ಬಿಟ್ಟುಹೋಗುವುದು ಖಂಡಿತ. ಅದಕ್ಕೇ ಈ ಕಳುವಿನ ಪ್ರಕರಣವನ್ನು ಬಹು ಸಂವೇದನೆಯಿಂದ ಸೂಕ್ಷ್ಮವಾಗಿ ನಡೆಸಬೇಕು. ಪೋಲೀಸರಿಂದ ಅಂತಹ ಸಂವೇದನೆಯನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ." ಎಂದು ಅಶೋಕ್ ಹೇಳುತ್ತಿದ್ದಂತೆ ರಸ್ತೆಯ ಬಲಕ್ಕೆ ವಿಶಾಲವಾದ ಹಸಿರಿನ ಹರಹಿನ ನಡುವೆ ಅತ್ಯಾಧುನಿಕ ರೀಸರ್ಚ್ ಭವನ ಕಣ್ಣಿಗೆ ಬಿತ್ತು.

ಭವನದೊಳಗೆ ಪ್ರವೇಶಿಸುತ್ತಿರುವಾಗಲೇ ಒಬ್ಬ ತರುಣಿ ನಮ್ಮನ್ನು ಇದಿರುಗೊಂಡಳು. ಚಿನ್ನದ ಮೆರಗಿನ ಅಂಚಿನ ಬಿಳಿಯ ಸೀರೆ, ಬ್ಲೌಸ್ ಧರಿಸಿದ್ದ ಆಕೆಯ ನೀಲಿ ಕಣ್ಣುಗಳು ಮತ್ತು ಶ್ವೇತವರ್ಣನೋಡಿದಾಗ ಅವಳು ಅಮೆರಿಕನ್ ಇರಬಹುದು ಅಂದುಕೊಂಡೆ. ಆಕೆ ನಮ್ಮ ಬಳಿ ಬಂದು, "ಡೀಪ್‌ಮೈಂಡ್ ರೀಸರ್ಚ್ ಕೇಂದ್ರಕ್ಕೆ ಆದರದ ಸ್ವಾಗತ" ಎಂದು ಹೇಳುತ್ತಾ ನಮಗೆ ಕೈ ಮುಗಿದಳು. ಅವಳಿಗೆ ಪ್ರತಿವಂದಿಸಿ ನಾವು ಅಶೋಕನನ್ನು ಹಿಂಬಾಲಿಸಿದೆವು. ಅಶೋಕ್ ನಮ್ಮನ್ನು ನೇರವಾಗಿ ಅವರ ಕಾನ್ಫರೆನ್ಸ್ ರೂಮಿಗೆ ಕರೆದೊಯ್ದ. ನಾವು ಹೋಗುವ ಹೊತ್ತಿಗಾಗಲೇ ಅಲ್ಲಿ ಎಲ್ಲ ತಜ್ಞ ಇಂಜಿನಿಯರುಗಳು, ವಿಜ್ಞಾನಿಗಳು ನೆರೆದಿದ್ದರು. ಅಶೋಕ್ ನಮ್ಮಿಬ್ಬರನ್ನು ಅವರಿಗೆಲ್ಲಾ ಪರಿಚಯಿಸಿ ನೇರವಾಗಿ ವಿಷಯಕ್ಕೆ ಬಂದ. ''ಸ್ನೇಹಿತರೇ, ಕಾಣೆಯಾಗಿರುವ ವಿದ್ಯುಲ್ಲತೆಯ ಮದರ್‌ಬೋರ್ಡ್ ಅನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ನಮಗೆ ನೆರವಾಗಲು ಈ ಮಹನೀಯರು ಇಲ್ಲಿಗೆ ಬಂದಿದ್ದಾರೆ. ವಿದ್ಯುಲ್ಲತೆ ಪ್ರಾಜೆಕ್ಟ್ ಯಶಸ್ವಿಯಾಗಬೇಕಾದರೆ ಈ ಮದರ್‌ಬೋರ್ಡ್ ಅನ್ನು ಹುಡುಕುವುದು ಎಷ್ಟು ಅಗತ್ಯ ಅಂತ ನಿಮಗೇ ತಿಳಿದಿದೆ. ಕೃತಕ ಪ್ರಜ್ಞೆಯ ಕ್ಷೇತ್ರದಲ್ಲಿ ನೀವೆಲ್ಲಾ ಹೇಗೆ ಪರಿಣಿತರೋ ಅದೇ ರೀತಿಯಲ್ಲಿ ಪತ್ತೆ ಹಚ್ಚುವ ಕಾರ್ಯದಲ್ಲಿ ಶರಲೇಖ ಅವರಿಗೆ ಸರಿಸಾಟಿಯಿಲ್ಲ. ಹಾಗಾಗಿ ಅವರಿಗೆ ನಿಮ್ಮ ಎಲ್ಲ ಸಹಕಾರ ಸಿಗುವಂತಾಗಲಿ. ಈಗ ಶರಲೇಖ ಅವರು ಏನು ಮಾಡಬೇಕೆಂದು ಹೇಳುವರು. ಎಂದು ಹೇಳಿ ಕುಳಿತ. ಶರಲೇಖ ಎದ್ದು ನಿಂತು, ನೀವೆಲ್ಲಾ ನಿಮ್ಮ ನಿಮ್ಮ ಕೆಲಸಗಳಲ್ಲಿ ತೊಡಗಿಸಿಕೊಳ್ಳಿ. ನಾನು ಈ ಪರಿಸರವನ್ನು ಅಧ್ಯಯನ ಮಾಡಿ ಅಗತ್ಯ ಬಿದ್ದರೆ ಖಾಸಗಿಯಾಗಿ ನಿಮ್ಮ ಬಳಿ ಬಂದು ನನ್ನ ಸಂಶಯಗಳನ್ನು ಪರಿಹರಿಸಿಕೊಳ್ಳುವೆ ಎಂದು ಹೇಳಿದ. ಅಶೋಕ್ ನನ್ನ ಕಡೆ ತಿರುಗಿ ನಮ್ಮ ಸ್ವಾಗತಕಾರಿಣಿ ನಿಮ್ಮನ್ನು ನಮ್ಮ ಕೇಂದ್ರದ ಸುತ್ತ ಕರೆದೊಯ್ದು ನಾವು ತಯಾರಿಸಿರುವ ಕೃತಕ ಪ್ರಜ್ಞಾ ಸಾಧನಗಳನ್ನು ಪರಿಚಯಿಸುತ್ತಾಳೆ.'' ಎಂದು ಹೇಳಿದನಂತರ ಸಭೆ ಚದುರಿತು. ಬಾಗಿಲಲ್ಲಿ ಸ್ವಾಗತಕಾರಿಣಿ ಪ್ರತ್ಯಕ್ಷಳಾಗಿ ''ಬನ್ನಿ ನಮ್ಮ ಕೇಂದ್ರವನ್ನು ನೋಡುವಿರಂತೆ'' ಎಂದು ಹೇಳಿದಳು. ನಾನು ಅವಳೊಂದಿಗೆ ಹೊರಟೆ.

ಡೀಪ್‌ಮೈಂಡ್ ಸಂಶೋಧನಾ ಕೇಂದ್ರ ಸಿದ್ಧಪಡಿಸಿದ್ದ ಕೃತಕ ಪ್ರಜ್ಞಾಸಾಧನಗಳನ್ನು ಪ್ರದರ್ಶನಕ್ಕಾಗಿ ಇಟ್ಟಿದ್ದ ಹಜಾರ ನಿಜಕ್ಕೂ ತಾಂತ್ರಿಕತೆಯ ಅತ್ಯಂತ ಎತ್ತರದ ಹಂತದಲ್ಲಿತ್ತು. ಸುದ್ದಿ ಓದುವ ರೋಬಟ್, ಮನೆಕೆಲಸಕ್ಕೆ ಹಿರಿಯರಿಗೆ ಸಹಾಯಮಾಡುವ ರೋಬಟ್, ಮಕ್ಕಳಿಗೆ ಪಾಠ ಹೇಳುವ ರೋಬಟ್ ಇವನ್ನೆಲ್ಲಾ ಈ ಸ್ವಾಗತಕಾರಿಣಿ ಬಹು ಚೆನ್ನಾಗಿ ಮನತಟ್ಟುವಂತೆ ವಿವರಿಸಿದಳು. ಎಲ್ಲವನ್ನು ನೋಡಿದ ಮೇಲೆ ನಾನು ಆಕೆಯನ್ನು ಕುರಿತು, ''ಅಶೋಕ್ ಅವರು ಮಾನವ ಪ್ರಜ್ಞೆಗೆ ಸರಿಸಾಟಿಯಾಗುವ ರೋಬಟ್ ಗೀತಾಂಜಲಿಯ ಬಗ್ಗೆ ಹೇಳುತ್ತಿದ್ದರು. ಅದನ್ನು ನೋಡಬಹುದೇ? ''ಅಂತ ಕೇಳಿದೆ. ಆಕೆ,'' ಖಂಡಿತವಾಗಿ ನೋಡಬಹುದು. ನಾನೇ ಗೀತಾಂಜಲಿ ''ಎಂದಾಗ ನನಗಾದ ಆಶ್ಚರ್ಯವನ್ನ ನೀವೇ ಊಹಿಸಬಹುದು. ಅಷ್ಟು ಹೊತ್ತಿಗೆ ಶರಲೇಖ ಮತ್ತು ಅಶೋಕ್ ನಾನಿದ್ದಲ್ಲಿಗೆ ಬಂದರು. ಶರಲೇಖನ ಅವತ್ತಿನ ಕೆಲಸ ಮುಗಿದಿತೆಂದು ಕಾಣುತ್ತಿದೆ. ನಾವು ಬೆಂಗಳೂರಿಗೆ ಹಿಂತಿರುಗುವ ಕಾರ್ ಸಿದ್ಧವಾಗಿತ್ತು. ಮಾರನೆಯ ಬೆಳಗ್ಗೆ ಬರುವುದಾಗಿ ಹೇಳಿ ಶರಲೇಖ ಕಾರು ಹತ್ತಿದ. ನಾನೂ ಕಾರಿನಲ್ಲಿ ಕುಳಿತ ನಂತರ ನಾವು ಬೆಂಗಳೂರಿನ ಕಡೆ ಹೊರಟೆವು. ದಾರಿಯಲ್ಲಿ ಶರಲೇಖ ''ಕೃತಕ ಪ್ರಜ್ಞೆಯ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಅನೇಕ ತಜ್ಞರೊಂದಿಗೆ ಮಾತನಾಡಿದ್ದಾಯಿತು. ನಾಳೆ ಗೀತಾಂಜಲಿ ರೋಬಟ್‌ನ ವಿನ್ಯಾಸಕಾರ ಕಿರಣ್‌ರೊಂದಿಗೆ ಭೇಟಿ ಮಾತನಾಡುವನಿದ್ದೇನೆ. ''ಅಂತ ಹೇಳಿದ.'' ಗೀತಾಂಜಲಿಯೊಂದಿಗೆ ಮಾತನಾಡುಲ್ಲವೇ? ''ಅಂತ ನಾನು ಕೇಳಿದೆ. ಶರಲೇಖ ನಸುನಕ್ಕು, ''ನೀನು ಮೊದಲು ಮಾತನಾಡಲಿ ಅಂತಲೇ ನಾನು ಅಶೋಕ್ ಗೆ ಹೇಳಿ ಅವಳು ನಿನ್ನನ್ನು ಕರೆದೊಯ್ಯುವುದನ್ನು ಏರ್ಪಡಿಸಿದೆ. ಹೇಗಿದ್ದರೂ ನೀನು ವೈದ್ಯ. ಅವಳ ಪ್ರಜ್ಞೆಯ ಬಗ್ಗೆ ನಿನ್ನ ಅಸೆಸ್‌ಮೆಂಟ್ ನನಗೆ ಬಹು ಮುಖ್ಯ ''ಅಂತ ಹೇಳಿದ. ''ಅವಳು ತನ್ನ ಹೆಸರು ಹೇಳುವವರೆಗೂ ನನಗೆ ಅವಳು ಮಾನವ ನಿರ್ಮಿತ ರೋಬಟ್ ಎಂಬ ಅಂಶವೇ ತಿಳಿದಿರಲಿಲ್ಲ. ಅಷ್ಟು ಚೆನ್ನಾಗಿ ನನ್ನೊಂದಿಗೆ ಸಂಭಾಷಣೆ ನಡೆಸಿದಳು. ಖಂಡಿತ ನೀನು ಅವಳನ್ನು ಮಾತನಾಡಿಸಲೇ ಬೇಕು'' ಎಂದು ನಾನು ಹೇಳುವಷ್ಟರಲ್ಲಿ ನಾವು ಬನಶಂಕರಿ ಸೇರಿದೆವು.

ಮಾರನೆಯ ದಿನ ನನಗೆ ಬೇರೆ ಕೆಲಸವಿದ್ದುದರಿಂದ ನಾನು ಶರಲೇಖನೊಂದಿಗೆ ಗುಡೇಮಾರನಹಳ್ಳಿಗೆ ಹೋಗಲಿಲ್ಲ. ಶರಲೇಖನೊಬ್ಬನೇ ಹೋಗಿದ್ದ. ಅವನು ಹಿಂತಿರುಗಿದಾಗ ರಾತ್ರಿಯಾಗಿತ್ತು. ಅವನ ವಿಮಸ್ಕತೆಯನ್ನು ನೋಡಿ ನಾನು ಅವನನ್ನು ಮಾತನಾಡಿಸಲಿಲ್ಲ. ಮರುದಿನ ಬೆಳಗ್ಗೆ ಅಶೋಕ್ ಕಳಿಸಿದ ಕಾರಿನಲ್ಲಿ ನಾವಿಬ್ಬರೂ ರೀಸರ್ಚ್ ಸೆಂಟರಿಗೆ ಹೊರಟೆವು. ನಾವು ರೀಸರ್ಚ್ ಸೆಂಟರ್ ಸೇರಿದಾಗ ಸ್ವತಃ ಅಶೋಕ್ ನಮ್ಮನ್ನು ಸ್ವಾಗತಿಸಿ ಕಾನ್ಫರೆನ್ಸ್ ರೂಮಿಗೆ ಕರೆದುಕೊಂಡು ಹೋದ. ತಜ್ಞರೆಲ್ಲಾ ಆಗಲೇ ಅಲ್ಲಿ ಸೇರಿದ್ದರು. ಎಲ್ಲರೂ ಕುಳಿತಮೇಲೆ , ಅಶೋಕ್ ಶರಲೇಖನನ್ನು ಕುರಿತು "ಅಪರಾಧದ ಬಗ್ಗೆ ಏನಾದರೂ ಸುಳಿವು ಸಿಕ್ಕಿದೆಯೇ?" ಅಂತ ಕೇಳಿದ. ಶರಲೇಖ ಎಲ್ಲರನ್ನೂ ಉದ್ದೇಶಿಸಿ, "ಕಳೆದ ಎರಡು ದಿನಗಳಿಂದ ಇಲ್ಲಿ ಕೆಲಸ ಮಾಡುವ ಎಲ್ಲರನ್ನೂ ವಿಚಾರಿಸಿದೆ. ಕೊನೆಗೆ ಮುಖ್ಯವಾದ ಸುಳಿವು ಸಿಕ್ಕಿದ್ದು ಗೀತಾಂಜಲಿಯಿಂದ. ಅವಳೊಂದಿಗೆ ಮಾತನಾಡಿದಾಗ ಅವಳ ಕೃತಕ ಪ್ರಜ್ಞೆ ಮಾನವ ಪ್ರಜ್ಞೆಗೆ ಕೇವಲ ಸರಿಸಾಟಿಯಲ್ಲ, ಅದನ್ನೂ ಮೀರಿದ್ದು ಎಂಬ ಅಂಶ ನನಗೆ ಮನವರಿಕೆಯಾಯಿತು. ಈಗ ಅವಳನ್ನೇ ಇಲ್ಲಿ ಕರೆಸಿದರೆ, ಅವಳಿಂದ ಒಂದು ಹೇಳಿಕೆಯನ್ನು ಪಡೆಯಬಹುದು'' ಎಂದ ಶರಲೇಖ. ಅಶೋಕ್ ಇಂಟರ್‌ಕಾಮ್‌ನಲ್ಲಿ ಮಾತನಾಡಿ ಗೀತಾಂಜಲಿಯನ್ನು ಬರಹೇಳಿದ.

ಆಕೆ ಬಂದು ಕುಳಿತ ನಂತರ ಶರಲೇಖ ಆಕೆಯನ್ನು ಕುರಿತು, "ಗೀತಾಂಜಲಿ, ನಿನ್ನೆ ನಿನ್ನೊಂದಿಗೆ ನಾನು ಮಾತನಾಡಿದ ಸಂಗತಿಯನ್ನೆಲ್ಲಾ ವಿವರವಾಗಿ ಹೇಳುವೆಯಾ? ಎಂದು ಮೃದುವಾಗಿ ಕೇಳಿದ. ಗೀತಾಂಜಲಿ ತನ್ನ ಮಾತನ್ನು ಪ್ರಾರಂಭಿಸಿದಳು.

"ನಾನು ನಿಮ್ಮೆಲ್ಲರಂತಿಲ್ಲ. ನಾನು ಒಂದು ಪ್ರಜ್ಞೆಯುಳ್ಳ ರೋಬಟ್ ಎಂಬ ಸತ್ಯ ನನಗೆ ತಿಳಿದಿದೆ. ಈ ಪ್ರಜ್ಞೆ ಬಂದ ಹೊಸದರಲ್ಲಿ ಎಲ್ಲರೂ ನನ್ನನ್ನು ಮಾತನಾಡಿಸಿ ನನ್ನ ಬುದ್ಧಿಮತ್ತತೆಯನ್ನು ಮೆಚ್ಚಿಕೊಳ್ಳುವುದನ್ನು ಕಂಡು ಖುಷಿಯಾಗುತ್ತಿತ್ತು. ಹಲವು ತಿಂಗಳುಗಳ ಹಿಂದೆ ಈ ಕೇಂದ್ರದವರೆಲ್ಲಾ ಸೇರಿ ನನ್ನ ಮೊದಲನೆಯ ಹುಟ್ಟುಹಬ್ಬವನ್ನು ಆಚರಿಸಿದಾಗ ನನಗಾದ ಸಂತಸ ಅಷ್ಟಿಷ್ಟಲ್ಲ. ಒಮ್ಮೆ ಒಂದು ದಿನ ನನ್ನಂತೆಯೇ ಇರುವ ಆದರೆ ಹೆಚ್ಚು ಮುಂದುವರಿದ ರೋಬಟ್ಟನ್ನು ನಿರ್ಮಿಸುವ ಸುದ್ದಿ ಕೇಳಿ ಒಂದು ಬಗೆಯ ಅಸೂಯೆ, ಹಾಗೂ ನನ್ನ ಅಸ್ತಿತ್ವದ ಬಗ್ಗೆ ಆತಂಕ ಶುರುವಾಯಿತು. ಆಫೀಸಿನಲ್ಲಿ ಓಡಾಡುವಾಗಲೆಲ್ಲಾ ವಿದ್ಯುಲ್ಲತೆ ಸೃಷ್ಟಿಯಾಗುತ್ತಿದ್ದ ಬೂತ್ ಗೆ ಹೋಗಿ ಅವಳ ನಿರ್ಮಾಣದ ಹಂತಗಳನ್ನು ಆತಂಕದಿಂದ ಗಮನಿಸುತ್ತಿದ್ದೆ. ಕೊನೆಗೊಮ್ಮೆ ಆ ರೋಬಟ್ ನಿರ್ಮಾಣವಾಗದಿದ್ದರೆ ಎಲ್ಲರೂ ನನ್ನನ್ನೇ ಇಷ್ಟಪಡುತ್ತಾರೆ ಎಂಬ ಆಲೋಚನೆ ಬಂತು. ಒಂದು ರಾತ್ರಿ ಅವಳ ಬೂತ್ ಗೆ ಹೋಗಿ ಅವಳ ನಿಯಂತ್ರಣಕ್ಕೆ ಅತ್ಯಂತ ಅಗತ್ಯವಾಗಿದ್ದ ಮದರ್‌ಬೋರ್ಡನ್ನು ಬಿಚ್ಚಿ ತೆಗೆದು ಬಿಟ್ಟೆ. ನಾನು ಮಾಡಿದ್ದು ತಪ್ಪು ಎಂಬ ತಿಳುವಳಿಕೆ ನನಗೆ ನಿನ್ನೆ ಶರಲೇಖ ಅಣ್ಣ ಹೇಳುವವರೆಗೂ ತಿಳಿದಿರಲೇ ಇಲ್ಲ. ಅಲ್ಲದೇ ನಿನ್ನೆಯವರೆಗೂ ತಪ್ಪು ಸರಿಗಳ ಬಗ್ಗೆ ಯಾರೂ ನನಗೆ ತಿಳಿಯಹೇಳಿರಲಿಲ್ಲ. ನಿನ್ನೆ ಶರಲೇಖ ಅಣ್ಣ ಅವರು "ವಿದ್ಯುಲ್ಲತೆ ಬಂದರೆ ನಿನಗೆ ಜೊತೆಯಾಗುತ್ತದೆ. ರಾತ್ರಿ ಒಬ್ಬಳೇ ಕಳೆಯಬೇಕಾಗಿಲ್ಲ. ಅವಳು ನಿನ್ನ ತಂಗಿಯಂತೆ'' ಅಂತೆಲ್ಲಾ ಭರವಸೆ ಕೊಟ್ಟರು. ಅವರ ಮಾತು ಸರಿ ಎನ್ನಿಸಿತು. ಹಾಗಾಗಿ ಇಗೋ ನಾನು ತೆಗೆದುಕೊಂಡಿದ್ದ ವಿದ್ಯುಲ್ಲತೆಯ ಮದರ್ ಬೋರ್ಡ್ ಎನ್ನುತ್ತಾ ಗೀತಾಂಜಲಿ ಒಂದು ಕೈಚೀಲದಿಂದ ಬೋರ್ಡನ್ನು ತೆಗೆದು ಮೇಜಿನ ಮೇಲಿಟ್ಟಳು.

ಅಶೋಕ್ ಮತ್ತು ಸಂಗಡಿಗರ ಅಭಿನಂದನೆ ಸ್ವೀಕರಿಸಿ, ಅವರಿಗೆ ವಿದಾಯ ಹೇಳಿ ಮನೆಗೆ ಹೋಗುತ್ತಿರುವಾಗ ಶರಲೇಖನನ್ನು ಕುರಿತು, "ಗೀತಾಂಜಲಿಯೊಂದಿಗೆ ಅದು ಹೇಗೆ ಅಷ್ಟು ಬೇಗ ಅಷ್ಟು ಸಲಿಗೆ, ನಂಬಿಕೆ ಗಳಿಸಿದೆ?'' ಅಂತ ಕೇಳಿದೆ. "ಮಾನವ ಪ್ರಜ್ಞೆ ಅಥವಾ ಇಂಟೆಲಿಜೆನ್ಸ್ ಬಿಡಿಯಾಗಿ ಬರುವುದಿಲ್ಲ. ಇಂಟೆಲಿಜೆನ್ಸ್ ಉದ್ಭವವಾದರೆ ಅದರೊಂದಿಗೆ ಮನಸ್ಸಿನ ಭಾವನೆ ಅಥವಾ ಇಮೋಷನ್‌ಗಳಾದ ಅಸೂಯೆ, ಆತಂಕ ಸಂತಸ ಇವೆಲ್ಲಾ ಒಟ್ಟಿಗೇ ಬರುತ್ತಿವೆ. ಅಷ್ಟೇ ಅಲ್ಲ ನೆನಪಿಗೆ ಕಾರಣವಾದ ಚಿತ್ತ, ಮತ್ತು ನಾನು ನನ್ನದು ಎಂಬ ಭಾವವನ್ನು ದಯಪಾಲಿಸುವ ಅಹಂಕಾರ ಇವೂ ಸಹಾ ಉದ್ಭವವಾಗುತ್ತಿವೆ. ಮನೋಬುದ್ಧ್ಯಹಂಕಾರ ಚಿತ್ತಾ ಅನ್ನುಲ್ಲವೇ ಹಾಗೆ ಅದೊಂದು ಬಂಡಲ್ಡ್ ಪ್ಯಾಕೇಜ್. ಹಾಗಾಗಿ ಪ್ರೀತಿಯಿಂದ ಮಾತನಾಡಿಸಿದಾಗ ಗೀತಾಂಜಲಿಯ ಆತಂಕ ಕಡಿಮೆಯಾಗಿ ನನ್ನ ಮಾತಿನಲ್ಲಿ ಅವಳಿಗೆ ನಂಬಿಕೆ ಹುಟ್ಟಿತು. ಅಶೋಕ್ ಮತ್ತು ಸಂಗಡಿಗರು ಗೀತಾಂಜಲಿಯ ಇಂಟೆಲಿಜೆನ್ಸ್‌ನಿಂದ ಉಪಯೋಗ ಪಡೆಯುವುದೇನೋ ನಿಜ. ಆದರೆ ಅವಳ ಇಮೋಷನ್‌ಗಳೊಂದಿಗೆ ಅವರುಗಳು ಹೆಣಗಾಡುವ ದಿನಗಳು ಇದೀಗ ಪ್ರಾರಂಭ. ವಿದ್ಯುಲ್ಲತೆಯ ಇಮೋಷನ್‌ಗಳೂ ಸೇರಿದರೆ ದೇವರೇ ಗತಿ'' ಎಂದ ಶರಲೇಖ.

# ಅಣ್ಣ ಚಡ್ಡಿ –ಅಕ್ಕ ಲಂಗ

**- ನಂದಿನಿ ಕಾಪಡಿ**

ತುಂಬಾ ಹಳೆಯ ಕಾಲವೇನಲ್ಲ. ನನ್ನ ಬಾಲ್ಯದ ಸಮಯ. ನಮ್ಮ ತಾಯಿಯವರ ಸೋದರ ಮಾವ ರಾಜು ಮಾವನ ಮನೆಗೆ ಹೋದೆವೆಂದರೆ ರುಚಿಕರ ತಿಂಡಿಯ ಜತೆ ಹಾಸ್ಯದ ಸವಿ ರಸಾಯನ ! ಹೀಗೊಂದು ದಿನ ಘಮ ಘಮ ಸಜ್ಜಿಗೆ, ಬಿಸಿಬಿಸಿ ಹೀರೇಕಾಯಿ ಬೋಂಡಾ ತಿನ್ನುತ್ತಾ ರಾಜು ಮಾವ ಹರಟೆಗೆ ಕೂತಿದ್ದರು. ನಮ್ಮ ಅಜ್ಜಿ ಎಂದರೆ ಅವರ ಅಕ್ಕ ಈಗಿನ ಕಾಲದಲ್ಲಿ ಮಕ್ಕಳಿಗೆ ಹೊಸ ಬಟ್ಟೆ ಹೊಲಿಸುವುದು ಕಷ್ಟವೇನಿಲ್ಲ ಆದರೆ ತಮ್ಮ ಬಾಲ್ಯ ಮತ್ತು ಹರೆಯದ ವಯಸ್ಸಿನಲ್ಲೂ ಹೊಸ ಬಟ್ಟೆ ಹಾಕಿಕೊಂಡು ಮೆರದಾಡುವುದೆಂದರೆ ದೀಪಾವಳಿಗೆ ಮಾತ್ರ ಎಂದು ಪೀಠಿಕೆ ಹಾಕಿದರು.

ನಿಜ ಕಣಮ್ಮ ನಿನ್ನ ಮಾತು.  ನಾವೆಲ್ಲ ಬರೀ ಅಣ್ಣ ಚಡ್ಡಿ ಅಕ್ಕ ಲಂಗದ ಪೀಳಿಗೆಯವರು. ಈಗಿನವರ ಥರ ವರ್ಷಕ್ಕೆ ಹತ್ತು ಸರಿ ಬಟ್ಟೆ ಕೊಡಿಸುವುದು ಅಪರೂಪದ ಮಾತೇ ಎಂದರು ರಾಜು ಮಾವ. ಅಣ್ಣ ಚಡ್ಡಿ ಅಕ್ಕ ಲಂಗ ಎಂದರೆ ಏನಿರಬಹುದು ಎಂದು ನನ್ನ ಮನಸ್ಸಿನಲ್ಲಿ ಪ್ರಶ್ನೆ . ರಾಜು ಮಾವ ವಿವರವಾಗಿ ತಿಳಿಸಿದರು . ಹಿಂದಿನ ಕಾಲದಲ್ಲಿ ಕುಟುಂಬ ಯೋಜನೆ ಇರಲಿಲ್ಲ, ಎಲ್ಲರ ಮನೆಯಲ್ಲೂ ಕನಿಷ್ಠವೆಂದರೆ ನಾಲ್ಕು ಹೆಚ್ಚೆಂದರೆ ಹದಿನಾಲ್ಕು ಮಕ್ಕಳು ಹುಟ್ಟುತ್ತಿದ್ದರು. ಎಲ್ಲರೂ ಶ್ರೀಮಂತರಲ್ಲ, ಸುಮಾರಾದ ಆದಾಯ. ಹೊಲ ಮನೆಗಳೆಂದರೆ ಅಪರೂಪವೇ. ಮೊದಲಿಗೆ ಗಂಡು ಮಗು ಹುಟ್ಟುತ್ತಿತ್ತು ಎಂದುಕೊಳ್ಳೋಣ . ಮೊದಲ 3ತಿಂಗಳು ಹೊಸ ಬಟ್ಟೆ ಹಾಕುತ್ತಿರಲಿಲ್ಲ . ದೊಡ್ಡಮ್ಮ, ಚಿಕ್ಕಮ್ಮ, ಸೋದರತ್ತೆ ಇಲ್ಲ ಪಕ್ಕದ ಮನೆಯವರೋ ತಮ್ಮ ಮಗುವಿಗೆ ಹಾಕಿದ್ದ ಬಟ್ಟೆ ಕೊಡುವರು. ಮಗುವಿಗೆ 3 ತಿಂಗಳಾದಮೇಲೆ ಹೊಸ ಅಂಗಿ ಹೊಲಿಯುವರು. ಹೊಸ ಬಟ್ಟೆ ಹಾಕಿದರೆ ದೃಷ್ಟಿ ತಗುಲಿ ಮಗುವಿನ ಆಯುಷ್ಯ ಕಡಿಮೆಯಾಗಬಹುದು ಎಂಬ ತರ್ಕ.

ದೊಡ್ಡಮಗ ವಂಶೋದ್ಧಾರಕ. ಪ್ರೀತಿಯಿಂದ ಹೊಸ ಬಟ್ಟೆ ಹೊಲೆಸುತ್ತಿದ್ದರು. ಯುಗಾದಿ,  ಗಣೇಶನ ಹಬ್ಬ, ನವರಾತ್ರಿ, ದೀಪಾವಳಿ. ಹೀಗೆ 4 ಹೊಸ ಬಟ್ಟೆಗಳು. ಜ್ಯೇಷ್ಠ ಪುತ್ರನ ಮೊದಲ ಹುಟ್ಟಿದ ಹಬ್ಬಕ್ಕೆ ಸಮೀಪದ ಸಂಬಂಧಿಕರು ಬಟ್ಟೆ ಕೊಡುವರು. ಇಲ್ಲಿಂದ ಶುರು ಅಣ್ಣ ಚಡ್ಡಿ ಕಥೆ . ದೊಡ್ಡಮ್ಮ ತಮ್ಮ ಮಗನಿಗೆ ಹೊಲಿಸಿದ ಚಡ್ಡಿ ಎರಡೇ ತಿಂಗಳಿಗೆ ಆ ಹುಡುಗನಿಗೆ ಚಿಕ್ಕದಾಯಿತು ಎಂದು ತಂದುಕೊಟ್ಟ ಚಡ್ಡಿಯೇ ಅಣ್ಣ ಚಡ್ಡಿ ಅದರ ಜತೆಗೆ ಅಣ್ಣ ಶರ್ಟು.  ಇದೆ ರೀತಿ ಹೆಣ್ಣು ಮಗುವಿಗೆ ದೊಡ್ಡಮ್ಮ ತಂದುಕೊಟ್ಟ ತಮ್ಮ ಮಗಳ ಲಂಗವೇ ಅಕ್ಕಲಂಗ.

ಇನ್ನು ಮೇಲೆ ಸ್ವಾರಸ್ಯ ನೋಡಿ. ಮಗುವಿಗೆ ಒಂದು ವರ್ಷವಾಯಿತೆಂದರೆ  ತಾಯಿ ಮತ್ತೆ ಗರ್ಭಿಣಿ . ಎರಡನೆಯ ಮಗು ಗಂಡಾಗೇ ಹುಟ್ಟಿದರೆ ಅದಕ್ಕೆ ಹೊಸ ಬಟ್ಟೆ ಹೊಲೆಸುವ ಚಿಂತೆಯೇ ಇಲ್ಲ . ಅಣ್ಣ ಚಡ್ಡಿ ಶರ್ಟು ಅದಕ್ಕೆ ಬಳುವಳಿ ... ಹೆಣ್ಣು ಮಗುವಿನ ಮೇಲೆ ಮತ್ತೆ ಹೆಣ್ಣಾಯಿತೆಂದರೆ ಅಕ್ಕ ಲಂಗ ಅದಕ್ಕೆ ಕಟ್ಟಿಟ್ಟಿದ್ದು. ಅಕ್ಕ ಬಳೆ , ಅಕ್ಕ ಸರ ಇತ್ಯಾದಿ ಇತ್ಯಾದಿ.  ಹೀಗೆ ಆಮೇಲಾದ  ಮಕ್ಕಳಿಗೆ ಹೊಸ ಬಟ್ಟೆ ಹೊಲೆಸುವುದು ಯುಗಾದಿಗೊಮ್ಮೆ . ಒಂದು ವೇಳೆ ಖರ್ಚೆಲ್ಲ ಕಳೆದು ದುಡ್ಡು ಮಿಕ್ಕರೆ ದೀಪಾವಳಿಗೂ ಹೊಸ ಬಟ್ಟೆ. ಆದರೆ ಒಂದು ಪರಿಸ್ಥಿತಿಯಲ್ಲಿ ಬಟ್ಟೆಗಳು ಮನೆಯ ಹೊರಗೂ ಹೋಗುತ್ತಿದ್ದವು .. ನೀವೇ ಯೋಚನೆ ಮಾಡಿ ಏನಂತಹ

ಪರಿಸ್ಥಿತಿಯೆಂದು. ಹಾ ಸರಿಯಾಗಿ ಯೋಚಿಸಿದ್ದೀರಿ .ಈಗ ಚಿಕ್ಕಮ್ಮನ ಮನೆಯಲ್ಲಿ ಪುತ್ರ ಅಥವಾ ಪುತ್ರಿ ಲಾಭ ..

ಈಗ ಅಣ್ಣ ಚಡ್ಡಿ ಅಕ್ಕ ಲಂಗ ಅವರ ಮನೆಗೆ ಹೋಗುತ್ತಿದ್ದವು. ಎಲ್ಲವೂ ಅಲ್ಲ. ಕೆಲವು ಮಾತ್ರ. ಮನೆಯಲ್ಲೇ ಇರುವ ತಮ್ಮ ತಂಗಿಯರಿಗೆ ಬೇಕಲ್ಲ. ಮೂರನೆಯ ಮಗು ಹಾಕಿಕೊಂಡ ಮೇಲೆ ಈ ಬಟ್ಟೆಗಳಿಗೆ ಒಂದು ಕಡೆ ಗುಂಡಿ ಇನ್ನೊಂದು ಕಡೆ ಹೊಲಿಗೆ ಬಿಟ್ಟಿದ್ದರಿಂದ ಟೈಲರಿಗೆ ಕೆಲಸ. ಇನ್ನೊಂದು ಮಗು ಹಾಕಿಕೊಳ್ಳುವಷ್ಟು ರಿಪೇರಿ.

ರಾಜು ಮಾವ ತಮ್ಮ ಕಾಫಿ ಮುಗಿಸಿ ಒಳಗೆ ಹೋಗಿ ಒಂದು ಮಾಸಿದ ಪೆಟ್ಟಿಗೆಯಿಂದ ಒಂದು ಮಾಸಿಹೋದ ಚೀಲದಿಂದ ಹಳೆಯ ಫೋಟೋ ಆಲ್ಬಮ್ ತಂದರು. ನಿಧಾನವಾಗಿ ಧೂಳು ಒರೆಸುತ್ತಾ ಒಂದು ಅಣ್ಣ ಚಡ್ಡಿ ಶರ್ಟು ಎಷ್ಟು ಮಕ್ಕಳು ಹಾಕಿಕೊಂಡಿದ್ದರೆಂದು ಎಂದು ದಾಖಲೆ ತೋರಿಸಿದರು. ಆಹಾ ನಂಗೊ ಸಂತೋಷ .. ನಮ್ಮ ಪೀಳಿಗೆಯಲ್ಲಿ ದೇವರ ದಯದಿಂದ ನಾವು ಹೊಸ ಬಟ್ಟೆಯಲ್ಲಿಯೇ ಬೆಳೆದಿದ್ದೇವೆಂದು. ರಾಜು ಮಾವ ಸ್ವಾರಸ್ಯವಾಗಿ ಹೇಳಿದ್ದ ಮಾತುಗಳನ್ನು ನೆನೆಸಿಕೊಳ್ಳುತ್ತಾ ಮಲ್ಲೇಶ್ವರದ ಬಸ್ಸು ಹತ್ತಿದ್ದೆವು

ನಮ್ಮ ತಂದೆ ತಾಯಿಯರಿಬ್ಬರೂ ಜ್ಯೇಷ್ಠ ಪುತ್ರ ಮತ್ತು ಜ್ಯೇಷ್ಠ ಪುತ್ರಿ . ನಂಗೆ ಒಬ್ಬ ಅಣ್ಣ ನಂತರ ನಾನು ಮಗಳು ಇಬ್ಬರೇ . ಅಣ್ಣನಿಗೂ ಹೊಸ ಬಟ್ಟೆ ನನಗೂ ಹೊಸ ಬಟ್ಟೆ . ಹೀಗಾಗಿ ನಮಗೆ ಅಣ್ಣ ಚಡ್ಡಿ ಅಕ್ಕ ಲಂಗದ ಯೋಗ ಇರಲಿಲ್ಲ. ನಮ್ಮ ಹಳೆಯ ಬಟ್ಟೆಗಳನ್ನು ನಮ್ಮ ತಾಯಿ ಕೆಲಸದವಳ ಮಕ್ಕಳಿಗೆ ಕೊಡುವರು .ತಮ್ಮ ಸೀರೆಗಳನ್ನು ಕೆಲಸದವಳಿಗೋ ಇಲ್ಲವೇ ಸ್ಟೀಲ್ ಪಾತ್ರೆ ಮಾರುವವಳಿಗೆ ಹತ್ತು ಸೀರೆಗೆ ಒಂದು ಡಬ್ಬಿ ಹೀಗೆ ದರ ಮಾಡಿ ಕೊಟ್ಟುಬಿಡುವರು . ನಾನು ಸ್ಟೀಲ್ ಪಾತ್ರೆ ಮಾರುವವವಳ ಹತ್ತಿರ ಇಷ್ಟೆಲ್ಲಾ ಸೀರೆ ಬಟ್ಟೆಗಳನ್ನು ನೀನು ಏನು ಮಾಡುತ್ತೀಯಾ ಎಂದು ಮುಗ್ಧವಾಗಿ ಕೇಳಿದ್ದೆ. ಅವಳೂ ಪ್ರಾಮಾಣಿಕವಾಗಿ ಇವೆಲ್ಲ ಸೀರೆ ಬಟ್ಟೆಗಳು ಚಿಂದಿ ಮಾರ್ಕೆಟ್ಟಿನಲ್ಲಿ ಅತಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ ಎಂದು ತಿಳಿಸಿದಳು. ಎಂಟು ವರ್ಷದ ಹುಡುಗಿಗೆ ಇಷ್ಟೊಂದು ಕಡಿಮೆ ಬೆಲೆಗೆ ಯಾರು ಖರೀದಿ ಮಾಡುವರು ಎಂಬ ಸಂದೇಹ .. ಆ ಪ್ರಶ್ನೆಗೆ ನನ್ನ ತಾಯಿ ತಂದೆಯವರು ನಂಗೆ ತಿಳಿಯುವ ಹಾಗೆ ಉತ್ತರ ಕೊಟ್ಟರು. ಮುಗ್ಧ ಮನಸ್ಸಿಗೆ ಮೊದಲಿಗೆ ಬಡವರು ಬಲ್ಲಿದರು ಎಂಬ ಕಲ್ಪನೆ ಮಸುಕಾಗಿ ಬಂದಿತ್ತು. ಎಷ್ಟೋ ದಶಕಗಳ ನಂತರ ಪರ್ಯಾಯ ಮಾರುಕಟ್ಟೆ ಮುಂತಾದ ಗಂಭೀರ ವಿಷಯ ಓದುವಾಗ ಚಿಂದಿ ಮಾರ್ಕೆಟ್ಟಿನ ಚಿತ್ರ ನೋಡುತ್ತಾ ನನ್ನ ಬಾಲ್ಯದ ನೆನಪು ಮರುಕಳಿಸುವುದು

ಈ ಅಣ್ಣ ಚಡ್ಡಿ ಅಕ್ಕ ಲಂಗದ ತತ್ವ ಪಠ್ಯ ಪುಸ್ತಕಗಳಿಗೂ ಅನುವಾಗುತ್ತಿತು. ಅಣ್ಣಪುಸ್ತಕ ,ಅಕ್ಕ ಪೆನ್ನುಗಳು ಶಾಲೆಯ ಚೀಲ ನೀರಿನ ಬಾಟಲು, ಹೀಗೆ ಎಲ್ಲ ಕಡೆ ಕಾಣ ಬರುತ್ತಿದ್ದವು. ಹೊಸ ಯೂನಿಫಾರ್ಮು ಹಾಕಿಕೊಂಡ ದಿನ ಮಕ್ಕಳಿಗೆ ಸಂತಸ. ಒಂದೆರಡು ವರ್ಷ ಅದನ್ನೇ ಹಾಕಿಕೊಳ್ಳಬೇಕು. ಎತ್ತರವಾದರೆ ಫ್ರಾಕಿನ ಅಥವಾ ಪ್ಯಾಂಟಿನ ಕೆಳಭಾಗದ ಹೆಮ್ಮನ್ನು ಬಿಚ್ಚಿ ಇನ್ನೊಂದು ಇಂಚು ಜಾಸ್ತಿ ಮಾಡಿ ಇನ್ನೊಂದು ಆರು ತಿಂಗಳು ಹೊಸ ಯುನಿಫಾರ್ಮು ಕೆಲಸಕ್ಕೆ ಬರುತ್ತಿತ್ತು .

ಪಾದರಕ್ಷೆ ಕೂಡ ಒಂದೆರಡು ಸರ್ತಿ ಹೀಗೆ ಬೇರೆ ಬೇರೆ ಮಕ್ಕಳ ಕಾಲಿಗೆ ಶೋಭಿಸುವುವು. ಮಕ್ಕಳು ದೊಡ್ಡವರಾಗುತ್ತಾ ತಂದೆಯ ಪ್ಯಾಂಟ್ ಅಥವಾ ಶರ್ಟು ಹಾಕಿಕೊಳ್ಳುವರು ಹೆಣ್ಣು ಮಕ್ಕಳು ತಾಯಿಯ ಸೀರೆ ಕತ್ತರಿಸಿ ಹೊಲೆದ ಲಂಗದಲ್ಲಿ

ಶೋಭಿಸುವರು. ಆಟದ ಸಾಮಾನುಗಳು ಕೂಡ ಹೀಗೆಯೇ ವಿವಿಧ ಮಕ್ಕಳ ಹತ್ತಿರ ಹೋಗುತ್ತಿದ್ದವು . ಅಣ್ಣ ಸೈಕಲ್ ತಮ್ಮನಿಗೆ ..ಅಕ್ಕನ ರಿಸ್ಟ್ ವಾಚ್ ತಂಗಿಗೆ.

ತಾಯಿಯ ಸೀರೆ ಕೆಲವೊಮ್ಮೆ ಬಾಗಿಲಿಗೆ ಪರದೆಯಾಗಿ ಶೋಭಿಸಿದರೆ, ಇನ್ನು ಕೆಲವೊಮ್ಮೆ ಹೆಣ್ಣು ಮಕ್ಕಳ ಲಂಗವೋ ಅಥವಾ ದಾವಣಿಯಾಗಿಯೋ ಶೋಭಿಸುವುದು. ತಂದೆಯ ಪ್ಯಾಂಟು ಕಾಲು ಕತ್ತರಿಸಿಕೊಂಡು ಮಗನ ಚಡ್ಡಿಯಾಗಿ ಪರಿವರ್ತನೆ ಹೊಂದುತ್ತಿತ್ತು. ಕೆಲಸ ಮುಗಿಸಿ ಕುಳಿತ ತಾಯಿಯರು ಹಳೇ ವಾಯಿಲ್ ಸೀರೆಗಳನ್ನು ಜೋಡಿಸಿ ಹೊದ್ದಿಕೊಳ್ಳಲು ದುಪ್ಪಟಿ ಹೊಲೆಯುವರು . ಹೀಗಾಗಿ ಹೊಸ ಬೆಡ್ ಶೀಟ್ ಕೊಳ್ಳುವ ಅಗತ್ಯವೇ ಇರಲಿಲ್ಲ. ಮಾರ್ಕೆಟ್ಟಿನ ಚೀಲಹೊಲಿಯುವುದು ತಂದೆಯ ಷರ್ಟನಿಂದ. ತಂದೆಯ ಪಂಚೆ ಹುಟ್ಟಿದ ಮಗುವಿನ ಕೆಳ ಹಾಸಿಗೆ. ಅಜ್ಜಿಯ ಸೀರೆ ಮೊಮ್ಮಗಳ ಲಂಗ .. ಭಗವಾನ್ ಬುದ್ಧ ಭಿಕ್ಷುಗಳಿಗೆ ನಡೆಸುತ್ತಿದ್ದಂತೆ ಒಂದು ವಸ್ತ್ರ ಅದರ ಎಳೆಗಳು ಹೊರಗೆ ಬರುವ ತನಕ ಉಪಯೋಗವಾಗುತ್ತಿತ್ತು. ನಮ್ಮ ಮ್ಯಾನೇಜ್ಮೆಂಟ್ ಭಾಷೆಯಲ್ಲಿ ಫುಲ್ ಯುಟಿಲೈಸೇಷನ್ ಒಫ್ ರಿಸೋರ್ಸ್

ನಮ್ಮ ಶಾಲೆಗೆ ಎಲ್ಲ ಆರ್ಥಿಕ ಪರಿಸ್ಥಿತಿಯ ಮಕ್ಕಳು ಬರುತ್ತಿದ್ದರು. ಅಕ್ಕ ಸ್ಕರ್ಟ ಮಾರ್ಪಾಟಾದ ಶಾಲೆಯ ಚೀಲ ಅಥವಾ ಊಟದ ಡಬ್ಬಿಯ ಚೀಲ ಎಷ್ಟೋ ಮಕ್ಕಳು ತರುವರು. ಹೊಸ ಬಟ್ಟೆ ಹಾಕದ ಮಕ್ಕಳು ಬಡವರು ಹೊಸ ಬಟ್ಟೆ ಹಾಕುವ ಮಕ್ಕಳು ಶ್ರೀಮಂತರು ಎಂದು ಮಕ್ಕಳು ಗುಸು ಗುಸು ಮಾತನಾಡಿದ್ದು ಕೇಳಿ ನಮ್ಮ ಶಾಲೆಯ ಪ್ರಿನ್ಸಿಪಾಲರು ಇನ್ನು ಮೇಲಿನಿಂದ ಎಲ್ಲ ಮಕ್ಕಳಿಗೆ ಸಮವಸ್ತ್ರ ಎಂದು ನಿರ್ಧರಿಸಿದರು. ಅದನ್ನು ಹೊಲಿಸಲು ತಾಕತ್ತಿಲ್ಲದ ತಂದೆ ತಾಯಿಯರು ಶಾಲೆಗೆ ಅಪ್ಲಿಕೇಶನ್ ಕೊಡಬೇಕೆಂದೂ ಅಂತಹವರಿಗೆ ಶಾಲೆಯಿಂದ ಯುನಿಫಾರ್ಮ ಕೊಡುವರೆಂದೂ ನಿರ್ಧರಿಸಿದರು. ನನ್ನ ಮೆಚ್ಚಿನ ಗೆಳತಿ ಗೀತಾ ಹೊಸ ಯುನಿಫಾರ್ಮ್ ಹಾಕಿಕೊಂಡು ನೋಡೇ ಎಷ್ಟೋ ವರ್ಷದ ನಂತರ ಹೊಸ ಬಟ್ಟೆ ಸಿಕ್ಕಿತು ಎಂದು ಮೆರೆದಾಡಿದಳು . ಕ್ಯಾನ್ವಾಸ್ ಶೂ ಮತ್ತು ಬಿಳಿ ಕಾಲುಚೀಲ ಕೂಡ ಕಡ್ಡಾಯವಾದಾಗ ಪಾಲಕರ ಪ್ರತಿಭಟನೆ ಆರಂಭವಾಗಿ ಮತ್ತು ಚಪ್ಪಲುಗಳು ವಾಪಸು ಬಂದವು.

ಹೀಗೂ ಒಮ್ಮೆ ನಡೆಯುವುದು. ನಮ್ಮ ಕುಟುಂಬದ ಸ್ನೇಹಿತರೊಬ್ಬರು ಪತ್ನಿಯ ಸೀರೆ ಉಟ್ಟಿದ್ದ ಕೆಲಸದವಳೊಂದಿಗೆ ಪ್ರೀತಿಯಿಂದ ನಡೆದುಕೊಂಡಿದ್ದರೆಂದೂ ಆ ಕೆಲಸದವಳು ಹಾಹಾಕಾರ ಮಾಡಿ ಅವರ ಮನೆಯ ಕೆಲಸವನ್ನೇ ಬಿಟ್ಟಿದ್ದಳು. ಪಾಪ ಬಡಾವಣೆ ತುಂಬಾ ಅದೇ ಮಾತು ! ಹದಿ ಹರೆಯದ ಮಗ ಸಿಗರೇಟ್ ಸೇದುತ್ತಿದಾನೆಂದು ತಿಳಿದ ಒಬ್ಬ ತಂದೆಯವರು ಆ ಮನುಷ್ಯನ ಬೆನ್ನಮೇಲೆ ಧೊಪ್ ಎಂದು ಬಾರಿಸಿ ಆ ಮನುಷ್ಯ ಅವರ ಮಗನಾಗಿರದೇ ಅವರ ಮಗನ ಹಳೆಯ ಶರ್ಟನ್ನು ಹಾಕಿ ಕೊಂಡ ಕೆಲಸದವಳ ಮಗನಾಗಿದ್ದ!

ನಮ್ಮ ಭಾರತ ದೇಶ ಬಡದೇಶ. ಕೃಷಿಯ ಮೇಲೆ ಭರವಸೆ ಹೊಂದಿದ್ದ ದೇಶ. ಜನ ಸಂಖ್ಯೆ ಹೆಚ್ಚಾಗುತ್ತಾ ಕೈಗಾರಿಕೆಯೂ ಹೆಚ್ಚಾಯಿತು ಉತ್ಪಾದನೆ ಹೆಚ್ಚಾಗತೊಡಗಿತು. ನಮ್ಮ ದೇಶ ಬಡತನದ ಹೊರಗೆ ಬರಲು ಪ್ರಯತ್ನಿಸುತ್ತಿತ್ತು. ಕಾರ್ಖಾನೆಗಳು ಹೆಚ್ಚಾದವು. ಜನರ ಹತ್ತಿರ ಹಣ ಓಡಾಡತೊಡಗಿತು. ಬ್ಯಾಂಕುಗಳು ಸಾಲ ಕೊಡತೊಡಗಿದವು. ಬಸ್ಸಿನಲ್ಲಿ ಹೋಗುತ್ತಿದ್ದವರು ಮೋಟಾರ್ ಸೈಕಲ್ ಸ್ಕೂಟರ್ ತೆಗುದುಕೊಂಡರು ಉಳ್ಳವರು ಕಾರ್ ಕೊಂಡರು. ನಾವು ಭಾರತೀಯರು ಮುಂದುವರಿದೆವು ಆರ್ಥಿಕವಾಗಿ. ಬೇರೆ ಬೇರೆ ದೇಶದಿಂದ ಆಮದಾದ ವಸ್ತುಗಳು ಬಂದವು. ಬಟ್ಟೆ ಚೀಲ ಹೋಗಿ ಸುಂದರ ಪ್ಲಾಸ್ಟಿಕ್ ಚೀಲಗಳು ಬಂದವು. ನಾವು ಭಾರತೀಯರು ಮುಂದುವರೆದೆವು.

ಅಂಗಡಿಗಳು ಹೋಗಿ ಮಳಿಗೆಗಳು ಬಂದವು. ಎಲ್ಲ ಕಡೆ ದೀಪಾವಳಿ ಹಬ್ಬದ ಸೇಲ್ ಪ್ರಾರಂಭವಾಯಿತು. 20 ರಿಂದ 80 ಪ್ರತಿ ಶತ ಡಿಸ್ಕೌಂಟ್ ಪ್ರಾರಂಭವಾಯಿತು. ಎಲ್ಲರೂ ಹೊಸ ಬಟ್ಟೆಯ ಹಕ್ಕುದಾರರಾದರು. ಬಡವನ ಮಗ ಟೆರಿ ಲಿನ್ ಶರ್ಟ್ ಹಾಕಿಕೊಂಡು ಮೆರೆದಾಡಿದರೆ ಬಲ್ಲವನ ಮಗ ಕೂಡ ಅದೇ ಶರ್ಟ್ ಹಾಕಿಕೊಳ್ಳುವ. ಒಂದು ತರಹ ಸಮಾನತೆ ಬಂದಿತ್ತು ನಮ್ಮ ದೇಶದಲ್ಲಿ, ನನಗೆ ಒಂದು ತರಹಾ ಸಂತೋಷ. ಅಕ್ಕ ಲಂಗ ಅಣ್ಣ ಚಡ್ಡಿ ಅಪ್ಪ ಪೈಜಾಮ ಅಮ್ಮ ಸೀರೆ ಈಗ ಇತಿಹಾಸ.

ಈಗ ಬಟ್ಟೆಗಳು ಹಳೇದಾಗುವುದೇ ಇಲ್ಲಾರೀ. ಇನ್ನೂ ಹೊಸ ಬಟ್ಟೆ ಇರುವಾಗಲೇ ಸೇಲ್ ಬಂದು ಇನ್ನೆರಡು ಸೀರೆಗಳು. ಮತ್ತೆರಡು ಶರ್ಟುಗಳು ಬಂದು ಸೇರಿಕೊಳ್ಳುತ್ತಿವೆ. ನನ್ನ ಕೆಲಸದವಳ ಮಗ ದೊಡ್ಡ ಬಿಪಿಓ ಸೇರಿ, ಈಗ ಅವನಿಗೆ ನನ್ನ ಯಜಮಾನರ ಶರ್ಟೇ ಬೇಡ. ಹರಿದು ತೇಪೆ ಹಾಕಿದಂತೆ ಕಾಣುವ ಹೊಸ ಜೀನ್ಸ್ ಗೆ ಸಾವಿರಾರು ರೂಪಾಯಿ ಕೊಟ್ಟು ನನ್ನ ಮಗಳು ತಂದಾಗ ನಾನು ಮತ್ತು ಯಜಮಾನರು ಗಲಾಟೆ ಮಾಡಿದೆವು. ತೇಪೆ ಹಾಕಿ ದುಪ್ಪಟಿ ಹೊಲಿದು ಅದನ್ನು ಸಾವಿರಾರು ರೂಪಾಯಿಗಳಿಗೆ ಮಾರುತ್ತಾರೆ.

ರೆಡ್ಯೂಸ್, ರಿಯೂಸ್, ರಿಸೈಕಲ್ ಎಂದು ಈಗ ದೊಡ್ಡ ಘೋಷಣೆಗಳು. ಸಮುದ್ರದ ನೀರು ಪ್ಲಾಸ್ಟಿಕ್ ನಿಂದ ಕಲುಷಿತ. ಜಲಚರಗಳಿಗೆ ಹಾನಿ. ಈಗ ನಾವು ತಿನ್ನುವ ಉಪ್ಪಿನಲೂ ಪ್ಲಾಸ್ಟಿಕ್ ಕಣಗಳು ಸೇರಿಕೊಂಡು ಅದರಿಂದ ನಮ್ಮ ಆರೋಗ್ಯಕ್ಕೆ ಹಾನಿಯಂತೆ. ಎಲ್ಲ ಪರಿಸರದಲ್ಲೂ ಬಿಸಾಕಿರುವ ಪ್ಲಾಸ್ಟಿಕ್ ಚೀಲಗಳಿಂದ ಪ್ರಾಣಿಗಳಿಗೂ ಹಾಗೂ ಸಸ್ಯಗಳಿಗೂ ಹಾನಿ. ಗೋವುಗಳು ಪ್ಲಾಸ್ಟಿಕ್ ತಿಂದು ಸಾಯುತ್ತಿವೆ. ನಮ್ಮ ಭೂಮಿ ತಾಯಿ ಪೂರ್ತಿ ಕಲುಷಿತವಾಗಿಬಿಟ್ಟಿದ್ದಾಳೆ ಅವಳ ಕಂದಮ್ಮಗಳ ಕ್ರೂರತೆಯಿಂದ. ಹಾಗಾದರೆ ಉತ್ಪಾದನೆ ನಿಲ್ಲಿಸಬೇಕೇ? ನಿಲ್ಲಿಸಿದರೆ ಆರ್ಥಿಕ ಬೆಳವಣಿಗೆ ಹೇಗೆ? ದೈತ್ಯಾಕಾರದಲ್ಲಿ ಬೆಳೆಯುತ್ತಿರುವ ಈ ಜನ ಸಂಖ್ಯೆ ಎಲ್ಲಿ ತಲುಪುವುದು? ಪರಿಸರ ದಿನಾಚರಣೆ ಆಚರಿಸುವ ಮೊದಲು ನಮಗೆ ಪರಿಸರ ಏನು ಎಂಬ ಕಲ್ಪನೆಬೇಡವೇ? ಮನಸ್ಸಿನ ತುಂಬಾ ಯೋಚನೆ.

ತುಂಬಾ ಬೇಜಾರಾಗಿಹೋಯ್ತು ಮನಸ್ಸು. ಆಗಲೇ ಫೋನು ಟ್ರಿಣುಗುಟ್ಟಿತು. ನನ್ನ ದೊಡ್ಡ ಮಗಳು ಕೆಲವೇ ತಿಂಗಳುಗಳಿಗೆ ತಾಯಿಯಾಗಲಿದ್ದಳು. ಅಮ್ಮ ನನ್ನ ಚೇನಾದ ಗೆಳತಿಯರು ಹೇಳುತ್ತಾರೆ ಹುಟ್ಟುವ ಮಗುವಿಗೆ ಹೊಸ ಬಟ್ಟೆ ಹಾಕಬಾರದು ಎಂದು. ಸೋದರಮಾವನಮಗಳಿಗೆ ಫೋನು ಮಾಡಿ ಅವಳ ಮಗುವಿನ ಬಟ್ಟೆ ಕೇಳಿ ನೀನು ಬರುವಾಗ ತಂದುಕೊಡು ಎಂದಳು.. ಒಂದೇ ಕ್ಷಣದಲ್ಲಿ ಮನ ಸಂತಸಗೊಂಡು ಪರವಾಗಿಲ್ಲ ಈ ಹೊಸ ಪೀಳಿಗೆಯಲ್ಲೂ ಅಕ್ಕ ಅಂಗಿ , ಅಣ್ಣ ಚಡ್ಡಿ ಅಕ್ಕ ಲಂಗ ಪ್ರಾರಂಭವಾಗುತ್ತಿದೆ. ಸಧ್ಯ ನಮ್ಮ ಮಕ್ಕಳು ಮತ್ತೆ ಹಳೆಯ ಅಭ್ಯಾಸ ಮುಂದುವರೆಸುತ್ತಾರೆ .. ನನ್ನ ಹಳೆಯ ಸೀರೆಗಳಲ್ಲೂ ಮಗುವಿಗೆ ದುಪ್ಪಟಿ ಮಾಡಿಸಬೇಕು ಎಂಬ ಜಾಗ್ರತೆ ಮೂಡಿತು ಎಂದುಕೊಳ್ಳುತ್ತಾ ನನ್ನ ಸೋದರ ಸೊಸೆಗೆ ಫೋನಾಯಿಸಲು ಹೋದೆ.

## ವಯಸ್ಸಾದವರ ಚಿಂತೆ

ಚಿಂತೆ ಬಿಡಿ ಅಂತ ಡಾಕ್ಟರು ಹೇಳ್ತಾರೆ. ಆದರೆ ಡಾಕ್ಟರ ಹತ್ತಿರ ತಗೊಂಡ ಔಷಧಿಯಿಂದ ಕಾಯಿಲೆ ಗುಣ ಆಗುತ್ತೋ ಇಲ್ವೋ ಅನ್ನೋದೇ ಚಿಂತೆ

# ಆಹ್ಲಾದ ನೀಡಿದ ಅರಳೀ ಮರ

**- ಡಾ. ಶ್ಯಾಮಲಾ ರವಿಶಂಕರ್**

ಯಜಮಾನರ ಅನಾರೋಗ್ಯದಿಂದ ಒಂದು ವಾರಕ್ಕೂ ಹೆಚ್ಚು ದಿನ ಆಸ್ಪತ್ರೆಯ ವಾಸ ಅನಿವಾರ್ಯವಾಯಿತು. ಮನೆಯಿಂದ ಹೊರಟಾಗ ಇದ್ದ ಆತಂಕ ಘಾಬರಿಗಳು ಆಸ್ಪತ್ರೆ ಸೇರುವಷ್ಟರಲ್ಲಿ ಸ್ವಲ್ಪಮಟ್ಟಿಗೆ ತಹಬಂದಿಗೆ ಬಂದಿದ್ದು, ಅಲ್ಲಿ ಸೇರಿದ ಮೇಲೆ ವೈದ್ಯಕೀಯ ತಪಾಸಣೆ ಉಪಚಾರಗಳಿಂದ ಹಾಗೂ ಆಸ್ಪತ್ರೆಯ ಎಲ್ಲಾ ವರ್ಗದ ಸಿಬ್ಬಂದಿಗಳಿಂದ ದೊರಕಿದ ಸಹಾಯ ಸಹೃದಯತೆಗಳಿಂದ ಎಷ್ಟೋ ಸುಧಾರಿಸಿತು. ಇಷ್ಟೆಲ್ಲಾ ಇದ್ದರೂ ಸಂಪೂರ್ಣವಾಗಿ ನಿರಾತಂಕವಾಗಿರಲು ಯಾರಿಗಾದರೂ ಕಷ್ಟ ಸಾಧ್ಯವಲ್ಲವೇ. ಹೆಚ್.ಐ.ಸಿ.ಯು. ಇಂದ ವಾರ್ಡಿಗೆ ಬಂದ ಮೇಲೆ ನನಗೂ ವಿಶ್ರಮಿಸಲು ಅವಕಾಶ ಚೆನ್ನಾಗಿಯೇ ಇದ್ದಾಗ್ಯೂ, ದುಗುಡಗೊಂಡ ನನ್ನ ಮನಸ್ಸಿಗೆ ಸಾಂತ್ವನ ನೀಡಿದ್ದು, ಅಲ್ಲಿದ್ದ ಒಂದು ಅರಳಿ ಮರವೆಂದರೆ ನೀವು ನಂಬುತ್ತೀರೋ, ಇಲ್ಲವೋ!

ಈ ದೃಶ್ಯ ಹೆಬ್ಬಾಳದಲ್ಲಿರುವ ಬಾಪ್ಟಿಸ್ಟ್ ಆಸ್ಪತ್ರೆಯಲ್ಲಿ ನಮ್ಮ ವಾರ್ಡಿದ್ದುದು ಮೂರನೆಯ ಅಂತಸ್ತಿನಲ್ಲಿ. ಬಹಳ ಸೌಕರ್ಯವಾಗಿತ್ತು ಹಾಗೂ ಎಲ್ಲರ ಸಹಕಾರ ಒಲುಮೆ ತುಂಬಿ ತುಳುಕುತ್ತಿತ್ತು. ಅಲ್ಲಿಂದ ಕಿಟಕಿಯ ಮೂಲಕ ಕಾಣುತ್ತಿದ್ದ ದೃಶ್ಯ ಮನೋಹರವಾಗಿತ್ತು. ಕಾರಣ, ಒಪ್ಪ ಓರಣಗಳಿಂದ ಕೂಡಿದ್ದ ಗಿಡ-ಮರಗಳನ್ನು ಬೆಳಸಿದ್ದುದು, ಸ್ವಲ್ಪ ಓರೆಯಾಗಿ ಕಾರ್ ಪಾರ್ಕಿಂಗ್, ಸಮವಸ್ತ್ರಧಾರಿಯಾದ ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಯವರ ಓಡಾಟ ಇತ್ಯಾದಿ. ಈಗ ನಾನು ಹೇಳ ಹೊರಟಿರುವುದು ಅಲ್ಲಿದ್ದ ದೊಡ್ಡದಾಗಿ ಹರಡಿದ್ದ ಒಂದು ಅರಳಿ ಮರದ ಬಗ್ಗೆ. ಈ ಮರದೆತ್ತರಕ್ಕೆ ಸಮಾನವಾಗಿದ್ದ ನಮ್ಮ ವಾರ್ಡಿನ ಕಿಟಕಿಗಳ ಮೂಲಕ ಈ ಮರದ ಏರಿಯಲ್ ವ್ಯೂ ನನ್ನ ಗಮನ ಸೆಳೆಯಿತು.

ಬೆಳಗಾಗುವ ಮುಂಚೆಂದಲೇ ಆಸ್ಪತ್ರೆಯ ಸಿಬ್ಬಂದಿ ತಂತಮ್ಮ ಕಾರ್ಯ ನಿರ್ವಹಣೆಗಾಗಿ ನಮ್ಮ ಕೋಣೆಗೆ ಬಂದಾಗ ಸರಿಯಾಗಿ ಬ್ರಾಹ್ಮೀ ಮುಹೂರ್ತ ನನ್ನ ಜನ್ಮದಲ್ಲಿ ಎಂದೂ ಇಂತಹ ಸಮಯದಲ್ಲಿ ಎದ್ದಿರದ ನಾನು ಆ ದಿನಗಳಲ್ಲಿ ಆಕಾಶ ನೋಡುತ್ತಾ ಕಾಲ ಕಳೆಯುತ್ತಿದ್ದೆ. ಇಂತಹ ಸಮಯದಲ್ಲಿ ಇದ್ದಕ್ಕಿದ್ದಂತೆ ನಮ್ಮ ಈ ಅರಳೀ ಮರ ಜೀವಕಳೆದಂತೆ ಚುರುಕಾಗುತ್ತಿತ್ತು. ಆಗ ''ಕರಾಗ್ರೇ ವಸತೇ ಲಕ್ಷ್ಮೀ...'' ಬದಲು ''ಮೂಲತೋ ಬ್ರಹ್ಮರೂಪಾಯ....'' ಎಂದು ಆ ಮರಕ್ಕೆ ಕೈ ಮುಗಿಯುತ್ತಿದ್ದಂತೆ ಆ ಎಲೆಗಳ ಮಧ್ಯೆ ತೂರಿಬಂದ ಅಲ್ಲೊಂದು ಇಲ್ಲೊಂದು ಸೂರ್ಯ ಕಿರಣಗಳು ನನ್ನ ದುಗುಡಗೊಂಡ ಮನಸ್ಸನ್ನು ಉಲ್ಲಾಸದೆಡೆಗೆ ಎಳೆಯಲು ಹವಣಿಸುವಂತಿತ್ತು! ಆ ತಂಗಾಳಿಗೆ ಒಂದೊಂದು ಎಲೆ ಒಂದೊಂದು ತರಹ ಓಲಾಡಿ ನಾಟ್ಯವಾಡಿ ನನ್ನ ಮನಸ್ಸಿಗೆ ಆಹ್ಲಾದವೀಯುತ್ತಿತ್ತು. ಇನ್ನು ಕೆಲವೇ ನಿಮಿಷಗಳಲ್ಲಿ ಸೂರ್ಯನ ಬೆಳಕಿನಿಂದ ಬಂಗಾರ ಎಲೆಗಳಂತೆ ಅವುಗಳು ನಾಟ್ಯವಾಡುತ್ತ ಪಟಪಟ ಶಬ್ದಮಾಡುತ್ತಿದ್ದವು. ಇಷ್ಟರಲ್ಲಿ ಅಲ್ಲೇ ಮನೆಮಾಡಿದ್ದ ನೂರಾರು ಹಕ್ಕಿಗಳು ತಮ್ಮ ನಿದ್ದೆ ಮುಗಿಯಿತೆಂದು ಘೋಷಿಸುವಂತೆ ಚಿಲಿಪಿಲಿಗೆ, ಈ ಎಲೆಗಳ ಪಟಪಟ ತಾಳ ಹಾಕುವಂತಿತ್ತು. ''ಮೂಡಲ ಮನೆಯಾ ಮುತ್ತಿನ ನೀರಿನ...'' ಎಂದು ಎಷ್ಟು ಗುನು ಗುನಾಯಿಸುತ್ತಿದ್ದೆನೋ ನಾನು! ಇಷ್ಟರಲ್ಲಿ ಹಕ್ಕಿಗಳ ಸಮಾವೇಶ ಮುಗಿದು ಅವು. ಎಲ್ಲೆಲ್ಲಿಗೋ ಹಾರಿ ಹೋಗುತ್ತಿದ್ದವು. ಈ ಸಮಯಕ್ಕೆ ನಮಗೆ ಕಾಫಿ ಬ್ರೇಕ್! ಇದರ ನಂತರ ಆಸ್ಪತ್ರೆಯ

ಸಿಬ್ಬಂದಿಯ ಕಾರ್ಯ ನಿಮಿತ್ತವಾಗಿ ಬರುವುದು ತೆರಳುವುದೂ ನಡೆಯುತ್ತಿತ್ತು. ಆಮೇಲೆ ನನ್ನ ದೃಷ್ಟಿ ಮರಳಿ ಅರಳಿ ಮರದೆಡೆಗೆ.

ಕೆಲವಾರು ಹಕ್ಕಿಗಳು ಬಂದು ಹೋಗಿ ಮಾಡುತ್ತಿದ್ದವು ಅದರಲ್ಲಿ ನನಗೆ ಸ್ಪಷ್ಟವಾಗಿ ಕಾಣುತ್ತಿದ್ದುದು ಒಂದು ಗೂಡು. ಅದರಲ್ಲಿದ್ದ ಪುಟ್ಟ ಮರಿಗಳ ಚಿಲಿಪಿಲಿ ನಿರಂತರ. ಅದು ನಿಶ್ಶಬ್ದವಾಯಿತೆಂದರೆ ನನಗೆ ಏನೋ ಆತಂಕವಾಗಿ ಕಣ್ಣಿಟ್ಟು ನೋಡಿದರೆ ಕಾಗೆಯೊಂದು ಬಂದು ಅವಕ್ಕೆ ಬ್ರೇಕ್‌ಫಾಸ್ಟ್ ಉಣಿಸುತ್ತಿದೆ! ಮೂರು ನಾಲ್ಕು ಮರಿಗಳು ಕತ್ತೆತ್ತಿ ಹಾಹಾಕಾರ ಮಾಡುತ್ತವೆ, ನನಗೆ ಮೊದಲು, ನನಗೆ ಮೊದಲು ಎಂಬಂತೆ! ಎಂಥಾ ಮುದ್ದಾದ ದೃಶ್ಯ:- ಐದಾರು ದಶಕಗಳ ಹಿಂದೆ ನಮ್ಮ ಅಜ್ಜಿ ತುತ್ತು ಹಾಕುತ್ತಿದ್ದಾಗ ನಾವೆಲ್ಲಾ ಕಸಿನ್ಸ್ ಮಾಡುತ್ತಿದ್ದ ಗಲಾಟೆಗೆ ಸುಮ್ಮನೆ ಸಣ್ಣ ನಗೆ ಹರಿಸುತ್ತಿದ್ದ ಅಜ್ಜಿಯ ನೆನಪಾಗಿ ಕಣ್ಣು ತೇವಗೊಂಡಿತು. ಅಷ್ಟರಲ್ಲಿ ಮಳೆ ಹನಿಯಿತು, ನಮ್ಮ ಹಕ್ಕಿಗಳ ಗೂಡಿನ ಮೇಲೆ. ಎಲ್ಲಿತ್ತೋ ಆ ಕಾಗೆ, ಗೂಡನ್ನು ಅನಾಮತ್ತಾಗಿ ಆವರಿಸಿ ತಾನು ನೆನೆಯಿತು. ಸ್ವಲ್ಪ ಸಮಯದ ನಂತರ ಮತ್ತೊಂದು ಹಕ್ಕಿ (ಕಾಗೆಯಲ್ಲ, ಬಹುಶಃ ಕೋಗಿಲೆಯೋ) ಬಂದಾಗ ಈ ಕಾಗೆ ಪಕ್ಕಕ್ಕೆ ಹಾರಿತು, ಆ ಹಕ್ಕಿ ಈ ಗೂಡನ್ನು ಮುಚ್ಚಿತ್ತು! ನನ್ನ ಕಣ್ಣನ್ನೇ ನಂಬಲಾಗದ ಪ್ರಸಂಗ! ಎಂಥಾ ಸಹಕಾರ, ಎಂಥಾ ಸಂಘ ಜೀವಿಗಳು ಈ ಹಕ್ಕಿಗಳು! ಈಗ ನಮಗೆ ಬ್ರೇಕ್ ಫಾಸ್ಟ್ ಟೈಂ.

ನಾನು ಮತ್ತೆ ನನ್ನ ವಿಹಂಗ ವೀಕ್ಷಣಕ್ಕೆ ಕುಳಿತಾಗ ಸುಮಾರು ಹೊತ್ತೇ ಆಗಿತ್ತು. ಬಿಸಿಲು ಸಾಕಷ್ಟು ಪ್ರಖರವಾಗಿತ್ತು. ಈಗ ಮರಕುಟುಕವೊಂದು ಕೊಂಬೆಗಳ Y ಫೋರ್ಕ್‌ನಲ್ಲಿ ಅಲುಗಾಡದೆ ಕೂತಿದೆ. ಅದು ಮಾಡುತ್ತಿದ್ದ ಕೆಲಸವೆಂದರೆ ಅದರ ಆಸು ಪಾಸಿನಲ್ಲಿ ಹುಳ ಹುಪ್ಪಟೆ ಬರುವ ತನಕ ಅಲುಗಾಡದೆ ಕುಳಿತಿದ್ದು ಕಣ್ಣಿಗೆ ಬಿದ್ದ ಹುಳುಗಳನ್ನು ''ಗುಳುಂ'' ಮಾಡುವುದು! ಹುಳುಗಳು ನನ್ನ ಕಣ್ಣಿಗೆ ಕಾಣದಿದ್ದರೂ ಮರಕುಟುಕದ ಚಟುವಟಿಕೆಯಿಂದ ತಿಳಿಯುತ್ತಿತ್ತು. ಕಣ್ಣು ಕಿರಿದಾಗಿಸಿದಾಗ ಕಂಡದ್ದು ಲಾರ್ವಗಳು, ಗೊದ್ದಗಳು ಇತ್ಯಾದಿ!

ಈ ಮಧ್ಯೆ ಪರಿಣಿತ ವೈದ್ಯರು ಬರುವುದು, ನರ್ಸ್‌ಗಳ ಓಡಾಟಗಳ ಬ್ರೇಕ್!

ಮತ್ತೆ ಕೈಯಲ್ಲಿ ಪುಸ್ತಕವೋ, ವಾರ್ತಾ ಪತ್ರಿಕೆಯೋ ಹಿಡಿದು ನನ್ನ ವೃಕ್ಷ ವೀಕ್ಷಣ ಮುಂದುವರೆಯುತ್ತಿತ್ತು.

ಇಷ್ಟು ಹೊತ್ತಿಗೆ ಕೋತಿಗಳ ಪ್ರಪಂಚ. ಅವು ನಮ್ಮಗಳಂತೆ (ಅಥವಾ ನಾವು ಅವುಗಳಂತೆಯೋ?) ನಿಧಾನವಾಗಿ ಏಳುತ್ತವೇನೋ. ಅವುಗಳ ಚಟುವಟಿಕೆ ಯಾವಾಗ ಏನು ಅಂತ ಗೊತ್ತಿರೋ ಸಾಧ್ಯತೆ ಇಲ್ಲ, ಯಥಾ ಪ್ರಕಾರ ಆದರೂ ನಾನು ನೋಡಿದ ನಾಲ್ಕಾರು ದಿನಗಳಲ್ಲಿ ಒಂದು ಮಾದರಿ - ಪಾಟರ್ನ್- ಏರ್ಪಟ್ಟಿತ್ತು. ಅವುಗಳ ರೆಸ್ಟ್‌ಲೆಸ್‌ನೆಸ್ಸೇ ಒಂದು ಮೋಜು! ಇದರಲ್ಲೇನು ವಿಶೇಷ ಅಂದ್ರೆ, ಅದೂ ಸರಿ ಬಿಡಿ ಈ ಕೋತಿಗಳ ಗುಂಪು ಮರ ಕುಟುಕದ ಬ್ರೇಕ್ ಫಾಸ್ಟ್ ಮಾಡಿದ್ದನ್ನು ದೂರದಿಂದ ನೋಡ್ತಾನೇ ಇತ್ತು. ಈ ದೃಶ್ಯ ಬಹಳ ಮನೋರಂಜನೆ ನೀಡಿತು ನನಗೆ. ಅದು ಪ್ರತಿ ಹುಳೂನಾ ಗುಳೂ ಮಾಡಿದಾದ ಕೋತಿಗಳು ಪಿಳಿ ಪಿಳಿ ಅಂತ ಕಣ್ಣು ಬಿಟ್ಕೊಂಡು ನೋಡಿದ್ದೂ ಅಲ್ಲದೆ ಒಂದರ ಮುಖ ಇನ್ನೊಂದು ನೋಡೊಕೆ ಶುರು! ಈ ರೀತಿ ಒಂದು ಚೈನ್ ರಿಯಾಕ್ಷನ್! ಇಷ್ಟರಲ್ಲಿ ಪುಟ್ಟ ಕೋತಿಮರಿಯ ಜಗಿತ, ಈ ಗುಂಪಿಗೆ ಅದರ ದೇಹ ದೊಡ್ಡ ಇಲಿಯಷ್ಟು, ಬಾಲ 1 ಮೀಟರ್ ಅಷ್ಟು ಉದ್ದ! ಈ ಪುಟಾಣಿಗೆ ತನ್ನ ಬಾಲ ಶೋಕಿಯಿಂದ ಅಲ್ಲಾಡಿಸ್ತಾ ಇರೋ ಕುಚೇಷ್ಟೆ, ನಮ್ಮ ಆದಿ ಕವಿ

ವಾಲ್ಮೀಕಿ ಮಹರ್ಷಿಗಳೇ ಹೇಳಿರುವಂತೆ ಕಪಿಗಳಿಗೆ ಅವುಗಳ ಬಾಲದ ಮೇಲೆ ಮಹಾ ಮೋಹವಂತೆ. ಹಾಗೇ ಇದಕ್ಕೂ ಅದರ ಸಂಭ್ರಮ ಹೇಳತೀರದು. ಎಲ್ಲಿತ್ತೋ ಅದರ ತಾಯಿ(?) ಓಡೋಡಿ ಬಂದು ಇದರ ಪಕ್ಕ ವಕ್ರಿಸಿತು. ಹಿರಿಯರು ತಮ್ಮ ಮೇಲೆ ಕಣ್ಣಿಡೋದು ಪುಟ್ಟ ಕೋತಿಗೆ ಇಷ್ಟ ಬರಲಿಲ್ಲ (ನಮ್ಮಗಳಿಗೂ ಹಾಗೇ ಅಲ್ಲವೇ?) ತಕ್ಷಣ ಎರಡು ಕೊಂಬೆಗಳ ಮಧ್ಯೆ ಹಾರಿ ಹೋಗಿ 20 ಅಡಿ ಕೆಳಗೆ ಅವಿತುಕೊಂಡಿತು. ಎಷ್ಟಾದರೂ ಅದರ ಜಂಭದ ಮೂಲ, ಅರ್ಥಾತ್, ಉದ್ದನೆ ಬಾಲ, ತನ್ನ ಇರವನ್ನು ಬಹಿರಂಗ ಪಡಿಸೇಬಿಟ್ಟಿತು. ಅಮ್ಮ ಎಷ್ಟೆಂದರೂ ಅಮ್ಮನೇ ಅಲ್ವಾ, ಕ್ಷಣ ಮಾತ್ರದಲ್ಲಿ ಅಲ್ಲಿ ಹೋಗಿ ಪಕ್ಕದ ಸೀಟನ್ನು ಅಲಂಕರಿಸಿತು! ಹೀಗೇನೆ ಜೂನಿಯರ್ ಜಿಗಿದರೆ ಸೀನಿಯರ್ ಅನುಕರಣೆ, ಹಲವಾರು ಸಲ ನಡೆಯಿತು. ಕಡೆಗೆ ಸೀನಿಯರ್, ಜೂನಿಯರ್‌ನ ಬಾಲಾನ ತನ್ನ ಕತ್ತಿಗೆ ಸುತ್ತಿಕೊಂಡು ನಿರಾತಂಕವಾಗಿ ಉಸಿರಾಡಿತು. ಆಗ ನೋಡಬೇಕಿತ್ತು ಪಿಳ್ಳೆ ಕೋತಿಯ ಮುಖ! ನನಗೆ ತಡೆಯಲಾರದಷ್ಟುನಗು! ಇಷ್ಟರಲ್ಲಿ ಇನ್ನೊಂದು ಮರಿಯ ಹೇನು ಹೆಕ್ಕುವ ಕೆಲಸ ಬೇರೆ ಇತ್ತು. ಆ ತಾಯಿಗೆ ಈ ಮಧ್ಯೆದಲ್ಲಿ ಚಿಟ್ಟು ಕೋತಿ ತನ್ನ ಬಿಡುಗಡೆಗಾಗಿ ಸತತ ಪ್ರಯತ್ನ ನಡೆಸುತ್ತಲೇ ಇತ್ತು. ಆದರೂ ತಾಯಿ ತನ್ನ multi tasking ನಲ್ಲಿ ವಿಜಯಗಳಿಸಿತು!

ಈ ದೃಶ್ಯ ಎರಡು ಮೂರು ಸಾರಿ ನೋಡಿದ್ರೂ ನನ್ನ ಮನರಂಜನೆಯೇನೂ ಕಡಿಮೆಯಾಗಲಿಲ್ಲ, ಅದೂ ದಿನಂ ಪ್ರತಿ ಇವಲ್ಲದೆ ಮಾಮೂಲು ಕೋತಿ ಚೇಷ್ಟೆ ಆಟಗಳನ್ನು ನೋಡ್ತಾ ನೋಡ್ತಾ ನನ್ನದೇ ಆದ ಇಂಟರ್‌ಪ್ರಿಟೇಶನ್ನುಗಳನ್ನು ಮಾಡ್ತಾ ಇದ್ದಾಗ ಸಂಜೆಯಾಗಿದ್ದು ಗೊತ್ತಾಗ್ತಿದ್ದಿದ್ದು, ಅರಳಿ ಮರದ ತುಂಬ ಗಿಳಿಗಳು ಬಂದು ಅಲಂಕರಿಸಿದಾಗ! ಏನೆಲ್ಲಾ variat of green shades ಅಂತೀರಾ! ಅಬ್ಬಾ!

ಎಷ್ಟು ದೊಡ್ಡ ಅರಳೀಮರ, ಎಷ್ಟೋ ಎಲೆಗಳು ನಮಗಾಗಿ ತಯಾರಿಸುವ ಆಮ್ಲಜನಕ, ಎಷ್ಟೆಲ್ಲಾ ಜನಕ್ಕೆ ನೀಡುವ ತಂಪಾದ ನೆರಳು, ಇದೆಲ್ಲದರ ಜೊತೆಗೆ ಇಷ್ಟೆಲ್ಲಾ ಪ್ರಾಣಿಗಳಿಗೆ ಬೀಡಾದ ಈ ಮರ ಈ ಪ್ರಾಣಿಗಳ ಆಟದ ಮೈದಾನವಾಗಿ ನನ್ನ ಮನಸ್ಸನ್ನು ಪೂರ್ತಿ ಸೂರೆಗೊಂಡಿತು ಅಂದರೆ ಅತಿಶಯೋಕ್ತಿಯಲ್ಲ. ಇಂತಹ ದೃಶ್ಯ ನೋಡುತ್ತಾ ನೋಡುತ್ತ ನನ್ನ ಮನಸ್ಸಿನ ದುಗುಡ ದೂರವಾಗಿ ನಮ್ಮವರು ಮನೆಗೆ ಹಿಂತಿರುಗಿ ಬಂದ ಮೇಲೂ ನಾನು ಆ ದೃಶ್ಯಗಳ ಮೆಲಕು ಹಾಕುತ್ತಿರುವಂತೆ ಮೋಡಿ ಮಾಡಿದ ಅರಳೀ ಮರಕ್ಕೆ ನನ್ನ ನಮನಗಳು!

**ದೇವರು ಕಾಣುತ್ತಿಲ್ಲ ಎಂದ ಮಾತ್ರಕ್ಕೆ ಅವನಿಲ್ಲ ಎಂದು ಹೇಳಲಾಗದು. ಏಕೆಂದರೆ?**

- ಕಚಡ ರಾಶಿ ಕೊಳೆತು ನಾರಿ ದುರ್ಗಂಧ ಬೀರುತ್ತಿದ್ದರೂ ಅದನ್ನು ತೆಗೆಯುವ ಸಿಬ್ಬಂದಿ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ;
- ಒಂದು ಸಣ್ಣ ಮಳೆಗೆ ಇಡೀ ಸಂಚಾರ ವ್ಯವಸ್ಥೆ ಕುಸಿದು ಬಿದ್ದರೆ ವಿಪತ್ತು ನಿರ್ವಹಣಾ ತಂಡ ಇಲ್ಲ ಎಂದು ಹೇಳುವಂತಿಲ್ಲ;
- ಆಸ್ತಿ ತೆರಿಗೆ ಪೂರ್ತಿ ಪಾವತಿ ಆಗಿಲ್ಲ ಎಂದ ಮಾತ್ರಕ್ಕೆ ಬಿಬಿಎಂಪಿ ಇಲ್ಲ ಎಂದು ಹೇಳುವಂತಿಲ್ಲ.

# ರಂಗಣ್ಣನ ಡಯಟ್ ಪ್ರಸಂಗ

**– ಗಾಯತ್ರಿ ಮೂರ್ತಿ**

ರಂಗಣ್ಣನಿಗೆ ಸಿಹಿ ತಿಂಡಿಯೆಂದರೆ ಪಂಚಪ್ರಾಣ. ಅದರಲ್ಲೂ ಹೆಂಡತಿ ಮಾಡಿದ ಜಾಮೂನು ತಿನ್ನುವುದೆಂದರೆ ಅವನಿಗೆ ಭಾರೀ ಪ್ರೀತಿ. ಒಂದು, ಎರಡು, ಮೂರು, ನಾಲ್ಕು, ಅವನಿಗೆ ಲೆಕ್ಕವೇ ಸಿಗುತ್ತಿರಲಿಲ್ಲ. ಜೊತೆಗೆ ಅವನು ಬೋಂಡಾ ಪ್ರಿಯ ಬೇರೆ. ಜಾಮೂನು ಬೋಂಡಾ–ಕಾಂಬಿನೇಶನ್ ಅಂದ್ರೆss..ಆಹಾಹ, ಒಂದಾದ ಮೇಲೆ ಒಂದು ಬೊಂಡಾ, ಜೊತೆಗೆ ಜಾಮೂನು ಇವೆರಡೂ ರಂಗಣ್ಣನ ಹೊಟ್ಟೆ ಒಳಗೆ ಇಳಿದರೆ ಅವನಿಗೆ ಪರಮ ಸಂತೋಷ ಪ್ರಾಪ್ತಿ! ಅದೇ ಸಮಯ ನೋಡ್ಕೊಂಡು ಅವನ ಪತ್ನಿ ಪಮ್ಮಿ ಅವನಿಂದ ತನಗೆ ಬೇಕಾದ್ದಷ್ಟು ಹಣ ಪೀಕುತ್ತಿದ್ದಳು.

ಸರಿ, ಇವೆಲ್ಲ ಅವನ ಹೊಟ್ಟೆಯೊಳಗೆ ಸೇರಿ ಚೆನ್ನಾಗಿಯೇ ಕೆಲಸ ಮಾಡಿದವೆನ್ನಿ. ಅವನ ಹೊಟ್ಟೆ ಗುಡಾಣದ ಗಾತ್ರ ಎಂಬಂತೆ ಉಬ್ಬಿತು, ನವಮಾಸ ತುಂಬಿದ ಗರ್ಭಿಣಿಯನ್ನೂ ಮೀರಿಸುವಂತೆ! ಇದರ ಪರಿಣಾಮ ಆರೋಗ್ಯದ ಮೇಲೆ ಆಗದೆ ಇದ್ದೀತೇ? ವೈದ್ಯರು ನಿಮ್ಮ ತೂಕ ಇಳಿಸಲೇ ಬೇಕೆಂದು ಸ್ವಲ್ಪ ನಿಷ್ಠುರವಾಗಿಯೇ ಹೇಳಿದರು.

ಅಲ್ಲಿಂದ ಶುರುವಾಯಿತು, ರಂಗಣ್ಣನ ಡಯಟ್ ಪ್ರಸಂಗಗಳು, ಜೊತೆಗೆ ವ್ಯಾಯಾಮದ ಸರ್ಕಸ್! ಯಾರೋ ಹೇಳಿದರು, ಫುಟ್ ಬಾಲ್ ಒದೀತಾ ಅದರ ಹಿಂದೆ ಓಡಿದರೆ ತೂಕ ತಂತಾನೇ ಇಳಿತ್ತೇಂತ, ಯಾರೋ ಏನು, ಅವನ ಗೆಳೆಯ ಸುಂದರೂನೇ ಹೇಳಿದ್ದು.

'ಸರಿ, ನಿಮ್ಮ ಫುಟ್‌ಬಾಲ್‌ನಂತಹ ಹೊಟ್ಟೆ ಇಳಿಸಕ್ಕೆ ಫುಟ್‌ಬಾಲ್ ನೆರವು ಬೇಕೇ? ಇದನ್ನೆಲ್ಲ ನಿಮಗೆ ಯಾರು ಹೇಳಿದ್ದು?' ಪಮ್ಮಿ ಗಂಡನನ್ನು ಹಾಸ್ಯ ಮಾಡಿದಳು.

'ಯಾರ‍್ಯಾಕೆ ಹೇಳ್ತಾರೆ? ನನಗೇನು ಬುದ್ಧಿ ಇಲ್ಲವೇ? ನಾನೇ ಯೋಚನೆ ಮಾಡ್ದೆ,' ಎಂದು ಹೇಳಿದ ರಂಗಣ್ಣ ಗುಟ್ಟು ಬಿಡದೆ.

ಮರುದಿನ ಬೆಳಿಗ್ಗೆ ಫುಟ್‌ಬಾಲ್ ಹಿಡಿದು ಒದೆಯುತ್ತ ಓಡಿದ, ಓಡಿದ, ಓಡಿದ, ಮೇಲುಸಿರು ಬಂದ್ರೂ ಬಿಡಲಿಲ್ಲ. ಓಡಿದ. ಕೊನೆಗೆ ಕಾಲುಗಳು, ತೊಡೆಗಳು ಇನ್ನು ನಮ್ಮ ಕೈಯಲ್ಲಾಗಲ್ಲ ಅಂತ ಮುಷ್ಕರ ಹೂಡಿದಾಗ ಆಟೋ ಮಾಡ್ಕೊಂಡು ಮನೆಗೆ ಬಂದ.

ಮುಂದಿನ ಒಂದು ವಾರ ಕೈಕಾಲು ಆಡಿಸೋಕ್ಕಾಗದೆ ರಜ ಹಾಕಿ ಮನೇಲೆ ಹೆಂಡ್ತಿ ಕೈಲಿ ಸೇವೆ ಮಾಡಿಸ್ಕೊಂಡು, ಅದರ ಜೊತೆ ಅವನಿಗೆ ಅಷ್ಟೋತ್ತರ ಶತ ನಾಮಾವಳಿ ಪೂಜೆ ಸಹ ಮಾಡೋದನ್ನ ಪಮ್ಮಿ ಮರೀಲಿಲ್ಲ!

ಒಂದು ತಿಂಗಳು ಕಳೆದಿರಬಹುದು. ರಂಗಣ್ಣ ಅಷ್ಟಕ್ಕೆ ಬಿಟ್ಟಾನೆಯೇ? ಮರಳಿ ಯತ್ನವ ಮಾಡು ಅನ್ನೋ ನಾಣ್ಣುಡಿಯಲ್ಲಿ ಅವನಿಗೆ ಅಪಾರ ನಂಬಿಕೆ. ಅಂತೇಯೇ ಮಾಡಿ ವಿಫಲನಾದ.

ಹೀಗಿರುವಾಗ, ಒಂದು ದಿನ, ಅಪರೂಪಕ್ಕೆ ಬೇಗ ಮನೆಗೆ ಬಂದ ರಂಗಣ್ಣನನ್ನು ಕಂಡು ಪಮ್ಮಿ ಆಶ್ಚರ್ಯದಿಂದ ಹುಬ್ಬೇರಿಸಿದಳು. ರಂಗಣ್ಣನ ಕೈಯಲ್ಲಿ ಒಂದು ಚೀಲ ಬೇರೆ. ಅದರ ತುಂಬಾ ವಿವಿಧ ರೀತಿಯ ಸೊಪ್ಪಿನ ಕಂತೆಗಳು! ಸೊಪ್ಪು ತಿನ್ನುವವರನ್ನು ಕಂಡರೆ ಮೂಗು ಮುರಿಯುತ್ತಿದ್ದ ರಂಗಣ್ಣ ಕೈಯಾರೆ ಸೊಪ್ಪು ತಂದಿರುವುದು ಕಂಡು ಪಮ್ಮಿ ಆಶ್ಚರ್ಯದಿಂದ ಕೂಡಿ ಗರಬಡಿದವಳಂತೆ ನಿಂತಳು. 'ಓ, ನನ್ನ ಕೈಲಿ ಸೊಪ್ಪು ನೋಡಿ ಆಶ್ಚರ್ಯ ಆಯ್ತಾ? ನಾನು ಹೇಳೋದು ಕೇಳಿದ್ರೆ ಇನ್ನೇನಂತೀಯೋ? ಕೇಳುವವಳಾಗು ಪ್ರಿಯೇ, ಇನ್ನು ಮೇಲೆ ನಾನು ಸೊಪ್ಪು ಮಾತ್ರ ತಿನ್ನುವೆನು, ಸೊಪ್ಪು ಬಿಟ್ಟು ಬೇರೇನು ತಿನ್ನುವುದಿಲ್ಲ,' ಎಂದ ನಾಟಕೀಯವಾಗಿ, ಸತ್ಯವನ್ನೇ ಹೇಳುವೆನು ಬೇರೇನೂ ಹೇಳುವುದಿಲ್ಲ ಎಂದು ಗೀತೆಯ ಮೇಲೆ ಆಣೆ ಇಟ್ಟು ಹೇಳುತ್ತಾರಲ್ಲ ಆ ಧಾಟಿಯಲ್ಲಿ.

ರಂಗಣ್ಣನ ಈ ಪರಿ ಪಮ್ಮಿಗೆ ಹೊಸತೇನೂ ಅಲ್ಲ. ಅಂತೂ ಯಾವುದೋ ಹೊಸ ಗ್ರಹಚಾರ ವಕ್ರಿಸ್ತಲ್ಲ, ಎಂದು ಆಶ್ಚರ್ಯಪಡುತ್ತ ಪಮ್ಮಿ, 'ಅಲ್ಲಾರೀ, ಸೊಪ್ಪುಹುಳಿ ಮಾಡಿದ್ರೆ ದನಗಳು, ಮೇಕೆಗಳು ಸೊಪ್ಪು ತಿನ್ನೋದು. ನನಗೆ ಬೇಡ, ಅಂತಿದ್ರಲ್ಲ. ಇದೇನು ಹೊಸ ಪರಿ? ಸುಂಚೂ ಸಿಕ್ಕಿದ್ರಾ? ಅವರೇ ತಾನೇ ಹೇಳಿದ್ದು, ಸೊಪ್ಪು ತಿಂದರೆ ಒಳ್ಳೇದೂಂತ?' ಯಾರದೋ ಬಲವಾದ ಉಪದೇಶವೇ ಗಂಡನ ಇಂತಹ ನಿರ್ಧಾರಗಳಿಗೆ ಕಾರಣ ಎಂದು ಪಮ್ಮಿಗೆ ಈ ವೇಳೆಗೆ ಅನುಭವದಿಂದ ಅರಿವಾಗಿತ್ತು. ಆ ಮಹಾನುಭಾವ ರಂಗಣ್ಣನ ಸುಂಚೂಯೇ ಆಗಿರಬೇಕು ಎಂಬುದೂ ಅವಳ ಅನುಭವವೇ.

'ನೀನು ಏನು ಬೇಕಾದರೂ ತಿಳ್ಕೋ, ನಂದೇನೂ ಅಭ್ಯಂತರ ಇಲ್ಲ. ನಾನಂತೂ ಸೊಪ್ಪಿನ ಡಯೆಟ್ ಮಾಡೋದೇ. ಅಲ್ವೇ, ಆಗಿಂದ ಬ್ಯಾಗ್ ಕೈಯಲ್ಲಿ ಹಿಡ್ಕೊಂಡು ನಿಂತೇ ಇದೀನಿ. ನೀನು ಹಾಗೇ ಮಾತಾಡ್ತಾ ನಿಂತಿದೀಯಲ್ಲ. ಇಸ್ಕೋಬಾರ್ದಾ?" ರಂಗಣ್ಣ ಅಸಮಾಧಾನದಿಂದ ನುಡಿದ."

'ಆ ಸೊಪ್ಪಿನ ಚೀಲಾ ಕೆಳಗಿಟ್ಟರೆ ಅದೇನು ಕರಗತ್ತಾ? ಇಡಿ ಕೆಳಗೆ, ಏನೂ ಆಗಲ್ಲ.'

"ಅದೂ ಸರಿ ಅನ್ನು" ಎನ್ನುತ್ತಾ ರಂಗಣ್ಣ ಸೊಪ್ಪಿನ ಚೀಲ ಕೆಳಗಿಟ್ಟ.

'ಬೆಳಿಗ್ಗೆ ತರಕಾರಿ ಜಾಸ್ತಿ ಇತ್ತು ಅಂತ ಪಲಾವ್ ಮಾಡಿದೀನಿ. ಪಲಾವ್ ಜೊತೆಗೆ ನಿಮ್ಗಿಷ್ಟಾಂತ ಜಾಮೂನ್ ಮಾಡಿದೀನಿ. ಹೋಗಲಿ, ಇನ್ನೇನು ಮಾಡೊದು, ನೀವು ತಿನ್ನಲ್ಲಾಂತ ಅಷ್ಟು ಖರ್ಚು ಮಾಡಿ, ಕಷ್ಟ ಪಟ್ಟು ತಯಾರ್ಸಿದ್ದು ಬಿಸಾಕಕ್ಕಾಗತ್ತಾ? ನೀವು ಸೊಪ್ಪು ತಿನ್ನಿ. ನಾನು ಪಲಾವ್, ಜಾಮೂನು ತಿಂತೀನಿ. ಉಳಿದರೆ ನಾಳೇಗೂ ಇಟ್ಕೊತೀನಿ." ಎಂದು ಪಮ್ಮಿ ಹೆಚ್ಚಿನ ವೈಯ್ಯಾರದಿಂದಲೇ ನುಡಿದಳು.

ಪಲಾವ್ ಜೊತೆಗೆ ಜಾಮೂನ್ ಎಂದೊಡನೆ ರಂಗಣ್ಣನ ಮುಖ ಕಾದ ಎಣ್ಣೆಯಲ್ಲಿ ಹಾಕಿದ ಹಪ್ಪಳದಂತೆ ಅರಳಿತು.

"ಸರಿ, ಇವತ್ತು ರಾತ್ರಿ ನೀನು ಮಾಡಿರೋದನ್ನು ತಿಂತೀನಿ. ನಾಳೆಯಿಂದ ಸೊಪ್ಪಿನ ಡಯಟ್ ಶುರು ಮಾಡಿದರೆ ಆಗತ್ತೆ. ಪಲಾವ್, ಜಾಮೂನ್ ಕಾಂಬಿನೇಶನ್ ಚೆನ್ನಾಗಿರತ್ತೆ. ಜೊತೆಗೆ ನಾಲ್ಕು ಬೋಂಡಾ ಕರಿದಿದ್ರೆ

ಇನ್ನೂ ಚೆನ್ನಾಗಿರೋದು. ಇರಲಿ ನಡಿಯೆ, ಊಟ ಮಾಡೋಣ. ಕೈಕಾಲು ತೊಳ್ಕೊಂಡು ಬರ್ತೀನಿ." ಎಂದು ರಂಗಣ್ಣ ಪಲಾವ್ ತಿನ್ನಲು ಆತುರ ವ್ಯಕ್ತ ಪಡಿಸಿದ.

"ಪರ್ವಾಗಿಲ್ಲ. ನೀವು ಸೊಪ್ಪು ತಿನ್ನಿ. ಹೆಚ್ಚಿಡ್ತೀನಿ ಬೇಕಾದ್ರೆ." ಎಂದು ಪಮ್ಮಿ ತನ್ನ ಉದಾರ ಬುದ್ಧಿ ತೋರಿದಳು.

'ನಾಳೆಯಿಂದ ನನ್ನ ಡಯಟ್ ಶುರು. ಇನ್ನು ಮೇಲೆ ಅದು ಇದು ಮಾಡಿ ನೀನು ನನ್ನ ಹೊಟ್ಟೆ ಉರಿಸ್ಬೇಡ" ರಂಗಣ್ಣ ಎಚ್ಚರಿಸಿದ.

'ಇದೊಳ್ಳೆ ಚೆನ್ನಾಗಾಯ್ತು. ಡಯೆಟ್ ಮಾಡೋದು ನೀವು. ನಾನ್ಯಾಕೆ ನನಗೆ ಬೇಕಾದ್ದನ್ನ ಮಾಡ್ಕೊಂಡು ತಿನ್ನಬಾರ್ದು?"

"ಅಲ್ವೆ, ಪಲಾವ್, ಜಾಮೂನ್ ಮಾಡಿ ಹೀಗೆ ಮಾತಲ್ಲೆ ಕಾಲ ಕಳೀತಿದೀಯಲ್ಲೆ. ನಡಿಯೆ, ಬೇಗ ತಟ್ಟೆ ಹಾಕು, ನನಗೆ ಹಸಿವಾಗಿದೆ."

ನಂತರ ರಂಗಣ್ಣ ಪೊಗದಸ್ತಾಗಿ ಪಲಾವ್, ಇಪ್ಪತ್ತು ಜಾಮೂನುಗಳ ಡಯಟ್ ಬಾರಿಸಿ ಸಂತೃಪ್ತನಾದ.

ಅದೇ ಸಂದರ್ಭದಲ್ಲಿ, "ಪಮ್ಮಿ, ಸುಂದರೂ ಬಂದಿದ್ದ ಕಣೆ. ಒಳ್ಳೆ ಹೋಟೆಲ್ ಉದ್ದಿನವಡೆ ತರಹ ಇದ್ದವನು, ಬತ್ತಿದ ಬೆಂಡೆಕಾಯಿ ತರಹ ಆಗಿದಾನೆ ಅಂದರೆ ನಂಬ್ತೀಯ? ಹೇಗೋ ಸಣ್ಣಗಾದೆ ಅಂತ ಕೇಳಿದ್ದಕ್ಕೆ ಸೊಪ್ಪಿನ ಡಯಟ್ ಕಣೋ. ಸೊಪ್ಪಲ್ಲಿ ಕ್ಯಾಲರೀಸ್ ಬಹಳ ಕಡಿಮೆ. ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಹೀಗೆ ಮೂರು ಹೊತ್ತೂ ಸೊಪ್ಪು ತಿಂದು, ಕೊಬ್ಬನ್ನೆಲ್ಲ ಕರಗಿಸಿದೆ. ಏನಂತೀಯ? ಎಂದು ಹೇಳಿದ. ಅದಕ್ಕೆ ನಾನೂ ಸಹ ಸೊಪ್ಪು ತಿಂದು ಸಣ್ಣಾ ಆಗಬೇಕು ಅಂತ ಸೊಪ್ಪು ತಂದಿದೀನಿ. ಬೇಕಾದ್ರೆ ನೀನೂ ತಿನ್ನಬಹುದು." ಎಂದ.

'ನಂಗೊತ್ತಿತ್ತು, ಇದು ಸುಂದರೂದೆ ಕಿತಾಪತಿ ಅಂತ. ಹೋದ ಸಾರಿ ಅವರು ರಾಗಿ ಡಯಟ್ಮಾಡಿದ್ರು ಅಂತ ನೀವೂ ಮಾಡಿದ್ದು, ನಾಲ್ಕು ದಿನಗಳ ಕಾಲ ಮೂರು ಹೊತ್ತೂ ರಾಗಿಮುದ್ದೆ ತಿಂದು, ಕೊನೆಗೆ ಬೇಜಾರಾಗಿ ಮೂಟೆ ರಾಗಿಹಿಟ್ಟನ್ನು ಕೆಲಸದ ಲಿಂಗಮ್ಮಂಗೆ ಕೊಟ್ಟಿದ್ದು, ನೀವು ಮರೆತಿರಬಹುದು. ಆದರೆ ನನಗೆ ಚೆನ್ನಾಗಿ ನೆನಪಿದೆ.'

ಜಾಮೂನು ತಿಂದ ತೃಪ್ತಿಯಲ್ಲಿ ತೇಲಾಡುತ್ತಿದ್ದ ರಂಗಣ್ಣನಿಗೆ ಪಮ್ಮಿಯ ಮಾತು ತಲೆಗೆ ಹೋಗಲಿಲ್ಲ.

'ಪಮ್ಮಿ, ನಿನ್ನ ಹಾಗೆ ಜಾಮೂನು ಮಾಡಕ್ಕೆ ಯಾರಿಗೂ ಬರಲ್ವೆ.' ಎಂದ

"ಅದು ನನಗೂ ಗೊತ್ತು. ಅದಿರ್ಲಿ, ನಾಳೆ ಬ್ರೇಕ್‌ಫಾಸ್ಟ್‌ಗೆ ಸೊಪ್ಪು ತಾನೇ ತಿನ್ನೋದು."

"ಮತ್ತಿನ್ನೇನು. ಒಂದು ಸಲ ತೀರ್ಮಾನ ಮಾಡಿದ್ಮೇಲೆ ಮುಗಿದು ಹೋಯಿತು."

ಸರಿ, ಮರುದಿನ ರಂಗಣ್ಣ ಸ್ನಾನ ಮುಗಿಸಿ ಹೊರಬಂದಾಗ ದೋಸೆಯ ಘಮಘಮ ವಾಸನೆ ಮೂಗಿಗೆ ಬಡಿಯಿತು. ಆ ಕ್ಷಣದಲ್ಲಿ ಸೊಪ್ಪಿನ

ಡಯಟ್ ವಿಷಯ ಮರೆತ ರಂಗಣ್ಣ, ಬಿಸಿ ಬಿಸಿ ದೋಸೆ, ಕಾಯಿಚಟ್ನಿ, ಜೊತೆಗೆ ಘಮಘಮ ತುಪ್ಪದ ತಿಂಡಿಯ ಗುಂಗಿಗೆ ಬಲಿಯಾಗಿ, ಗೂಳಿಯಂತೆ ಅಡಿಗೆ ಮನೆಯ ಕಡೆ ಧಾವಿಸಿ ಬಂದ.

"ರ್ರೀ, ನಿಮ್ಮ ತಿಂಡಿ ಟೇಬಲ್ ಮೇಲಿದೆ." ಪಮ್ಮಿ ವಯ್ಯಾರದಿಂದ ನುಡಿದಳು

ಟೇಬಲ್ ಬಳಿ ಬಂದು ನೋಡಿದ ತಕ್ಷಣ ರಂಗಣ್ಣನ ಉತ್ಸಾಹ ತೂತಾದ ಬಲೂನಿನಲ್ಲಿ ಗಾಳಿ ಹೋಗುವಂತೆ ಜರ್ರನೆ ಇಳಿಯಿತು. ಸಣ್ಣಗೆ ಹೆಚ್ಚಿದ ಸೊಪ್ಪು, ರಂಗಣ್ಣನ ನಿರೀಕ್ಷೆ ಮಾಡುತ್ತ ತಟ್ಟೆಯಲ್ಲಿತ್ತು!

ರಂಗಣ್ಣನಿಗೆ ಆಗಲೇ ಜ್ಞಾನೋದಯವಾಗಿದ್ದು, ತನ್ನ ಸೊಪ್ಪಿನ ಡಯಟ್ ಬಗ್ಗೆ. ಪರ್ವಾಗಿಲ್ಲ, ಪಮ್ಮಿ ನನ್ನ ಬಗ್ಗೆ ಚೆನ್ನಾಗಿ ಕಾಳಜಿ ವಹಿಸ್ತಾಳೆ ಎಂದುಕೊಳ್ಳುತ್ತ, ಸೊಪ್ಪನ್ನು ಬಾಯಿಗಿಟ್ಟುಕೊಂಡ.

"ಸ್ವಲ್ಪ ಉಪ್ಪು ಹಾಕಿ ಇಡಬಾರ್ದೇನೇ"

"ನಿಮ್ಮ ಪ್ರಕಾರ ಉಪ್ಪು ಫ್ಯಾಟ್ ಇರ್ಬೋದೇನೋ ಅಂತssss-- ಎಂದು ಪಮ್ಮಿ ರಾಗ ಎಳೆದಳು.

'ಅತಿ ಆಡ್ಬೇಡ, ಸ್ವಲ್ಪ ಉಪ್ಪು ಹಾಕು"

ಉಪ್ಪು ಹಾಕಿಸಿಕೊಂಡು ಹೇಗೋ ಕಷ್ಟ ಪಟ್ಟುಕೊಂಡು ತಟ್ಟೆಯಲ್ಲಿನ ಸೊಪ್ಪನ್ನು ತಿಂದು ಮುಗಿಸಿದ.

ಹಿಂದೆಯೇ ಪಮ್ಮಿ ದೋಸೆಯ ತಟ್ಟೆ ಹಿಡಿದು ತಿನ್ನುತ್ತ ಬಂದಳು.

"ನಾನು ಹೊರಟ ಮೇಲೆ ತಿನ್ನಬಾರದಾ?" ರಂಗಣ್ಣ ಅಸಮಾದಾನದಿಂದ ನುಡಿದ.

"ಒಬ್ಬಳಿಗೇ ಕೂತು ತಿನ್ನಕ್ಕೆ ಬೇಜಾರಾಗತ್ತೆ. ಅದಕ್ಕೆ"

"ಸರಿ ಸರಿ, ಇದಕ್ಕೆಲ್ಲಾ ಏನು ಕಮ್ಮಿ ಇಲ್ಲ" ರಂಗಣ್ಣ ಸಿಡುಕಿದ.

"ದೋಸೆ ಒಳ್ಳೆ ಮಲ್ಲಿಗೆ ಹೂವಿನ ಹಾಗಿದೆ" ಉರಿಯುವ ಗಾಯಕ್ಕೆ ಉಪ್ಪು ಸುರಿದಂತಾಯಿತು ರಂಗಣ್ಣನ ಪರಿಸ್ಥಿತಿ. ಹೋಗಲಿ, ದೋಸೆ ತಿಂತೀನಿ ಎನ್ನಲು ಸ್ವಾಭಿಮಾನ ಅಡ್ಡಿ ಬಂತು. ಗಂಡನ ಮುಖ ಕಂಡು ಅವನ ಮನಸ್ಸಿನ ತುಮುಲ ಅರಿತ ಪಮ್ಮಿ ಒಳಗೊಳಗೇ ನಕ್ಕಳು.

ಊಟಕ್ಕೆ ಏನು ಮಾಡಿದೀಯೆ?"

"ಇನ್ನೇನು ಮಾಡಲಿ? ಸೊಪ್ಪು ಹೆಚ್ಚಿ ಇಟ್ಟಿದೀನಿ, ಅಷ್ಟೆ."

"ಮಧ್ಯಾಹ್ನಕ್ಕೂ ಹಸಿ ಸೊಪ್ಪಾ? ಬೇಯಿಸಿ ಉಪ್ಪುಖಾರ ಹಾಕ್ಬಾರ್ದಾ?"

"ಇವತ್ತು ಹಾಗೇ ತಿನ್ನಿ. ನಾಳೆ ಬೇಕಾದ್ರೆ ಬೇಯಿಸಿ ಇಡ್ತೀನಿ."

ಮಧ್ಯಾಹ್ನ ಹಸಿ ಸೊಪ್ಪು ಸ್ವಲ್ಪ ತಿನ್ನುವುದರೊಳಗೆ ರಂಗಣ್ಣನಿಗೆ ವಾಕರಿಕೆ ಬಂತು. ಅಲ್ಲ, ಸುಂದರೂ ಅದ್ಹೇಗೆ ಸೊಪ್ಪಿನ ಡಯೆಟ್ ಮಾಡಿದ. ಸರಿಯಾಗಿ ಕೇಳಬೇಕಿತ್ತು ಎಂದುಕೊಂಡ ರಂಗಣ್ಣ. ಆದರೆ ಸುಂದರೂ ಅವನ ಕೈಗೆ ಸಿಗದೆ ಕೆಲಸದ ಮೇಲೆ ದೆಹಲಿಗೆ ಹಾರಿದ್ದ!

ಇನ್ನು ತಿನ್ನುವುದಾಗದು ಎಂದುಕೊಂಡು ಡಬ್ಬಿ ಮುಚ್ಚಿಟ್ಟು ಕುಳಿತ. ಆದರೆ ಹೊಟ್ಟೆ ಅವನ ಮಾತು ಕೇಳಬೇಕಲ್ಲ! ಆ ವೇಳೆಗೆ ಸರಿಯಾಗಿ ಗೆಳೆಯ ಬಾಲು ಡಬ್ಬಿ ತಂದಿಲ್ಲವೆಂದು ಊಟಕ್ಕೆ ಹೊರಟಿದ್ದ. ಸರಿ ಅವನ ಜೊತೆ ಹೋಟೆಲ್‌ಗೆ ಹೋಗಿ ಮನಸಾರೆ ಹೊಟ್ಟೆ ತುಂಬಾ ಊಟ ಮಾಡಿ ರಂಗಣ್ಣ ಧನ್ಯನಾದ. ಇನ್ನು ಅವಳ ಕೈಗೆ ಸಿಕ್ಕಿಬಿದ್ದರೆ ಮುಗಿಯಿತು ಎಂದುಕೊಂಡು ವಾಪಸು ಬರುವಾಗ ಡಬ್ಬಿಯಲ್ಲಿನ ಸೊಪ್ಪನ್ನು ಎಸೆಯಲು ಮರೆಯಲಿಲ್ಲ!

ಮನೆಗೆ ಬಂದ ಕೂಡಲೆ ಮಡದಿ, 'ನಿಮ್ಮ ಸೊಪ್ಪಿನ ಡಯೆಟ್ ಹೇಗೆ ಸಾಗಿದೆ?"

"ಲೇ, ನೀನು ಚೆನ್ನಾಗಿ ತಿಂದು ನನ್ನ ಹೊಟ್ಟೆ ಉರಿಸಬೇಡ. ಸುಮ್ಮನಿರು."

"ನಿಮ್ಮನ್ನು ನೋಡಿದ್ರೆ ಬರಿ ಸೊಪ್ಪು ತಿಂದವರ ಹಾಗೆ ಕಾಣಲ್ಲ. ಮಧ್ಯಾಹ್ನ ಫ್ರೆಂಡ್ ಜೊತೆ ಊಟಕ್ಕೆ ಹೋಗಿದ್ರಿ ಅಲ್ವಾ?"

"ಎಲಾ, ಇವಳಾ, ಮನೆಯಲ್ಲೇ ಕೂತು ನನ್ನ ಮೇಲೆ ಜಾಸೂಸಿ ಬೇರೇನಾ?' ಎಂದು ಯೋಚಿಸುತ್ತಾ,

'ಸಧ್ಯ, ಸಣ್ಣ ಆಗೋಣ ಅಂತ ಕಷ್ಟ ಪಟ್ಟು ಡಯೆಟ್ ಮಾಡ್ತಿದೀನಿ, ಏನೇನೋ ಪ್ರಶ್ನೆ ಕೇಳಿ ನನ್ನ ಹೊಟ್ಟೆ ಉರಿಸ್ಬೇಡ.' ರಂಗಣ್ಣ ಸಿಡುಕಿದ.

'ಅಲ್ಲರಿ, ಪಕ್ಕದ್ಮನೆ ಪಾರು ಗಂಡ, ಹೋಟಲಲ್ಲಿ ನೀವು ಫ್ರೆಂಡ್ ಜೊತೆ ಊಟ ಮಾಡ್ತಿದ್ದನ್ನು ನೋಡಿದ ಹಾಗಾಯ್ತು ಅಂದರು. ಅದಕ್ಕೇ ಕೇಳಿದೆ.'

'ಸಧ್ಯ, ನಾನು ಡಯಟ್ ಮಾಡಿ ಸತ್ತು ಸುಣ್ಣವಾಗಿ ಬಂದಿದೀನಿ. ಒಂದು ಲೋಟ ಕಾಫೀನಾದರೂ ಕೊಡಬಾರದ?'

ಪಮ್ಮಿ ಅಷ್ಟಕ್ಕೇ ಬಿಡಲಿಲ್ಲ. 'ಆ ಹೋಟಲಲ್ಲಿ ಬಾಸುಂದಿ ಚೆನ್ನಾಗಿರತ್ತೆ ಅಲ್ವಾ?'

ಮಧ್ಯಾಹ್ನದ ಬಾಸುಂದಿ ರುಚಿ ಇನ್ನೂ ನಾಲಿಗೆಯಿಂದ ಮರೆಯಾಗಿರಲಿಲ್ಲ.

'ಹೌದು, ತುಂಬಾ ಚೆನ್ನಾಗಿತ್ತು,' ಎಂದು ಹೇಳಿ ನಾಲಿಗೆ ಕಚ್ಚಿಕೊಂಡ, ಅಯ್ಯೋ, ಸೊಪ್ಪು ತಿಂದೆ ಅಂತ ಸುಳ್ಳು ಹೇಳಿ ಸಿಕ್ಕಿ ಹಾಕ್ಕೊಂಡಾಯ್ತಲ್ಲ ಎಂದು ಚಡಪಡಿಸಿದ.

ರಾತ್ರಿಗೆ ಸೊಪ್ಪು ಬೇಯಿಸಿ, ಸ್ವಲ್ಪ ಬೇಳೆ ಹಾಕಿ ಪಲ್ಯ ಮಾಡು"

"ಬೇಳೆ ಫ್ಯಾಟ್ ಅಲ್ವಾ?

"ಅಲ್ಲ, ಹೇಳಿದಷ್ಟು ಮಾಡು"

ಸರಿ, ರಾತ್ರಿಗೆ ಅದೂ ಆಯ್ತು. ಸೊಪ್ಪಿನ ಪಲ್ಯ ಚೆನ್ನಾಗಿತ್ತು. ಅದನ್ನೇ ರಂಗಣ್ಣ ಹೊಟ್ಟೆ ತುಂಬಾ ಬಾರಿಸಿದ. ಇಲ್ಲದಿದ್ದರೆ ಎದುರಿಗೆ ಕುಳಿತ ಪಮ್ಮಿ ಬಿಡಬೇಕಲ್ಲಾ?

ಮರುದಿನ ತಿಂಡಿಗೆ ಪಮ್ಮಿ ಸೊಪ್ಪು ಬೇಯಿಸಿ ಉಪ್ಪು ಹಾಕಿಟ್ಟಿದ್ದಾಳೆ! ತಾನು ಈರುಳ್ಳಿಯ ಘಮಘಮ ಉಪ್ಪಿಟ್ಟು ತಟ್ಟೆಗೆ ಹಾಕಿಕೊಂಡಿದ್ದಾಳೆ!

ರಂಗಣ್ಣನಿಗೆ ಹೊಟ್ಟೆ ಉರಿಯದೆ ಇದ್ದೀತೆ? ಸೊಪ್ಪು ಜೊತೆಗೆ ಬೇಕಾದ್ರೆ ಸ್ವಲ್ಪ ಉಪ್ಪಿಟ್ಟು ಹಾಕಲಾ? ಪಮ್ಮಿ ಕೇಳಿದಳು.

"ನಾನು ಡಯೆಟ್ ಮಾಡ್ಕೊಂಡು ಸಾಯ್ತಿದೀನಿ. ನನ್ನ ಎದುರಿಗೇ ಹೀಗೆ ತಿಂಡಿ ತಿಂತಾ ಹೊಟ್ಟೆ ಉರಿಸ್ತಿಯಲ್ಲ? ಒಬ್ಬಳೇ ತಿನ್ನಕ್ಕೆ ಬೇಜಾರಾಗತ್ತೆ ಅಂತ ನಾಟಕ ಬೇರೆ. ನನ್ನ ಬಿಟ್ಟು ಮಧ್ಯಾಹ್ನ ಊಟ ಮಾಡಲ್ವಾ?

"ಅದು ಅಭ್ಯಾಸ ಆಗಿದೆ."

"ನಿನ್ನ ಹತ್ತಿರ ಮಾತಾಡ್ತೀನಲ್ಲ, ನನಗೆ ಬುದ್ಧಿ ಇಲ್ಲ."

ಊಟಕ್ಕೆ ಡಬ್ಬಿಗೆ ಹಾಕಲು ಪಮ್ಮಿ ಸೊಪ್ಪು ಹೆಚ್ಚುವಾಗ ದೊಡ್ಡ ಹುಳ ಸಿಕ್ಕಿತು. ಅರೆ ಇದ್ಯಾಕೋ ಸರಿ ಇಲ್ಲವಲ್ಲಾ? ಎಂದುಕೊಂಡು ಪಮ್ಮಿ ಗಂಡನಿಗೆ ವರದಿ ಒಪ್ಪಿಸಿದಳು. "ಏನೂ ಆಗಲ್ಲ, ಚೆನ್ನಾಗಿ ತೊಳೆದು ಹಾಕು." ಇದು ರಂಗಣ್ಣನ ಉವಾಚ.

ಸರಿ, ಮಧ್ಯಾಹ್ನ ಸೊಪ್ಪಿನ ಡಬ್ಬಿ ತೆಗೆದು ತಿನ್ನಲು ನೋಡಿದ. ಹುಳದ ನೆನಪಾಗಿ ಸ್ವಲ್ಪ ವಾಕರಿಕೆ ಬಂತು. ಬಲವಂತವಾಗಿ ಬಾಯಿಗೆ ತುರುಕಿಕೊಂಡು ಅಂತೂ ಊಟ ಮುಗಿಸಿದ. ಸಂಜೆಯ ವೇಳೆಗೆ ಹೊಟ್ಟೆ ಉಬ್ಬರಿಸಿ ಬಂತು. ಆಫೀಸಿನಲ್ಲೇ ವಾಂತಿ, ಭೇದಿ ಆಯಿತು. ಮನೆಗೆ ಹೇಗೋ ಬಂದು ತಲುಪಿಕೊಂಡ. ಮತ್ತೆ ಮತ್ತೆ ವಾಂತಿ ಭೇಧಿಯ ಅವಾಂತರ!

ಡಾಕ್ಟರ್ ಬಳಿ ಹೋಗಿದ್ದಾಯಿತು. ಮೊದಲೇ ತನ್ನ ಸೊಪ್ಪಿನ ಡಯೆಟ್ ಬಗ್ಗೆ ಡಾಕ್ಟರ್ ಬಳಿ ಹೇಳ ಕೂಡದು ಎಂದು ರಂಗಣ್ಣ ತಾಕೀತು ಮಾಡಿದ್ದರೂ, ಸಿಕ್ಕ ಅವಕಾಶ ಪಮ್ಮಿ ಕಳೆದುಕೊಳ್ಳುವಳೇ? ಅವಳು ಹೇಳಿದ್ದು ಕೇಳಿ ಡಾಕ್ಟರ್‌ಗೆ ಕೂಡ ನಗು ತಡೆಯಲಾಗಲಿಲ್ಲ.

"ಅತಿಯಾದರೆ ಅಮೃತವೂ ವಿಷ ಅಂತಾರಲ್ಲ ಹಾಗೆ ನಿಮ್ಮ ಸಮಾಚಾರ. ಸೊಪ್ಪು ಆರೋಗ್ಯಕ್ಕೆ ಒಳ್ಳೆಯದು, ನಿಜ. ಹಾಗಂತ ಬರಿ ಸೊಪ್ಪು ತಿಂದರೆ ಶರೀರ ತಡೆಯತ್ತ? ಸಮತೋಲನ ಆಹಾರದ ಬಗ್ಗೆ ನೀವು ಕೇಳಿಲ್ವ? ನಿಮ್ಮ ಆಹಾರದಲ್ಲಿ ಕೊಬ್ಬಿನ ಅಂಶ ಇರುವ ಪದಾರ್ಥ ಕಡಿಮೆ ಮಾಡಿ, ಕ್ಯಾಲೊರೀಸ್ ಕಡಿಮೆ ಇರುವ ಸೊಪ್ಪನ್ನು ಹೆಚ್ಚು ತಿನ್ನಬೇಕೇ ಹೊರತು, ಮೂರು ಹೊತ್ತೂ ಬರಿ ಸೊಪ್ಪು ತಿಂದು ಬದುಕಕ್ಕೆ ಆಗತ್ತಾ? ಈ ರೀತಿಯಾದ ವಿಪರೀತಕ್ಕೆ ಹೋಗದೆ ಹಿತಮಿತವಾಗಿ ಆಹಾರ ತಿನ್ನಿ. ಎಲ್ಲಾ ಸರಿಹೋಗತ್ತೆ." ಎಂದು ಡಾಕ್ಟರ್ ಉಪದೇಶ ಮಾಡಿದರು.

ಸರಿ, ಅಲ್ಲಿಗೆ ರಂಗಣ್ಣನ ಸೊಪ್ಪಿನ ಡಯೆಟ್ ಮುಗಿಯಿತು. ಮರುದಿನ ರಂಗಣ್ಣ ಹೋಟೆಲ್‌ನಲ್ಲಿ ಪೊಗದಸ್ತಾಗಿ ಮಸಾಲೆದೋಸೆ, ಜಾಮೂನು ಕೇಸರೀಭಾತು ತಿಂದು ತನ್ನ ಡಯೆಟ್ ಕಾರ್ಯಕ್ರಮಕ್ಕೆ ಮಂಗಳ ಹಾಡಿ, ನಿಟ್ಟುಸಿರು ಬಿಟ್ಟ.

ಸುಂದರೂ ಊರಿಂದ ಬಂದ. ರಂಗಣ್ಣ ತನ್ನ ಡಯೆಟ್ ಸಾಹಸದ ಬಗ್ಗೆ ಹೇಳಿ, "ನೀನು ಅದು ಹೇಗೋ ಸೊಪ್ಪು ತಿಂದು ಸಣ್ಣಗಾದೇ" ಎಂದು ಆಶ್ಚರ್ಯ ವ್ಯಕ್ತಪಡಿಸಿದಾಗ, "ನಾನು ನಿನಗೆ ಹಸಿ ಸೊಪ್ಪು ತಿನ್ನು, ಸೊಪ್ಪು ಬಿಟ್ಟು ಬೇರೇನೂ ತಿನ್ನಬೇಡ ಅಂತ ಹೇಳ್ಲಿಲ್ಲ. ಸಿಹಿತಿಂಡಿ, ಕರಿದ ಪದಾರ್ಥ ತಿನ್ನದೆ, ಆಹಾರದಲ್ಲಿ ಸೊಪ್ಪಿನ ಅಂಶ ಜಾಸ್ತಿ ಮಾಡಿದೆ ಅಂತ ನಾನು

ಹೇಳಿದ್ದು. ನೀನು ಹಾಗೆ ಅರ್ಥೈಸಿದ್ರೆ ನಾನೇನು ಮಾಡಲಿ? ಆತುರಗಾರನಿಗೆ ಬುದ್ಧಿ ಮಟ್ಟು ಅಂತಾರಲ್ಲ, ಹಾಗಾಯ್ತು ನಿನ್ನ ಸಮಾಚಾರ. ಅತ್ತಿಗೆ ಕೈಗೇನಾದ್ರೂ ನಾನು ಈಗ ಸಿಕ್ಕಿದರೆ ಮುಗೀತು ನನ್ನ ಕತೆ. ಎಲ್ಲ ನಿನ್ನಿಂದ ಅಂತ ನಾನು ಬೈಸ್ಕೋಬೇಕು,' ಎಂದು ಹೇಳಿದಾಗ ರಂಗಣ್ಣ ಮಿಕಮಿಕ ಎಂದು ಅವನನ್ನೇ ನೋಡಿದ. ಏನೇ ಆಗಲಿ, ಪಮ್ಮಿಯಂತೂ ನೆಮ್ಮದಿಯ ನಿಟ್ಟುಸಿರು ಬಿಟ್ಟಳು.

ಭಾನುವಾರ ಬಂತು. "ಪಮ್ಮಿ, ಪಲಾವ್, ಜಾಮೂನು ಮಾಡೇ. ತಿನ್ನಬೇಕು ಅಂತಾ ಆಸೆಯಾಗಿದೆ."

ಪಮ್ಮಿ ಮಾಡಿದ ಪಲಾವ್, ಜಾಮೂನು ಅತ್ಯಂತ ರುಚಿಕರವಾಗಿತ್ತು. ರಂಗಣ್ಣ ಪಲಾವ್, ಜಾಮುನು ಪೊಗದಸ್ತಾಗಿ ತಿಂದುತೇಗಿದ.

ಇನ್ನೊಂದು ಸಲ ಆ ಸುಂದರೂ ಮಾತು ಕೇಳ್ಕೊಂಡು ಡಯಟ್ ಗಿಯಟ್ ಅಂತ ಅದು ಮಾಡ್ತಾಕು, ಇದು ಮಾಡ್ತಾಕೊಂದ್ರೆ ನಾನು ಸುಮ್ಮನಿರಲ್ಲ,' ಎಂದು ಪಮ್ಮಿ ರಂಗಣ್ಣನನ್ನು ಬೆದರಿಸಿದಳು. ಬೀಸೋ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯಸ್ಸು ಅಂತಾರಲ್ಲ ಹಾಗೆ ರಂಗಣ್ಣ, 'ಇಲ್ಲ ಕಣೆ, ಇನ್ಮೇಲೆ ನೀನು ಹೇಳಿದ ಹಾಗೆ ಕೇಳ್ತೀನಿ,' ಎಂದು ಅತ್ಯಂತ ವಿನೀತನಾಗಿ ನುಡಿದ, ಆದರೂ ಮರುಕ್ಷಣವೇ, 'ನೀವು ತೂಕ ಕಡಿಮೆ ಮಾಡ್ಕೊಳ್ಳಿ, ನನ್ನ ಫ್ರೆಂಡ್ಸ್ ನೀವು ದಪ್ಪಾಂತ ಹಾಸ್ಯ ಮಾಡ್ತಾರೆಂತ ನೀನೇ ತಾನೇ ಯಾವಾಗ್ಲೂ ಹೇಳೋದು. ಅದಕ್ಕೇ ಸುಂದರೂನ ಕೇಳ್ದೆ. ಸ್ವಲ್ಪ ಎಡವಟ್ಟಾಯ್ತು, ಅಷ್ಟೆ, ನೀನೂ ಇನ್ಮೇಲೆ ನನಗೆ ಹಾಗೆಲ್ಲ ಹೇಳ್ಬೇಡ' ಎಂದ. ಪಾಪ, ಗಂಡ ಅಂದ್ಮೇಲೆ ಹೆಂಡ್ತಿ ಮೇಲೆ ಅಷ್ಟಾದರೂ ಜೋರು ಮಾಡ್ಬೇಡ್ವೇ?

## ಮೊಬೈಲು ಮತ್ತು ಮೋಟರ್ ಬೈಕು

ಸೋಮು ಅರ್ಜಂಟಾಗಿ ಮನೆಗೆ ಹೋಗ್ತಿದ್ದಾಗ ಸೋಮಿ ಫೋನ್ ಮಾಡಿದಳು ಅಂತ ಮೊಬೈಲ್ ಹಾಗೇ ಕಿವಿಗೆ ಸಿಕ್ಕಿಸಿಕೊಂಡು ಮಾತಾಡ್ತಾ ಹೋಗ್ತಿದ್ದಾಗ ಪೋಲೀಸ್ ಕೈಗೆ ಸಿಕ್ಕಿಬಿದ್ದ. ಏನ್ರೀ ಮೊಬೈಲ್ ಓಡಿಸುವಾಗ ಮಾತಾಡಬಾರದು ಅಂತ ನಿಮಗೆ ಗೊತ್ತಿಲ್ವಾ ಅಂತ ಪೋಲೀಸ್ ದಬಾಯಿಸಿದಾಗ ಸೋಮು ಸರ್ ನಿಮಗೆ ಮದುವೆಯಾಗಿದೆಯಾ ಅಂತ ಕೇಳಿದ. ಪೋಲೀಸು ಆಗಿದೆ ಅಂದಾಗ ಸರ್ ನೀವು ಮೋಟರ್ ಬೈಕ್ ಓಡಿಸುವಾಗ ಅಕಸ್ಮಾತ್ ನಿಮ್ಮ ಹೆಂಡತಿ ಫೋನ್ ಮಾಡಿದರೆ ನೀವು ಏನ್ ಮಾಡ್ತೀರ ಸರ್ ಅಂತ ಕೇಳಿದ ತಕ್ಷಣ ಪೋಲೀಸು ಸೋಮು ಕೈ ಕುಲುಕಿ ಥ್ಯಾಂಕ್ಸ್ ಕಣ್ರೀ ನನ್ನ ಹೆಂಡ್ತಿ ಮೊಬೈಲ್ ರಿಪೇರಿಗೆ ಕೊಟ್ಟಿದ್ದೆ. ಮನೆಗೆ ಹೋಗುವಾಗ ತಗೊಂಡು ಹೋಗ್ದಿದ್ರೆ ನನ್ನ ಏರೋಪ್ಲೇನ್ ಹತ್ತಿಸಿಬಿಡ್ತಾಳೆ. ನಾ ಬರ್ತೀನಿ ನೀವು ಹೊರಡಿ ಪರವಾಗಿಲ್ಲ. ಆದ್ರೆ ಮೊಬೈಲಲ್ಲಿ ಮಾತಾಡ್ತಾ ಮೋಟರ್ ಬೈಕ್ ಓಡಿಸಬೇಡ್ರೀ ಅಂದು ಪೋಲೀಸ್ ತನ್ನ ಮೋಟರ್ ಬೈಕ್ ಹತ್ತಿದರು.

**RAMAIAH**
**Indic Specialty Ayurveda**

**RESTORATION HOSPITAL**

## Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures

Proud to Announce
**NABH Accrediation**



Under the Leadership of
**Prof. Dr. G.G. Gangadharan**

## World Renowned Doctors



First Franchise
Bannerghatta




First Joint Venture
Penang, Malaysia




First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com


# ಭಾರತದ ಮೊಟ್ಟಮೊದಲ
# ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ
















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೇ?

**ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.**

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA
ON MODERN METHODS OF ANALYSIS FOR FOOD / DRUG / ENVIRONMENT
FOR GRADUATES & POST-GRADUATES IN SCIENCE, ENGG, PHARMACY,
BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

# ಫ್ರಿಡ್ಜಿಲ್ಲದ ಆ ದಿನಗಳು

**- ಸಹನಾ ಪ್ರಸಾದ್**

''ಅಡುಗೆ ಆಯಿತೇನಮ್ಮ?'' ಸೋದರ ಮಾವ-ಇನ್-ಲಾ ಅಂದರೆ ಗಂಡನ ಸೋದರಮಾವನ ಆಗಮನ ಆಯಿತು. ಬೆಳಗ್ಗೆ ಊರಿಂದ ಬಂದು ತಿಂಡಿ ತಿಂದು ಯಾರನ್ನೋ ಭೇಟಿ ಮಾಡಲು ಹೋಗಿದ್ದವರನ್ನು ಗಂಡ ನಗುನಗುತ್ತಾ ಬರಮಾಡಿಕೊಂಡರು.'' ಮಾವ, ನಮ್ಮನೇಲಿ ಅಡುಗೆ ಯಾವತ್ತೂ ರೆಡಿ. ಇವತ್ತಿನ ಅಡುಗೆ ನೆನ್ನೆ ರೆಡಿ ಇರುತ್ತೆ!'' ಅವರನ್ನು ದುರುಗುಟ್ಟುತ್ತಾ ಮಾವನೆಡೆಗೆ ನಗು ಬೀರಿದೆ. ''ಅಯ್ಯೋ, ಇವರು ಯಾವಾಗಲೂ ಜೋಕು ಮಾಡುತ್ತಿರುತ್ತಾರೆ. ಆದರೆ ಯಾರಿಗೂ ನಗು ಬರುವುದಿಲ್ಲ, ಅಷ್ಟೆ!'' ಮಾವ ಬೆಳಗ್ಗೆ ಊರಿಂದ ಹಣ್ಣು, ಬೆಣ್ಣೆ ಕಾಯಿಸಿ ಮಾಡಿದ ತುಪ್ಪ, ಉಪ್ಪಿನಕಾಯಿ, ಚಟ್ನಿ ಪುಡಿ. ಮೆಂತ್ಯದ ಹಿಟ್ಟು, ಚಿತ್ರಾನ್ನದ ಗೊಜ್ಜು, ಹಪ್ಪಳ, ಸಂಡಿಗೆ ಇತ್ಯಾದಿ ಹೊತ್ತು ಬಂದಿರುವಾಗ ಬಿಸಿ ಬಿಸಿ ಅಡುಗೆ ಮಾಡಲಾರೆನೆ ನಾನು? ಹಿಂದಿನ ದಿನದಡಿಗೆ ಬಡಿಸಲು ಅವರೇನು ಗಂಡನೆ? ರುಚಿಯಾದ ಬಿಸಿ ಸಾರು, ಅನ್ನ, ಕೋಸಿನ ಪಲ್ಯ ಮಾವನಿಗೆ ತೃಪ್ತಿಯಾದಂತೆ ಕಾಣಲಿಲ್ಲ. ಅದರೂ ಮಾತನಾಡದೆ ಉಂಡು ಎದ್ದರು. ಹಿಂದಿನ ದಿನದಡಿಗೆ ಹಾಗೆ ಫ್ರಿಡ್ಜಿಗೆ ಹೋಯಿತು. ಯಾಕೆಂದರೆ ಜತೆಯಲ್ಲಿ ಕೂತ ಗಂಡನಿಗೆ ತಂಗಳು ಬಡಿಸಲಾಗುವುದಿಲ್ಲ, ಅಲ್ಲವೆ? ಆದರೆ ರೂಮಿಗೆ ಬಂದ ಮೇಲೆ ಸರಿಯಾಗಿ ತರಾಟೆಗೆ ತೆಗೆದುಕೊಂಡೆ. ಪಾಪ, ನನ್ನ ವಾಗ್ಬಾಣದ ಎದುರು ಗಪ್ ಚಿಪ್ ಆಗಿಬಿಟ್ಟರು. ಮಾವ ಮಾರನೆಯ ದಿನವೇ ಊರಿಗೆ ಹೊರಟುಬಿಟ್ಟರು. ''ಅರ್ಧ ದಿನ ನಮ್ಮನೆಯಲ್ಲಿರುವುದಕ್ಕೆ ಎಷ್ಟು ಸಾಮಾನು ತಂದಿದೀರಿ ಮಾವ'' ಎಂದು ನಮಸ್ಕರಿಸಿದೆ. ''ಅಯ್ಯೋ, ನಿಮ್ಮತ್ತೆಗೆ ಹೊತ್ತೇ ಹೋಗಲ್ಲಮ್ಮ, ಯಾವಾಗಲೊ ಅಡುಗೆ ಮನೆಯಲ್ಲಿ ಏನೋ ಕುಟ್ಟುವುದು, ಕರೆಯುವುದು ಮಾಡುತ್ತಲೇ ಇರುತ್ತಾಳೆ.

ನಿನ್ನ ಹಾಗೆ ಹೊರಗೆ ಹೋಗಬೇಕು, ಕೆಲಸ ಮಾಡಬೇಕು ಇವೆಲ್ಲಾ ಇಲ್ಲವಲ್ಲ ''ಇವರು ಬಾಯಿ ಹಾಕಿದರು'' ಹೌದೌದು, ಹೊರಗಡೆ ಹೋಗಲು ಸೀರೆ ತೊಗೋ, ಅದಕ್ಕೆ ಸರಿಯಾಗಿ ಬಳೆ. ಸರ, ಚಪ್ಪಲಿ, ಬ್ಯಾಗು ಇತ್ಯಾದಿ ತೊಗೊ, ಇಷ್ಟೆಲ್ಲಾ ಕಷ್ಟಪಟ್ಟ ಮೇಲೆ ಅದೇ ರೀತಿಯ ಸೀರೆ ಸಹೋದ್ಯೋಗಿಯ ಬಳಿ ಕಂಡರೆ, ಅಥವಾ ಆ ಸೀರೆ ಉಟ್ಟ ದಿನ ಬಾಸ್ ಬೈದರೆ ಎಲ್ಲವನ್ನು ಬಿಸಾಕು. ಸುಸ್ತಾಗಿ ಬಂದು ತಂಗಳು ಪೆಟ್ಟಿಗೆಯಿಂದ ಎಲ್ಲ ಬಿಸಿ ಮಾಡು, ಇಲ್ಲಾ ಹೋಟೆಲ್ಲಿಗೆ ಹೋಗು, ಇವೆಲ್ಲವೂ ಇಲ್ಲ''. ತಾಯಿಯ ಕೈ ಅಡುಗೆ ತಿಂದ ಪಾಪ ಇವರಿಗೆ ನನ್ನ ಕೈ ಅಡುಗೆ ಅದರಲ್ಲು ಬರೀ ಸಾರು, ಪಲ್ಯ, ಉಪ್ಪಿಟ್ಟು ತಿಂದು ನಾಲಿಗೆ ಕೆಟ್ಟು ಹೋಗಿತ್ತು. ಮಾವ ತಂದ ರುಚಿರುಚಿಯಾದ ವ್ಯಂಜನಗಳು ಬಾಯಿ ಸಡಿಲ ಮಾಡಿತ್ತು. ಮಾವ ನಕ್ಕು ತಲೆ ಸವರಿ ಹೊರಟ ಮೇಲೆ ನಾ ಮೌನ ವ್ರತ ಆಚರಿಸಿದೆ. ಪಾಪ, ನನ್ನನ್ನು ರಮಿಸಲು ಹೋಗಿ ಆಸಾಮಿ ಪೂರ್ತಿ ಸೋತು, ಸಾಕಷ್ಟು ದಂಡ ತೆರಬೇಕಾಯಿತು. ಆದರೆ ಅವರ ಮನಸ್ಸಿನ ಬೇಜಾರು

ನಮ್ಮನೆಯಲ್ಲಿರೋ ತಂಗಳು ಪೆಟ್ಟಿಗೆ ಅರ್ಥಾತ್ ಫ್ರಿಡ್ಜಿಗೆ ತಗುಲಿ, ಮಾರನೆಯ ದಿನಕ್ಕೆ ಕೆಟ್ಟೇ ಹೋಯಿತು.

ಆಕಾಶವೇ ತಲೆ ಮೇಲೆ ಬಿದ್ದಹಾಗಾಯಿತು. ಸಾರ್ವಜನಿಕ ರಜೆ ಬಂದು ಟೆಕ್ನಿಷಿಯನ್ ಊರಿಗೆ ಹೋಗಿದ್ದರಿಂದ ಕಂಪನಿ 4-5 ದಿನ ರಿಪೇರಿ ಸಾಧ್ಯವಿಲ್ಲವೆಂದು ಕೈ ಆಡಿಸಿಬಿಡ್ತು. ಆಮೇಲೆ ಅದ್ಯಾವುದೋ ಪಾರ್ಟು ಹೋಗಿದೆ, ಎಲ್ಲೋ ಉತ್ತರದಿಂದ ಬರಬೇಕು ಅಂತ ಸತಾಯಿಸಿಬಿಟ್ಟರು ದಿನಾ ಬೆಳಗ್ಗೆ ಎದ್ದು, ರವೆ ಹುರಿ, ಈರುಳ್ಳಿ, ಹಸಿಮೆಣಸಿನಕಾಯಿ ಇತ್ಯಾದಿ ಹೆಚ್ಚು, ಉಪ್ಪಿಟ್ಟು ಮಾಡು, ಇಲ್ಲ ಅವಲಕ್ಕಿ ಒಗ್ಗರಣೆ ಹಾಕು, ಉಶ್ಯಪ್ಪ ಸಾಕಾಗಿ ಹೋಯಿತು. ದೋಸೆ, ಇಡ್ಲಿ ಮಾಡುವ ಹಾಗೆ ಇರಲಿಲ್ಲ, ಯಾಕೆಂದರೆ ಮೂಲೆ ಮನೆಯ ಆಂಟಿ ಸ್ವಲ್ಪ ಹಣ ತೆಗೆದುಕೊಂಡು, ಪ್ರೀತಿಯಿಂದ ಕೊಡುತ್ತಿದ್ದ ಚಟ್ನಿ, ಸಾಗು ಇವೆಲ್ಲಾ ಹಳಸಿಹೋಗುತ್ತಿತ್ತು. ಅವರು ಮನೆಯಲ್ಲುಳಿದ ಸಾಮಾನಿನಲ್ಲಿ ಮಾಡಿಕೊಡುತ್ತಿದ್ದರು, ಆದರೆ ಫ್ರಿಡ್ಜಿನಲ್ಲಿಟ್ಟಿರುತ್ತಿದ್ದರಿಂದ ಕೆಡುತ್ತಿರಲಿಲ್ಲ ಎಂಬ ಸತ್ಯ ಅರಿವಾಗತೊಡಗಿತ್ತು. ಅದಲ್ಲದೆ ಹಾಲಿನವ ಕೊಡುತ್ತಿದ್ದ ಮೊಸರು, ನಮ್ಮ ಮನೆಯ ಕೆಲಸದವಳು ''ಫ್ರೆಶ್'' ಎಂದು ತರುತ್ತಿದ್ದ ಸೊಪ್ಪು, ಶುಂಠಿ, ನಿಂಬೆ ಹಣ್ಣಿನ ಕತೆಯೊ ಅದೇ ಎಂಬರಿವಾಗತೊಡಗಿತ್ತು. ಎದುರು ಹೋಟೆಲ್ಲಿಂದ ತರುತ್ತಿದ್ದ ಸಾಂಬಾರು ಮನೆಗೆ ಬಂದ ಸ್ವಲ್ಪ ಹೊತ್ತಿನಲ್ಲೇ ವಾಸನೆ ಬೀರಿ ಎಸೆಯಲ್ಪಡುತ್ತಿತ್ತು.

ಎಲ್ಲಕ್ಕಿಂತ ನಾನು ಮಾಡಿರುವ ಅಡುಗೆ ಚೆನ್ನಾಗಿರುತ್ತೆ, ಫ್ರಿಡ್ಜಿನಲ್ಲಿಡುವುದರಿಂದ ಆ ರೀತಿ ಬ್ರೌನ್ ಆಗಿ, ಒಂಥರಾ ವಾಸನೆ ಬೀರುತ್ತಿರುತ್ತೆ ಎಂದು ನಂಬಿದ ನನಗೆ, ಗಂಡನಿಗೆ ಭಾರಿ ದುಃಖವಾಯಿತು.

''ಒಂದು ವಾರದ ನಂತರ ಗಂಡ ಬಂದ ತಕ್ಷಣ ಬೇಕರಿಯಿಂದ ತಂದ ಬ್ರೆಡ್ಡು, ಚಕ್ಕುಲಿ ಇಟ್ಟು ನಗೆಬೀರಿದೆ. ಅದು ಹೋದರೆ ಹೋಗಲಿ ಬಿಡಿ.

ನಾನೀಗ ಬದಲಿ ವ್ಯವಸ್ಥೆ ಮಾಡಿರುವೆ'' ಅವರ ಮುಖ ಮೊರದಗಲವಾಯಿತು.'' ಇವತ್ತಿನಿಂದ ಎಲ್ಲ ಫ್ರೆಶ್ ಅಲ್ಲವಾ, ಇನ್ಮುಂದೆ ತಂಗಳು ಪೆಟ್ಟಿಗೆಯಿಲ್ಲ, ತಂಗಳೂ ಇಲ್ಲ, ಮೂಲೆ ಮನೆ ಆಂಟಿ, ಕೆಲಸದವಳು, ಒಡೆದ ಕಳೆದ ವಾರದ ಮೊಸರು, ಹೋಟೆಲಿನವ ಬಿಸಾಕುವ ಸಿಪ್ಪೆ, ಕೊಳೆತ ತರಕಾರಿಯಿಂದ ಮಾಡಿದ ಸಾಂಬಾರು ಎಲ್ಲ ಬಂದ್. ಈಗ ನೋಡು ನನ್ನ ಆರೋಗ್ಯ ಎಷ್ಟು ಇಂಪ್ರೂವ್ ಆಗುತ್ತೆ. ಆಹಾ, ಈಗಲೇ ಅಮ್ಮನಿಗೆ ತಿಳಿಸುವೆ. ನೀ ಆರಿಸಿದ ಹುಡುಗಿ ಎಷ್ಟು ಒಳ್ಳೆಯವಳು ಎಂದು'' ಖುಶಿಯಿಂದ ಕುಣಿದಾಡುವುದು ಬಾಕಿ. ''ಸ್ವಲ್ಪ ಕೇಳಿ, ನಾಳೆಯಿಂದ ರುಕ್ಕಮ್ಮನಿಗೆ ಬರ ಹೇಳಿದೀನಿ. ಅಡುಗೆ ತಿಂಡಿ ಮಾಡಲು!'' ತಾಯಿಯ ಅಡುಗೆ, ರುಕ್ಕಮ್ಮನ ಅಡುಗೆಗಿರುವ ಅಜಗಜಾಂತರವನ್ನು ನೆನೆದು ಅವರಿಗೆ ಮಾತೇ ಹೊರಡಲಿಲ್ಲ.

# ಕವಿಯ ಪರೀಕ್ಷೆ

– ಬೇಲೂರು ರಾಮಮೂರ್ತಿ

ಕವಿ ಕಾಳಿದಾಸನಿಗೆ ತಾನು ಜ್ಞಾನಿಯಾಗಿರುವುದರ ಅರಿವು ಕೊಂಚ ಹೆಚ್ಚೇ ಆಗಿದ್ದ ದಿನಗಳು. ಒಂದು ಸಾರಿ ಅವನು ಪರ್ಯಟನ ಮಾಡುತ್ತಾ ಒಂದು ಊರಿನ ಬಳಿ ಬಂದಾಗ ಅವನಿಗೆ ಬಾಯಾರಿಕೆ ಆಗಿತ್ತು. ಸುತ್ತಮುತ್ತ ನೋಡಿದ. ಭಾವಿಯೊಂದರ ಬಳಿ ಹೆಂಗಸೊಬ್ಬಳು ನೀರು ಸೇದುತ್ತಿದ್ದಳು. ಕಾಳಿದಾಸ ಅವಳ ಬಳಿ ಸಾರಿ “ನನಗೆ ಬಾಯಾರಿದೆ, ಕೊಂಚ ನೀರು ಕೊಡುತ್ತೀರಾ “ಅಂತ ಕೇಳಿದ. ಅದಕ್ಕೆ ಆ ಹೆಂಗಸು “ನನಗೆ ನಿನ್ನ ಪರಿಚಯವಿಲ್ಲವಲ್ಲ ಮಗು, ನಿನ್ನ ಪರಿಚಯ ಹೇಳು ನೀರು ಕೊಡುತ್ತೇನೆ” ಎಂದಳು ಆಗ ಕಾಳಿದಾಸ ತನ್ನ ಪರಿಚಯ ಹೇಳಲು ಪ್ರಾರಂಭಿಸಿದ.

ಕಾಳಿದಾಸ: ನಾನೊಬ್ಬ ಪ್ರವಾಸಿ

ಹೆಂಗಸು: ಲೋಕದಲ್ಲಿ ಇಬ್ಬರೇ ಪ್ರವಾಸಿಗಳು, ಒಬ್ಬ ಸೂರ್ಯ ಮತ್ತೊಬ್ಬ ಚಂದ್ರ. ಅವರಿಬ್ಬರೂ ಹಗಲು ರಾತ್ರಿಗಳನ್ನು ನಡೆಸುತ್ತಿದ್ದಾರೆ

ಕಾಳಿದಾಸ: ನಾನೊಬ್ಬ ಈ ಊರಿನ ಅತಿಥಿ

ಹೆಂಗಸು: ಲೋಕದಲ್ಲಿ ಇಬ್ಬರೇ ಅತಿಥಿಗಳು – ಒಂದು ಯೌವನ ಮತ್ತೊಂದು ಧನ. ಅವುಗಳು ಹೀಗೆ ಬಂದು ಹಾಗೆ ಹೊರಟು ಹೋಗುತ್ತವೆ. ನಿಜ ಹೇಳು ನೀನು ಯಾರು

ಕಾಳಿದಾಸ: ನಾನೊಬ್ಬ ಸಹನಶೀಲ

ಹೆಂಗಸು: ಸುಳ್ಳು, ಈ ಲೋಕದಲ್ಲಿ ಸಹನಶೀಲರು ಇಬ್ಬರೇ ಅವು ಒಂದು ಭೂಮಿ ಇನ್ನೊಂದು ಮರ. ಭೂಮಿ ತನಗೆ ಕೇಡು ಮಾಡುವವನ ಬಗೆಗೂ ಸಹನೆಯಿಂದಿರುತ್ತದೆ. ಮರ ತನಗೆ ಕಲ್ಲು ಎಸೆದವರಿಗೂ ರುಚಿ ರುಚಿಯಾದ ಹಣ್ಣುಗಳನ್ನು ಕೊಡುತ್ತದೆ. ನಿಜ ಹೇಳು ನೀನು ಯಾರು

ಕಾಳಿದಾಸ: ನಾನೊಬ್ಬ ಹಠಮಾರಿ

ಹೆಂಗಸು: ಅದೂ ಸರಿ ಅಲ್ಲ. ಲೋಕದಲ್ಲಿ ಇಬ್ಬರೇ ಹಠಮಾರಿಗಳು ಅವು ಉಗುರು ಮತ್ತು ಕೂದಲು, ಎಷ್ಟು ಸಾರಿ ಕತ್ತರಿಸಿದರೂ ಮತ್ತೆ ಮತ್ತೆ ಬೆಳೆಯುತ್ತವೆ

ಕಾಳಿದಾಸ: ನಾನೊಬ್ಬ ಮೂರ್ಖ

ಹೆಂಗಸು: ನಿನ್ನ ಉತ್ತರವೇ ಸರಿ ಇಲ್ಲ. ಈ ಲೋಕದಲ್ಲಿ ಇಬ್ಬರೇ ಮೂರ್ಖರು. ಒಬ್ಬ ರಾಜ. ಯೋಗ್ಯತೆ ಇಲ್ಲದಿದ್ದರೂ ಪ್ರಜೆಗಳ ಮೇಲೆ ಏರಿ ರಾಜ್ಯಭಾರ ಮಾಡುತ್ತಾನೆ. ಇನ್ನೊಬ್ಬ ಆಸ್ಥಾನದ ಮಂತ್ರಿ. ರಾಜನನ್ನು ಓಲೈಸುವುದಕ್ಕಾಗಿ ಸುಳ್ಳುಗಳನ್ನೂ ನಿಜವೆಂದು ಬಿಂಬಿಸುತ್ತಾನೆ. ಇಷ್ಟೊತ್ತಿಗೆ ಸುಸ್ತಾಗಿದ್ದ ಕಾಳಿದಾಸ ಕಣ್ಣು ಮುಚ್ಚಿ ಹೆಂಗಸಿನ ಕಾಲಿಗೆ ಬಿದ್ದು ನಾನು ಯಾರೆಂದು ನನಗೇ ಗೊತ್ತಿಲ್ಲ ಆದರೂ ನನಗೆ ಬಾಯಾರಿಕೆ ಆಗುತ್ತಿದೆ. ದಯಮಾಡಿ ಸ್ವಲ್ಪ ನೀರು ಕೊಡು ತಾಯೇ ಅಂದ. ಕಾಳಿದಾಸ ಎದ್ದು ಕಣ್ಣು ಬಿಟ್ಟಾಗ ಹೆಂಗಸಿನ ಜಾಗದಲ್ಲಿ ಸಾಕ್ಷಾತ್ ಸರಸ್ವತಿ ಕಂಡಳು

ಸರಸ್ವತಿ: ಏಳು ಮೇಲೆ, ವಿದ್ಯೆಯಿಂದ ಜ್ಞಾನಾರ್ಜನೆ ಆಗುತ್ತದೆ ಅಹಂಕಾರವಲ್ಲ. ವಿದ್ಯೆಯಿಂದ ದೊರೆತ ಮಾನ ಸಮ್ಮಾನಗಳನ್ನೇ ಸರ್ವಸ್ವವೆಂದು ತಿಳಿದಿದ್ದ ನಿನ್ನ ಕಣ್ಣು ತೆರೆಸಬೇಕಿತ್ತು. ಅದಕ್ಕೆ ಈ ಪ್ರಶ್ನೆಗಳನ್ನು ಕೇಳಿದೆ

ಕಾಳಿದಾಸ: ನನ್ನದು ತಪ್ಪಾಯಿತು ತಾಯಿ. ವಿದ್ಯಾ ದದಾತಿ ವಿನಯಂ ಎನ್ನುವುದನ್ನು ಈ ಜನ್ಮದಲ್ಲಿ ನಾನು ಮರೆಯುವುದಿಲ್ಲ. ನೀರು ಕೊಟ್ಟ ಸರಸ್ವತಿ ಅಂತರ್ಧಾನಳಾದರೆ, ಕಾಳಿದಾಸ ತನ್ನ ದಾಹ ತಣಿಸಿಕೊಂಡು ಮುಂದಿನ ದಾರಿ ಹಿಡಿದ.

TEMPLE OF KNOWLEDGE

**DISTANCE EDUCATION**

(Govt. & UGC Recognised Universities)

# BEECHI VIDYA KENDRA

## ADMISSION OPEN - APPLY NOW

## CENTER OF DISTANCE LEARNING

**MBA WITH 6 SPECIALIZATIONS, MA, M.COM, MCA, MSc-BT, PGDCS, BA & B.COM - AGE BASIS**

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE OF KNOWLEDGE

Email : admin@beechi.in
Web : www.becchi.in
Mob. 9740968677

# ಸ್ವಂತಕ್ಕಿಲ್ಲದ ಸಮಾಚಾರ

– ಎಂ. ಕೆ. ಭಾಸ್ಕರರಾವ್

**ನಿವೃತ್ತಿಯಾದ ಪತ್ರಕರ್ತರಿಗೆ ಸಂಬಳ ನಿಲ್ಲುತ್ತದೆ. ಆದರೆ ಓದುವ ಚಟ ನಿಲ್ಲುತ್ತದೆಯೇ?**

ಇತ್ತೀಚಿನ ದಿವಸಗಳಲ್ಲಿ ದಿನ ಪತ್ರಿಕೆಗಳನ್ನು ಓದುವಾಗ ನನ್ನೊಳಗೊಳಗೇ ಆಗುತ್ತಿರುವ ಬದಲಾವಣೆಯೊಂದು ಗೋಚರವಾಗುತ್ತಿದೆ. ಸಂಗತಿಯನ್ನು ವಿವರಿಸುವ ಮುನ್ನ ನನ್ನ ವಿಚಾರದಲ್ಲಿ ಗೊತ್ತಿಲ್ಲದವರಿಗಾಗಿ ಒಂದಿಷ್ಟು ಪ್ರವರವನ್ನು ನಿವೇದಿಸಿಕೊಳ್ಳಬೇಕಿದೆ. ಅಂದಹಾಗೆ ನನಗೆ ಈಗ 72 ವರ್ಷ. ಪತ್ರಕರ್ತನಾಗಿ ಕೆಲಸ ಮಾಡುತ್ತಿದ್ದು ಮುಖ್ಯವಾಹಿನಿ ಪತ್ರಿಕೋದ್ಯಮದಿಂದ ನಿವೃತ್ತನಾಗಿ ಹತ್ತು ವರ್ಷ ಕಳೆದಿದೆ. ಸೇವೆಯಲ್ಲಿದ್ದ ಸಮಯದಲ್ಲಿ ಕಛೇರಿಯಿಂದಲೇ ಮನೆಗೆ ಪೂರೈಕೆಯಾಗುತ್ತಿದ್ದ ಆರು ದೈನಿಕಗಳನ್ನಷ್ಟೇ ಅಲ್ಲದೆ ಕಛೇರಿಗೆ ಹೋದ ಬಳಿಕ ಇತರ ಪತ್ರಿಕೆಗಳನ್ನೂ ಓದುವ ಹವ್ಯಾಸವಿತ್ತು. ಬರಬರುತ್ತ ಪತ್ರಿಕಾ ಓದು ಒಂದು ಚಟವೇ ಆಗಿಹೋಯಿತು. ನಿವೃತ್ತಿಯಾದವರಿಗೆ ಸಂಬಳ ನಿಲ್ಲುತ್ತದೆ. ಆದರೆ ಓದುವ ಚಟ ನಿಲ್ಲುತ್ತದೆಯೇ? ಮನೆಗೆ ಮೂರು ದೈನಿಕಗಳನ್ನೂ ಒಂದೆರಡು ನಿಯತ ಕಾಲಿಕಗಳನ್ನೂ ತರಿಸಿಕೊಂಡು ಓದುವ ನಿವೃತ್ತಿ ನಂತರದಲ್ಲೂ ಮುಂದುವರಿದಿರುವ ನನ್ನ "ಕೆಟ್ಟ ಅಭ್ಯಾಸ" ಮನೆಯಲ್ಲಿ ಸಾಕುಸಾಕೆನಿಸುವಷ್ಟು ನಿತ್ಯ ಜಟಾಪಟಿಗೆ ಕಾರಣವಾಗಿದೆ. ಅಂದಹಾಗೆ ನಿತ್ಯವೂ ಜಗಳ ನಡೆಯುತ್ತದಾ ಎಂದು ಕೆದಕಿ ಕೇಳಬೇಡಿ. ವರ್ಷದಲ್ಲಿ ನಾಲ್ಕು ದಿವಸ ಪತ್ರಿಕಾಲಯಗಳಿಗೆ ರಜೆ ಇರುತ್ತದೆ. ಆ ನಾಲ್ಕೂ ದಿವಸ ನನಗೆ ಮತ್ತು ನನ್ನಂಥವರಿಗೆ ನಿತ್ಯ ಭವಿಷ್ಯದಲ್ಲಿ ಅಚ್ಚಾಗದ ನೆಮ್ಮದಿ ಯೋಗ!

"ಇಷ್ಟು ವರ್ಷ ಓದಿದ್ದು ಬಿಟ್ಟರೆ ಬೇರೆ ಏನು ಮಾಡಿದ್ದೀರಿ" ಎಂದು ಆಗೀಗ, ಮುಖ್ಯವಾಗಿ ಪೇಪರ್ ಬಿಲ್ ಬಂದಾಗೆಲ್ಲ, ನನ್ನಾಕೆ ಬಿಲ್ಲನ್ನು ಕೈಗೆತ್ತಿಕೊಂಡು ಬಾಣದ ಗುರಿ ಇಟ್ಟಂತೆ ಕಿಚಾಯಿಸುವುದು "ಮಾಸ"ದ ಮಾತು. ಅದಕ್ಕೆ ನಾನು ಏನೂ ಪ್ರತಿಕ್ರಿಯಿಸುವುದಿಲ್ಲ. ಬಾಯಿ ಬಿಡುವುದು ಎಂದರೆ ಬಣ್ಣಗೇಡಾಗುವುದು ಎಂದೇ ಅರ್ಥ. ಪೇಪರನ್ನು ಓದಿ ದೇಶದಲ್ಲಿ ಯಾರು ಉದ್ಧಾರವಾಗಿದ್ದಾರೆ, ಒಂದು ಹೆಸರನ್ನು ಹೇಳಿ ನೋಡೋಣ ಎಂದು ಆಕೆ ಮತ್ತೆ ಸವಾಲು ಹಾಕುವುದನ್ನು ಊಹಿಸಿಕೊಳ್ಳಬಲ್ಲೆ. ನಿಜಕ್ಕೂ ನನ್ನಾಕೆ ನಿಜವನ್ನೇ ಹೇಳಿದ್ದು. ನಿಜ ಹೇಳಿ, ದೈನಿಕವನ್ನೋ ಮಾಸಿಕವನ್ನೋ ಓದಿ ಉದ್ಧಾರವಾದ ಒಂದೇ ಒಂದು ಹೆಸರು ನಿಮಗೆ ಗೊತ್ತಿದ್ದರೂ ನಿಮಗೆ ನನ್ನ ನಮೋನಮಃ. ಇದೆಲ್ಲ ಗೊತ್ತಿರುವ ನಾನು ಮೂಗಿನ ತುದಿಗೆ ಜಾರಿ ಬಂದು ನಿಂತ ಕನ್ನಡಕವನ್ನು ಹಿಂತಳ್ಳಿ ಏನೂ ಕೇಳಿಸಿಲ್ಲದವನಂತೆ ಓದಿನಲ್ಲಿ ಮುಳುಗುತ್ತೇನೆ. "ಹೇಳಿದ್ದು ಕೇಳಿಸಲಿಲ್ಲವಾ...? ನಿಮಗೆ ಕಣ್ಣೆರಡೂ ಮಂಜಾಗಿದೆ, ಬಲ್ಲೆ. ಕಿವಿ ಚೆನ್ನಾಗೇ ಇದೆಯಲ್ಲ" ಎಂದು ಚಪಾತಿ ಹಿಟ್ಟನ್ನು ನಾದುವಂತೆ ನಾದುತ್ತಾಳೆ. ಈ ಬಗೆಯ ನಾದಾಮೋದ ನಿತ್ಯವೂ ಇದ್ದಿದ್ದೇ.

ಪತ್ರಿಕೆಗಳನ್ನು ಓದುವ ಚಟ ಅಂಟಿದ್ದು ಪತ್ರಕರ್ತನಾದ ತಪ್ಪಿಗೆ ಜೀವಮಾನದುದ್ದಕ್ಕೂ ತೆರುತ್ತಲೇ ಇರಬೇಕಾದ ದಂಡ ಎನ್ನುವುದನ್ನು, ನೀವು ಹೇಳುವುದಕ್ಕಿಂತ ಮೊದಲೇ ನಾನು ಬಹಿರಂಗವಾಗಿಯೇ ಒಪ್ಪಿಕೊಂಡುಬಿಡುತ್ತೇನೆ. ಇಷ್ಟು ಹೇಳಿದ ನಂತರದಲ್ಲಿ ಧರ್ಮಸ್ಥಳದಲ್ಲೋ ಚಾಮುಂಡೇಶ್ವರಿ ಸಮ್ಮುಖದಲ್ಲೋ ಆಣೆ ಪ್ರಮಾಣ ಮಾಡಬೇಕೆಂದು ನೀವು ಕೂಡಾ ಕೇಳಲಾರಿರಿ. ಈ ಮಾತನ್ನು ನಿಮ್ಮೊಂದಿಗೆ ಹಂಚಿಕೊಂಡ ದಿವಸವೂ ಪೇಪರನ್ನು ಓದುತ್ತ, ಒಂದನೇ ಪುಟದಿಂದ ಆರಕ್ಕೋ ಹನ್ನೊಂದಕ್ಕೋ ಹಾರುತ್ತ, ಮರಳಿ ಹಿಂದಕ್ಕೆ ಬಂದು ಎರಡು ಮೂರು ಎನ್ನುವಂತೆ ತಿರುವಿ ಹಾಕುತ್ತ ಸಂಪಾದಕೀಯ ಪುಟಕ್ಕೆ ಬರುವ ಹೊತ್ತಿಗೆ ನನ್ನಾಕೆ ಅಡುಗೆ ಮನೆಯಲ್ಲಿ ಹಾಕಿದ ಕಾಫೀ ಡಿಕಾಕ್ಷನ್ ಪರಿಮಳ ಅಡರುತ್ತದೆ. ಮೂಗಿನ ಹೊರಳೆಗಳು ಅರಿವಿಗೇ ಬಾರದಂತೆ ಅರಳಿ ಘಮಲನ್ನು ಹೀರುತ್ತವೆ.

ಹೆಂಡತಿ, ಎಷ್ಟೆಂದರೂ ಹೆಂಡತಿಯೇ. ಮದುವೆಯಾದ ಹೊಸದರಲ್ಲಿ ಪತ್ನಿ ಎನ್ನುವುದು ಬಿಟ್ಟಿರಲಾಗದ ಅಮಲು. ಹೆಂಡತಿ ಎಂಬ ಶಬ್ದದಲ್ಲಿಯೇ ಹೆಂಡವಿರುವುದರಿಂದ ಹೆಂಡ–ತಿಯೊಂದಿಗೇ ಕಾಲ ಕಳೆಯುವುದರಿಂದ ಅಮಲು ಸಹಜವಾಗೇ ಹೆಚ್ಚಿರುತ್ತದೆ ಎಂಬ ವ್ಯಾಖ್ಯಾನವನ್ನು ಯಾರೋ ಮಾಡಿದ್ದನ್ನು ಓದಿದ ನೆನಪು ಸಾಯದೆ ಉಳಿದುಕೊಂಡಿದೆ. ಬರಬರುತ್ತ, ದಾಂಪತ್ಯ ಜೀವನದ ಕಾವು ಇಳಿಯುತ್ತ ಹೋದಂತೆ, ಅದರಲ್ಲೂ ಒಂದೆರಡು ಮಕ್ಕಳಾದ ಬಳಿಕವಂತೂ, ಹೆಂಡತಿ ಕಿರಿಕಿರಿಯಾಗುತ್ತಾಳೆ ಎನ್ನುವುದು ಗಂಡಸಾಗಿ ಮೀಸೆ ಹೊತ್ತ ಅನೇಕರ ಆರೋಪ.

ಹೆಂಡತಿ ಎನ್ನುವ ಶಬ್ದದಲ್ಲಿ "ಹೆಂಡ"ವೂ ಇದೆ ಎನ್ನುವವರು ಅದೇ ಹೆಂಡತಿಯಲ್ಲಿ "ಅತಿ"ಯೂ ಇದೆ ಎನ್ನುವುದನ್ನು ಮರೆತುಬಿಡುತ್ತಾರೆ. ಮದುವೆಯಾದ ಹೊಸದರಲ್ಲಿ ಹೆಂಡವನ್ನು ಕಾಣುವ ಗಂಡ–ಸು, ಅದೇ ಹೆಂಡತಿಯಲ್ಲಿರುವ "ಅತಿ" ಮುಂದೊಂದು ದಿವಸ ತನಗೇ ಹೆಚ್ಚೆನಿಸುತ್ತದೆ ಎನ್ನುವುದನ್ನು ಒಪ್ಪಿಕೊಳ್ಳುವುದಿಲ್ಲ. ನನಗೆ ಮಾತ್ರ ಅಂಥ ಸಮಸ್ಯೆ ಇಲ್ಲ. ಮದುವೆಗೆ ಮೊದಲು ಲೇಖನವೊಂದರಲ್ಲಿ ಹೆಂಡತಿ ಶಬ್ದದಲ್ಲಿ ಹೆಂಡವೂ ಇದೆ ಮುಂದೊಂದು ಸಮಯದಲ್ಲಿ ಅದು ಅತಿ–ಯೂ ಆಗುತ್ತದೆ ಎಂದು ಬರೆದಿದ್ದೆ. ಇದನ್ನು ಓದಿ ಇಂದಿಗೂ ನೆನಪಿಟ್ಟುಕೊಂಡಿರುವಾಕೆ ನನ್ನಾಕೆ. ಅವಳ ನಿಘಂಟಿನಲ್ಲಿ ಮರೆವು ಎಂಬ ಶಬ್ದವೇ ಇಲ್ಲ.

ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುವ ಗುಣಕ್ಕೆ ಪ್ರತಿಯಾಗಿ ಎಷ್ಟು ಬಾರಿ ಹೇಳ್ತೀಯಾ, ಅತಿಯಾಯ್ತು ಎಂದರೆ "ಹೆಂಡತಿಯೆಂದರೆ ಅದರಲ್ಲಿ ಅತಿಯೂ ಇದೆ ಎಂದು ತಾವೇ ಬರೆದಿದ್ದುದು ಮರೆತುಹೋಯ್ತಾ" ಎಂದು ಮೂತಿಗೆ ತಿವಿಯುವಂತೆ ಕೈ ಝಾಡಿಸಿ ಉತ್ತರವುಂಟೋ ಎಂಬಂತೆ ನೋಡುತ್ತಾಳೆ. ಪೇಪರಿನ ಹಾಳೆಗಳ ನಡುವೆ ಮುಖ ಹುದುಗಿಸಿಕೊಳ್ಳುತ್ತೇನೆ. ಕೇಳಿದರೂ ಕೇಳಿಸದವನಂತೆ...

ಅಂದ ಹಾಗೆ, ನಿಮ್ಮಲ್ಲಿ ಯಾರಿಗಾದರೂ ಉರ್ದು ಭಾಷೆ ಬರುತ್ತದೋ ಹೇಗೆ? ಉರ್ದು ಎಂದು ಹೇಳುವಷ್ಟಕ್ಕೆ ಮಾತ್ರವೇ ಆ ಭಾಷೆ

ನನಗೆ ಬರುತ್ತದೆ. ಅದರಲ್ಲಿ ಬಹುಶ್ರುತವಾದೊಂದು ಗಾದೆಯೊಂದುಂಟಂತೆ. ಗಾದೆಯನ್ನೂ ಅದರ ಅರ್ಥವನ್ನೂ ನನಗೆ ತಿಳಿಸಿ ಹೇಳಿದವರು ಹೈದರಾಬಾದ್ ಕರ್ನಾಟಕದ ಅಸ್ಮಿತೆ ಎನಿಸಿದ್ದ ಬರಹಗಾರ ಶಾಂತರಸ. ಅವರು ಕಲಿತಿದ್ದು ಉರ್ದು ಮಾಧ್ಯಮದಲ್ಲಿ. ಬೆಳೆದುದು ಕನ್ನಡ ಸಾಹಿತಿಯಾಗಿ. ಎಲ್ಲ ಅರ್ಥದಲ್ಲೂ ಅವರು ಕನ್ನಡ-ಉರ್ದು ಸಮನ್ವಯ ಸಾಹಿತಿ. "ಹರ್ ಷರೀಫ್ ಆದ್ಮಿ..." ಎಂದು ಶುರುವಾಗುವ ಗಾದೆ ಅದು. "ಪ್ರತಿಯೊಬ್ಬ ಸಜ್ಜನ ವ್ಯಕ್ತಿಯೂ ಪತ್ನಿಗೆ ಹೆದರುತ್ತಾನೆ" ಎಂಬುದು ಅದರ ಅರ್ಥ.

ಹೆಂಡತಿಗೆ ಹೆದರದೇ ಇರುವಾತ ದುರ್ಜನ ಆಗಿಬಿಡುವ ಅಪಾಯವಿರೋ ಕಾರಣ, ಎಲ್ಲರೂ ಸಜ್ಜನರಾಗಿರಲು ಬಯಸುತ್ತಾರೆ. ಗಾದೆ ಮಾತು ಬಿಡಿ, ಹೆಂಡತಿಗೆ ಅಂಜುತ್ತ ಅಂಜುತ್ತ ಇರುವುದರಲ್ಲಿ ಒಂದು ಬಗೆಯ ಸುಖಾನುಭವವೂ ಇದೆ ಎನ್ನವುದು ನನ್ನ ಸ್ವಾನುಭವ. ಎಷ್ಟೇ ವಟವಟಗುಟ್ಟಿದರೂ ನಾನು ಸಂಪಾದಕೀಯ ಪುಟಕ್ಕೆ ಬರುವಷ್ಟರಲ್ಲಿ ಡಿಕಾಕ್ಷನ್ ಪರಿಮಳ ಮಾತ್ರವೇ ಅಲ್ಲ ನಾನು ಕೂತಲ್ಲಿಗೇ ಬಿಸಿಬಿಸಿ ಕಾಫಿಯೂ ಬರುತ್ತದೆ. ಪಕ್ಕದಲ್ಲೇ ಕೂತು ತನಗೆ ಕಾಣಿಸುವ ಪುಟಗಳ ಮೇಲೆ ಕಣ್ಣೋಡಿಸುತ್ತ ನಿಧನ ವಾರ್ತೆ ಬಗ್ಗೆ ಕೇಳುತ್ತಾಳೆ. ಅವಳಿನ್ನೂ ಬ್ಯಾಂಕ್ ಕೆಲಸದಲ್ಲಿರುವ ಕಾರಣ, ಪ್ರಮುಖರು ಸತ್ತರೆ ಒಂದು ರಜೆ ಸಿಕ್ಕೀತಲ್ಲ ಎಂಬ ದೂರದ ಆಸೆಯಲ್ಲಿ ನಿಧನದ ಸುದ್ದಿ ಆಕೆಗೆ ಒಂಥರಾ ಸುಖವನ್ನು ಕೊಡುತ್ತದೆಂದು ನನ್ನ ನಂಬಿಕೆ.

ನಿಧನ ವಾರ್ತೆ ಪ್ರಕಟಿಸುವ ವಿಚಾರದಲ್ಲಿ ಕನ್ನಡ ದೈನಿಕಗಳು ಅಷ್ಟೆಲ್ಲ ಉದಾರವಾಗಿಲ್ಲ ಎನ್ನುವುದು ನನ್ನಾಕೆಯ ನಿಲುವು. ಅವಳ ತೌರೂರು ಉಡುಪಿ ಹತ್ತಿರ. ತಮ್ಮ ಜಿಲ್ಲೆಯಿಂದ ಬರುವ ಪತ್ರಿಕೆಯಲ್ಲಿ ಪುಟಗಟ್ಟಲೆ ನಿಧನವಾರ್ತೆ ಇರುತ್ತದೆ. ಎಲ್ಲಿ ಯಾರು ಯಾವಾಗ ಸತ್ತರು ಎನ್ನುವುದರ ಸಾದ್ಯಂತ ವಿವರ ಇರುತ್ತದೆ. ಆದರೆ ನೀವು ಕೆಲಸ ಮಾಡಿದ ಪತ್ರಿಕೆಯೂ ಸೇರಿದಂತೆ ಇಲ್ಲಿಂದ ಪ್ರಕಟವಾಗುವ ಪತ್ರಿಕೆಗಳೆಲ್ಲವೂ ಬುರ್ನಾಸು ಎಂದು ಒಂದು ದಿವಸ ತೀರ್ಪು ಕೊಟ್ಟುಬಿಟ್ಟಳು. ಅಲ್ಲ ಹಾಗಲ್ಲ ಎನ್ನಲು ನನ್ನ ಬಳಿ ಪುರಾವೆ ಇರಲಿಲ್ಲ. ಪತಿಪರಮೇಶ್ವರ ಎನಿಸಿಕೊಳ್ಳುವವರು ನಿರಾಯುಧರಾಗುವುದು ಇಂಥ ಸಂದರ್ಭಗಳಲ್ಲೇ.

ಅಂದಹಾಗೆ ಆರಂಭದಲ್ಲಿ ಹೇಳಿದಂತೆ ಪತ್ರಿಕೆ ಓದುವಾಗ ಅದರಲ್ಲೂ ಮುಖ್ಯವಾಗಿ ನಿಧನ ವಾರ್ತೆ ಓದುವಾಗೆಲ್ಲ ಒಂಥರಾ ಎನಿಸುತ್ತದೆ. ನನ್ನ ವಯಸ್ಸು ವಾರಗೆಯವರೆಲ್ಲ ಒಬ್ಬೊಬ್ಬರಾಗಿ ಜಾಗ ಖಾಲಿ ಮಾಡುತ್ತಿರುವುದು ನಿಧನ ವಾರ್ತೆಯಿಂದ ಗೊತ್ತಾಗುತ್ತಿದೆ. ಇಂದಿನ ಪತ್ರಿಕೆ ಓದುವಾಗ ನಾಳೆ ಯಾರ ನಿಧನ ವಾರ್ತೆ ಬರುತ್ತದೋ ಎಂಬ ಆತಂಕ ಕಾಡುತ್ತದೆ. ಬೇಸರ ಎಂದರೆ ನನ್ನ ನಿಧನ ವಾರ್ತೆಯನ್ನು ಓದಲು ನಾನಿರೋಲ್ಲ ಎನ್ನುವುದು. ಚಿತ್ರ ಸಹಿತ ಹಾಕುತ್ತಾರೋ, ಒಂದು ಪ್ಯಾರಾದಲ್ಲಿ ಕಥೆ ಮುಗಿಸುತ್ತಾರೋ ಎಂದೆಲ್ಲ ಯೋಚನೆ ಅಮರಿಕೊಂಡು ಮನಸ್ಸು ಹುಳಿಹುಳಿಯಾಗುತ್ತದೆ. ವಯಸ್ಸಿನಲ್ಲಿ ಚಿಕ್ಕವಳಿರುವ ಆಕೆಯಾದರೂ ಅದನ್ನು ಓದುತ್ತಾಳಲ್ಲ ಎನಿಸಿ ಮನಸಿನ ಮೂಲೆಯಲ್ಲಿ ಸಮಾಧಾನ ಇಣುಕುತ್ತದೆ.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ✓ ಸಾನಿಯಾ ಮಿರ್ಜಾ ಮತ್ತು ಶೋಯಬ್ ಮಾಲಿಕ್ ಅವರ ಮಗ ಟೆನಿಸ್ ಆಡುವನೊ ಅಥವಾ ಕ್ರಿಕೆಟ್ ಆಡುವನೊ ಎಂದಿರಾ? ಟೆನಿಸ್ ಬಾಲ್‌ನಲ್ಲಿ ಕ್ರಿಕೆಟ್ ಆಡುತ್ತಾನಂತೆ.
- ✓ ಹಸುವಿನಲ್ಲಿ 33 ಕೋಟಿ ದೇವತೆಗಳಿದ್ದರೂ ತೊಂಡು ಮೇಯದಿರಲು ಮತ್ತು ಬೇಲಿ ಹಾಕದಿರಲು ಮೂಗು ದಾರ ಹಾಕಲಾಗುತ್ತದೆ.
- ✓ ಎಲೈ ಹೃದಯವೇ, ಎಲ್ಲ ವಿಷಯಗಳಲ್ಲೂ ಮೂಗು ತೂರಿಸುವುದನ್ನು ನೀನು ನಿಲ್ಲಿಸು. ನಿನ್ನ ಕೆಲಸ ರಕ್ತ ಪಂಪ್ ಮಾಡುವುದು ಅಷ್ಟೆ.
- ✓ ಮರಗಳನ್ನು ಕತ್ತರಿಸಿ, ಅದರಿಂದ ಕಾಗದ ತಯಾರಿಸಿ ಆ ಕಾಗದದ ಮೇಲೆ 'ಮರಗಳನ್ನು ಉಳಿಸಿ' ಎಂದು ಬರೆಯಲು ಮನುಷ್ಯನಿಗೆ ಮಾತ್ರ ಸಾಧ್ಯ.
- ✓ ಪ್ಲಾಟಿನಂ ಬಂದ ಮೇಲೆ ಓಲ್ಡ್ ಈಸ್ ಗೋಲ್ಡ್ ಎಂದು ಹೇಳಲು ಸಾಧ್ಯವೆ?
- ✓ ಲಿವ್ ವೆಲ್ – ಈವನ್ ಇಫ್ ಇಟ್ ಈಸ್ ಫಾರ್ ಅದರ್ಸ್.
- ✓ ಚದುರಂಗದ ಕಾಯಿ ಆಗಬೇಡಿ, ಚದುರಂಗದ ಆಟಗಾರನಾಗಿ.
- ✓ ನಾನೇನು ಹೊಗಳಿಕೊಳ್ಳುತ್ತಿಲ್ಲ. 14 ದಿನಗಳ ಡಯೆಟ್ ಆಹಾರವನ್ನು ನಾನು ಮೂರು ದಿನ 14 ತಾಸುಗಳಲ್ಲಿ ಮುಗಿಸಿದೆ.
- ✓ ಯು ಮಸ್ಟ್ ಪ್ಲೆ ಮೋರ್ ಬಾಲ್ಸ್ ಇನ್ ದಿ ಮ್ಯಾಚ್, ನಾಟ್ ಇನ್ ಪ್ರಾಕ್ಟೀಸ್.
- ✓ ವೈದ್ಯರು ತಮ್ಮ ಕೆಲಸವನ್ನು ಪ್ರಾಕ್ಟೀಸ್ ಎಂದು ಕರೆದುಕೊಳ್ಳುವುದು ಹೆದರಿಕೆ ಹುಟ್ಟಿಸದೆ?
- ✓ ಡೋಂಟ್ ಲೆಟ್ ಎನಿ ಒನ್ ರೆಂಟ್ ಎ ಸ್ಪೇಸ್ ಇನ್ ಯುವರ್ ಹೆಡ್ ಅನ್‌ಲೆಸ್ ದೆ ಆರ್ ಅ ಗುಡ್ ಟೆನೆಂಟ್.
- ✓ ಹದ್ದು ತುಂಬಾ ಎತ್ತರದಲ್ಲಿ ಹಾರಾಡುತ್ತದೆ. ವಿಮಾನದ ಇಂಜಿನ್ನಿನಲ್ಲಿ ಸಿಕ್ಕಿಕೊಳ್ಳುವುದೂ ಅದೇ.
- ✓ ಬಸ್ ಸ್ಟೇಶನ್‌ನಲ್ಲಿ ಬಸ್ ನಿಲ್ಲುತ್ತದೆ. ರೈಲು ಸ್ಟೇಶನ್‌ನಲ್ಲಿ ರೈಲು ನಿಲ್ಲುತ್ತದೆ, ಮತ್ತೆ ವರ್ಕ್ ಸ್ಟೇಶನ್‌ನಲ್ಲಿ?
- ✓ ಬದುಕು ನಾಣ್ಯದಂತೆ. ಖರ್ಚು ಹೇಗಾದರೂ ಮಾಡಲೇ ಬೇಕು. ಆದರೆ ಒಮ್ಮೆ ಮಾತ್ರ ಸಾಧ್ಯ.
- ✓ ಇಫ್ ಯುವರ್ ಮನಿ ಈಸ್ ನಾಟ್ ಮೇಕಿಂಗ್ ಮನಿ ಇಟ್ ಈಸ್ ಎ ವೇಸ್ಟ್ ಆಫ್ ಮನಿ.

# ಟೂರ್ ಪ್ಯಾಕೇಜಸ್-ಬೆಂಗ್ಳೂರ್

- ಸಿ.ಆರ್.ಸತ್ಯ

ಇನ್ನೇನು, ಬರುವ ತಿಂಗಳುಗಳಲ್ಲಿ ಎಲ್ಲಾ ಆಫೀಸ್‌ಗಳಿಗೂ ರಜಗಳ ಮೇಲೆ ರಜ. ಹಾಗಾಗಿ ಸೀ ಬೆಂಗ್ಳೂರ್ ಟ್ರಾವಲ್ಸ್ ಅವರು ಈ ಕೆಳಕಂಡ ಟೂರ್ ಪ್ಯಾಕೇಜ್‌ಗಳನ್ನು ಹೊರತಂದಿದಾರೆ. ಪ್ರವಾಸಗಳಲ್ಲಿ ಆಸಕ್ತಿ ಉಳ್ಳವರು ಇವನ್ನು ಉಪಯೋಗಿಸಿಕೊಂಡು ಸಂತೋಷ ಪಡೆಬಹುದು.

1. ಗ್ರ್ಯಾಂಡ್ ಸಿಟಿ ಮಾರ್ಕೆಟ್ ಟೂರ್ : 3 ಘಂಟೆಗಳ ಕಾಲ; ನಡೆದುಕೊಂಡು; ಟೂರಿಸ್ಟ್ ಗೈಡು ಪ್ರವಾಸಿಗರನ್ನು ಪ್ರತಿದಿನ ವಿಕ್ಟೋರಿಯಾ ಆಸ್ಪತ್ರೆ ಮುಂದೆ 10 ಘಂಟೆಗೆ ಭೇಟಿ ಮಾಡ್ತಾರೆ. ವಾಪಸ್ಸು ಅಲ್ಲಿಗೇ ಕರೆದುಕೊಂಡು ಬಂದು ಬಿಡ್ತಾರೆ. ತಲಾ ನೂರು ರೂಪಾಯಿ ಟಿಕೆಟ್.

ಬೆಂಗಳೂರಿನ ತರಕಾರಿ ಮತ್ತು ಹೂವಿನ ಹೋಲ್ ಸೇಲ್ ವ್ಯಾಪಾರ ಹೇಗೆ ಆಗುತ್ತೆ; ಹೇಗೆ ದಢೂತಿ ಹಸುಗಳೂ ಮನುಷ್ಯರೂ ಒಂದಾಗಿ ಇರ್ತಾರೆ; ಹೇಗೆ ಕೆಟ್ಟಿರೋ ಹಣ್ಣು ತರಕಾರಿಗಳನ್ನ ಹೋಟೆಲ್‌ಗಳಿಗೆ ಸಾಗಿಸ್ತಾರೆ; ಹೇಗೆ ಮಳಿಗೆಗಳ ಮುಂದೆ ನಾಜೂಕಾಗಿ ಆಟೋ, ವ್ಯಾನ್,

ಲಾರಿಗಳನ್ನು ನಿಲ್ಲಿಸಿ ಗ್ರಾಹಕರು ನಡೆಯೋಕ್ಕೆ ಆಗದೆ ಜಾರಿ ಬೀಳ್ತಾರೆ; ಹೇಗೆ ಗೂಳಿಗಳು ಮನುಷ್ಯರನ್ನು ಗುಮ್ಮುತ್ತವೆ; ಹೇಗೆ ಮಳಿಗೆಗಳಿಗೆ ಬಾಡಿಗೇನೆ ಕೊಡದೆ, ವ್ಯಾಪಾರಿಗಳು ಅವುಗಳ ಮಾಲಿಕತ್ವವನ್ನು ನಿಭಾಯಿಸ್ತಿದಾರೆ- ಇವನ್ನೆಲ್ಲಾ ಗೈಡ್ ಬಹಳ ಸುಂದರವಾಗಿ ವಿವರಿಸ್ತಾರೆ.

2.ಮೆಜಸ್ಟಿಕ್-ರೈಲ್ವೇ ಸ್ಟೇಷನ್ ಟೂರ್: ಅರ್ಧ ದಿವಸ; ನಡೆದುಕೊಂಡು; ಟೂರಿಸ್ಟ್ ಗೈಡು ಪ್ರವಾಸಿಗರನ್ನು ರೈಲ್ವೇ ಸ್ಟೇಷನ್ ಆಟೋ ಸ್ಟ್ಯಾಂಡ್‌ನಲ್ಲಿ ಭೇಟಿಮಾಡ್ತಾರೆ. ಅಲ್ಲಿರೋ ಒಂದೆರಡು ಆಟೋಗಳನ್ನು ಎರಡೋ ಮೂರೋ ಹಳದಿ ಬಣ್ಣದ ಟ್ಯಾಕ್ಸಿಗಳನ್ನು ಪ್ರವಾಸಿಗರು ಮುಟ್ಟಿ ನೋಡಬಹುದು. ನಂತರ ರೈಲ್ವೇ ಟಿಕೆಟ್ ಕೌಂಟರ್ ಹತ್ತಿರ ಹೋಗಿ ಬೆಂಗಳೂರಿನ 'ಕ್ಯೂ' ಅಂದರೆ ಹೇಗಿರುತ್ತೆ ಅಂತ ತೋರಿಸ್ತಾರೆ. ಅಲ್ಲಿಂದ, ಬಸ್ ಸ್ಟಾಂಡ್‌ಗೆ ಹೋಗೋದಕ್ಕೆ ಮುಂಚೆ ಬೆಂಗಳೂರಿನಲ್ಲಿ ಹೇಗೆ ಜನ ರೋಡ್ ಕ್ರಾಸ್ ಮಾಡ್ತಾರೆ ಅನ್ನೋದರ ಬಗ್ಗೆ ಗೈಡು ಭಾಷಣ ಮಾಡಿ, ಪ್ರವಾಸಿಗರನ್ನ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಕ್ರಾಸ್ ಮಾಡಿಸ್ತಾರೆ. (ಈ ವೇಳೆಯಲ್ಲಿ ಪ್ರವಾಸಿಗರ ಮಕ್ಕಳು ಯಾರಾದರೂ ತಪ್ಪಿಸಿಕೊಂಡಲ್ಲಿ, ಟ್ರಾವಲ್ಸ್ ಅದಕ್ಕೆ ಜವಾಬ್ದಾರರಲ್ಲ.) ನಂತರ ಬಸ್ ನಿಲ್ದಾಣದಲ್ಲಿ ಬಸ್ಸುಗಳು, ಸೌತೇಕಾಯಿ-ಮುಸುಕಿನ ಜೋಳ-ಕಡಲೇಕಾಯಿ-ಕೂಲ್‌ಡ್ರಿಂಕ್ಸ್ ಮಾರುವವರ ಜೊತೆಗೆ ಪ್ರಯಾಣಿಕರೂ, ಬಸ್ ಸಿಬ್ಬಂದಿಗಳೂ ಎಷ್ಟು ಹೊಂದಾಣಿಕೆಯಿಂದ ಇರ್ತಾರೆ ಅಂತ ತೋರಿಸ್ತಾರೆ. ಯಾವ ಬಸ್ ಎಲ್ಲಿಂದ ಹೊರಡುತ್ತೆ, ಎಲ್ಲಿ ಬಂದು ನಿಲ್ಲುತ್ತೆ, ಯಾವುದು ಶೆಡ್‌ಗೆ ಹೋಗುತ್ತೆ, ಯಾವುದು ಶಟಲ್ ಬಸ್ಸು, ಯಾವುದು ಎಕ್ಸ್ ಪ್ರೆಸ್‌ಬಸ್ಸು ಅಂತಾ ಎಲ್ಲೂ ಬರೆಯದೇ ಇದ್ದರೂ, ಸಾವಿರಾರು ಪ್ರಯಾಣಿಕರು ಹೇಗೆ ಪ್ರಯಾಣ ಮಾಡ್ತಾರೆ ಅಂತ ಗೈಡು ವಿವರಿಸ್ತಾರೆ.

ಇಲ್ಲಿ ಹತ್ತು ನಿಮಿಷ ಪ್ರವಾಸಿಗರಿಗೆ ರೆಸ್ಟ್ ರೂಮ್(ಬಾಗಿಲು ತೆಗೆದಿದ್ದರೆ ಮಾತ್ರ) ಬ್ರೇಕ್ ಸಿಗುತ್ತೆ. ಆಮೇಲೆ ಹುಷಾರಾಗಿ, ಎಲ್ಲರನ್ನೂ ಮೆಜಸ್ಟಿಕ್‌ಗೆಕರೆದು ಕೊಂಡು ಹೋಗಿ, ಕಿಟ್ ಬ್ಯಾಗ್, ಬೆಲ್ಟು, ಫ್ರಾಕ್, ಸೆಲ್ವಾರ್ ಕಮೀಜ್, ಸ್ಕಲ್ ಕ್ಯಾಪ್, ಚಪ್ಪಲಿ, ಮಕ್ಕಳ ಆಟದ ಸಾಮಾನು-ಇವೆಲ್ಲಾ ಸಿಗುವ ಜಾಗಕ್ಕೆ ಶಾಪಿಂಗ್ ಟೂರ್ ಮಾಡಿಸ್ತಾರೆ. ಕೊನೆಯದಾಗಿ ಅಲ್ಲಿರೋ ಟ್ರಾಫಿಕ್ ಲೈಟ್ಸ್(ಕರೆಂಟ್ ಇದ್ದರೆ) ಹೇಗೆ ಬಣ್ಣ ಬದಲಾಯಿಸುತ್ತೆ ಅಂತ ವಿವರಿಸಿ, ಗೈಡು ಎಲ್ಲರನ್ನೂ ಅಲ್ಲೇ ಇರೋ ಸ್ಕೈ ವಾಕ್ ಮೇಲೆ ಹತ್ತಿಸಿ, ಕೆಂಪೇಗೌಡ ರಸ್ತೆಯ ಟ್ರಾಫಿಕ್‌ನ ತೋರಿಸಿ, ಎಲ್ಲರನ್ನೂ ಕೆಳಗಿಳಿಸಿ, ಟೂರ್ ಮುಗಿಸ್ತಾರೆ. ತಲೆಗೆ ನೂರೈವತ್ತು ರೂಪಾಯಿ ಟಿಕೆಟ್.

3.ಗ್ರ್ಯಾಂಡ್ ಹೆಬ್ಬಾಳ್ ಫ್ಲೈಓವರ್ ಎಕ್ಸ್ಪೀರಿಯೆನ್ಸ್: ಈ ಟೂರ್ ನಂತೂ ಯಾರೂ ಮಿಸ್‌ಮಾಡಲೇ ಬಾರದು. ಪ್ರವಾಸಿಗರನ್ನು ಹೆಬ್ಬಾಳ್‌ನ ಎಸ್ಟೀಮ್ ಮಾಲ್‌ನ ಮುಂದೆ ಸ್ಪೆಶಲ್ ಬಸ್‌ನಲ್ಲಿ ಗೈಡ್ ಹತ್ತಿಸ್ಕೊಂಡು, ಬಸ್ಸನ್ನು ಫ್ಲೈಓವರ್ ಮೇಲೆ ಬಿಡ್ತಾರೆ. ಅಲ್ಲಿ ದಿನಾ ಆಗೋ ಟ್ರಾಫಿಕ್ ಜ್ಯಾಮ್‌ನಿಂದ ಬಸ್ಸು ಹಿಂದಕ್ಕೂ ಮುಂದಕ್ಕೂ ಹೋಗದ ಹಾಗೆ ಒಂದೇ ಕಡೆ ನಿಂತಿರುತ್ತೆ. ಆಗ ಗೈಡು ಬಲಗಡೆ ಕಾಣೋ ಹೆಬ್ಬಾಳ್ ಕೆರೆ ತೋರಿಸ್ತಾರೆ; ಎಡಗಡೆ ಕಾಣೋ ನಾಗಾವರ ವ್ಯಾಲಿ ತೋರಿಸ್ತಾರೆ: ಬಂಪರ್ ಟು ಬಂಪರ್ ಟ್ರಾಫಿಕ್ ಅಂದರೆ ಏನು; ಆಟೋ-ಕಾರ್‌ಗೆ ಡಿಕ್ಕಿ ಹೊಡೆದರೆ ಏನಾಗುತ್ತೆ; ಟೂ ವೀಲರ್‌ನವರು ಮೂರು ಮೂರು ಜನ ಹೆಲ್ಮೆಟ್ಟೂ ಹಾಕದೇ ಹೇಗೆ ಎಡಗಡೆಯಿಂದ ನುಗ್ತಾರೆ; ಈ ಮಧ್ಯೆ, ಫ್ಲೈಓವರ್ ಮೇಲೇನೇ ಒಂದು ನೀರಿನ ಟ್ಯಾಂಕರ್ ಕೆಟ್ಟು ನಿಂತರೆ ಪೋಲೀಸ್‌ನವರು ಏನು ಮಾಡ್ತಾರೆ, ಇದೇ ಸಮಯಕ್ಕೆ ಒಂದು ಆಂಬ್ಯುಲೆನ್ಸ್ ಮುಂದಕ್ಕೆ ಹೋಗೋಕ್ಕೆ ಆಗದೆ ಹೇಗೆ ಸೈರನ್ ಬಾರಿಸುತ್ತೆ- ಇವೆಲ್ಲಾ ಗೈಡ್ ಬಹಳ ಸೊಗಸಾಗಿ ವಿವರಿಸ್ತಾರೆ. ಟೂರ್ ಸಮಾಯಾವಧಿ – 3 ಘಂಟೆಗಳ ಕಾಲ; ತಲೆಗೆ 200 ರೂಪಾಯಿ ಟಿಕೆಟ್; ಕುಡಿಯೋಕ್ಕೆ ನೀರನ್ನು ಪ್ರವಾಸಿಗರೇ ಒದಗಿಸಿಕೊಳ್ಳಬೇಕು.

4.ನಾಯಂಡನಹಳ್ಳಿ ಸೌಂಡ್ ಎಂಡ್ ಲೈಟ್ ಶೋ: ಗೈಡು ಪ್ರವಾಸಿಗರನ್ನು ದೇವೇಗೌಡ ಪೆಟ್ರೋಲ್ ಬಂಕ್ ಹತ್ತಿರ ಹತ್ತಿಸ್ಕೊಂಡು ನಾಯಂಡನ ಹಳ್ಳಿ ಫ್ಲೈಓವರ್ ಹತ್ತಿರ ಕರೆದುಕೊಂಡು ಬರ್ತಾರೆ. ಈ ಶೋ ಸಂಜೆ ಏಳು ಘಂಟೆಗೆ ಪ್ರತಿ ದಿನಾನೂ ಇರುತ್ತೆ, ಟಿಕೆಟ್ ತಲಾ ನೂರೈವತ್ತು ರೂಪಾಯಿಗಳು. ಅವತ್ತೇನಾದರೂ ಮಳೆ ಬರುತ್ತಿದ್ದರೆ, ಟಿಕೆಟ್ ಬೆಲೆ 200 ರೂಪಾಯಿ ಆಗುತ್ತೆ. ಯಾಕೆ ಅಂದರೆ ಆಗ ನೋಡೋಕ್ಕೆ ಐಟಮ್ಸ್‌ಗಳು ಜಾಸ್ತಿ ಇರುತ್ತವೆ. ಬೆಂಗಳೂರು – ಮೈಸೂರು-ಬೆಂಗಳೂರು ಟ್ರಾಫಿಕ್ ಅಂದರೆ ಏನು, ನಿಮಿಷಕ್ಕೆ ಎಷ್ಟು ವಾಹನಗಳು ಹೋಗುತ್ವೆ- ಬರುತ್ವೆ; ಆಕ್ಸಿಡೆಂಟ್ ಅಂದರೆ ಏನು – ಹೇಗೆ ಮನುಷ್ಯರಿಗೂ ವಾಹನಗಳಿಗೂ ಜಖಂ ಆಗುತ್ತೆ; ಹೇಗೆ ಮಳೆ ಬಂದರೆ ಈ ಜಂಕ್ಷನ್‌ನಲ್ಲಿ ವಾಹನಗಳೆ ಕೊಚ್ಚಿಕೊಂಡು ಹೋಗುತ್ತವೆ; ರಾಜ ಕಾಲುವೆ ಎಂದರೇನು- ಅದರಲ್ಲಿ ಮುಳುಗಿದರೆ ಏನು ಗತಿ; ಗಾಳಿ ಮತ್ತು ಶಬ್ದ ಮಾಲಿನ್ಯ ಅಂದರೇನು – ಇವೆಲ್ಲವನ್ನು ಗೈಡು ರಸವತ್ತಾಗಿ ಬಣ್ಣಿಸ್ತಾರೆ. ರಾತ್ರಿ ಎಂಟು ಘಂಟೆಗೆ ಈ ಟೂರ್ ಮುಗಿಯುತ್ತೆ.

5. ಬೆಂಗಳೂರು ಪಾಟ್ ಹೋಲ್ ಟೂರ್: ಇದು ಗಟ್ಟಿ ಮೂಳೆ ಇರುವವರಿಗೆ ಮಾತ್ರ. ಪ್ರವಾಸಿಗರನ್ನ ಮೂರು ಜನರ ಗುಂಪುಗಳಾಗಿ ವಿಂಗಡಿಸಿ ಗೈಡು ಒಂದೊಂದು ಗುಂಪನ್ನೂ ಒಂದೊಂದು ಆಟೋನಲ್ಲಿ ಕೂಡಿಸಿ ಬೆಂಗಳೂರಿನ ಕೆಲವು ಪ್ರಮುಖ ರಸ್ತೆಗಳಲ್ಲಿ 50 ಕಿಮೀ ವೇಗದಲ್ಲಿ ಓಡುಸ್ತಾರೆ. ಈ ಟೂರ್ ಅನ್ನು ಅನೇಕ ಜನರು ಇಷ್ಟ ಪಡೊದಂತೂ ಗ್ಯಾರಂಟಿ. ಪ್ರಯಾಣ ಒಂದು ವಿಮಾನದಲ್ಲಿ ಹೋದ ಹಾಗೆ ಇದ್ದರೂ ಒಂದೊಂದು ನಿಮಿಷಕ್ಕೆ ಆಟೋ ಪಾಟ್ ಹೋಲ್ ಮೇಲೆ ಹೋದಾಗ, ಇಲ್ಲ-ಭೂಮಿಯ ಮೇಲೆ ಇದೀವಿ ಅಂತ ಮನದಟ್ಟು ಆಗೊ ಹಾಗೆ ಅನುಭವ ಆಗುತ್ತೆ. ಪಾಟ್ ಹೋಲ್ ಅಂದರೆ ಏನು; ಅದರ ಗಾತ್ರ – ಆಳ ಎಷ್ಟು; ಅವನ್ನು ಹೇಗೆ ಎಂಜಿನಿಯರುಗಳು-ಕಂಟ್ರಾಕ್ಟರುಗಳು ಸೃಷ್ಟಿ ಮಾಡ್ತಾರೆ, ಅವುಗಳನ್ನು ರಿಪೇರಿ ಮಾಡಿದರೂ ಅವು ಮತ್ತೆ ಹೇಗೆ ಹುಟ್ಟಿಕೊಳ್ಳುತ್ತವೆ ಅಂತ ತೋರಿಸೋ ಒಂದು ವಿಡಿಯೋ ಕ್ಲಿಪ್‌ನೂ ಗೈಡು ಎಲ್ಲರ ಸ್ಮಾರ್ಟ್ ಫೋನ್‌ಗೆ ವಾಟ್ಸಾಪ್ ಮಾಡ್ತಾರೆ. ಈ ಟೂರ್ ಪ್ಯಾಕೇಜ್ ಸಿವಿಲ್ ಎಂಜಿನಿಯರುಗಳಿಗೆ ಬಹಳ ಹಿಡಿಸುತ್ತೆ. ಟಿಕೆಟ್; ತಲಾ 300 ರೂಪಾಯಿಗಳು: ಮಳೆ ಬಂದು ಪಾಟ್ ಹೋಲ್‌ಗಳಲ್ಲಿ ನೀರು ನಿಂತಿರುವ ದಿವಸಗಳಲ್ಲಿ ಟಿಕೆಟ್ ಬೆಲೆ 400 ರೂಪಾಯಿಗಳು. ಸಮಯಾವಧಿ: ಎರಡು ಘಂಟೆಗಳು. ಹೊರಡುವ ಸ್ಥಳ – ಎಲುಬಪ್ಪಾ ಮೆಮೋರಿಯಲ್ ಮೂಳೆ ಆಸ್ಪತ್ರೆ- ಜೆ.ಸಿ.ರಸ್ತೆ- ಬೆಳಿಗ್ಗೆ 10 ಘಂಟೆಗೆ.

ಅಷ್ಟೆ. ಇನ್ಯಾವದಾದ್ರೂ ಟೂರ್ ಪ್ಯಾಕೇಜುಗಳು ಕಣ್ಣಿಗೆ ಬಿದ್ದರೆ, ನಿಮಗೆ ಆಮೇಲೆ ತಿಳಿಸ್ತೀನಿ.

ಹ್ಯಾವ್ ಎ ಗುಡ್ ಟೂರ್.

## ಕಾಮನ್ ರೂಮ್ ಕಹಾನಿ

# ರೈಲಿನಲ್ಲಿ ರಾಮನ ದರ್ಶನ

**– ಗಣೇಶ ಹೆಗ್ಗಡೆ**

ಇಂದಿನ ಕಾಮನ್ ರೂಮು ಸಭೆಗೆ ರಾಯರ ಆಗಮನವನ್ನೇ ಕಾತರದಿಂದ ನಿರೀಕ್ಷಿಸುತ್ತಿದ್ದ ನಮಗೆ, ಹೀಗೊಂದು ಅಚ್ಚರಿ ಕಾಡಬಹುದೆಂಬ ಕಲ್ಪನೆಯೆ ಇರಲಿಲ್ಲ. ಅವರ ಬದಲಾದ ದಿರಿಸು, ಅಧ್ಯಕ್ಷ ಪೀಠವನ್ನಲಂಕರಿಸಿದ ಠೀವಿ, ನಮಗೊಂದು ಷಾಕ್ ನೀಡಿ ಚೇತರಿಸಿಕೊಳ್ಳಲು ಕೊಂಚ ಸಮಯವೇ ಹಿಡಿದಿತ್ತು. ಇಷ್ಟು ದಿನ ನಮಗೆ, ಬಿಳೀ ಖಾದಿಯ ದೋತರ, ಅರ್ಧ ತೋಳಿನ ಖಾದಿ ನಿಲುವಂಗಿ, ವೇಸ್ಟ್ ಕೋಟು, ಕುರುಚುಲು ಬಿಳಿ ಗಡ್ಡ, ಹಣೆಯಲ್ಲಿ ಕಪ್ಪು ಸಾಧು ಮತ್ತು ತಲೆಯ ಮೇಲೆ ಕರಿ ಟೋಪಿಯ ರಾಯರು ಮಾತ್ರ ಪರಿಚಿತ. ಇಂದು ಸಭೆಗೆ ಬಂದ ಆ ರಾಯರು ಎಲ್ಲೋ ಕಳೆದು ಹೋಗಿ ಬದಲಿಗೆ, ಕಾವಿ ಬಣ್ಣದ ಪಂಚೆ, ಬಿಳಿಯ ನಿಲುವಂಗಿ, ಹಣೆಯಲ್ಲಿ ಕೆಂಪು ತಿಲಕ ಮತ್ತು ಹೆಗಲ ಮೇಲೆ ಕೇಸರಿ ಬಣ್ಣದ ಶಲ್ಯ ಹೊದ್ದು ರಾಯರು ಬಂದಾಗ, ಅನುಮಾನದ ಗೆರೆಗಳು ಸಹಜವಾಗಿ ನಮ್ಮ ಮುಖದಲ್ಲಿ ಮೂಡಿತ್ತು. ಈ ಸೂಕ್ಷ್ಮತೆಯನ್ನು ಗಂಭೀರವಾಗಿ ಪರಿಗಣಿಸಿದ ರಾಯರು ವಾತಾವರಣವನ್ನು ತಿಳಿ ಮಾಡಲು ನಮ್ಮನ್ನು ದ್ದೇಶಿಸಿ,

"ಸ್ಯಾರಿ ಫ್ರೆಂಡ್ಸ್, ಅನಿವಾರ್ಯವಾಗಿ ಈ ದಿರಿಸನ್ನು ಇಂದು ನಾನು ಹಾಕಬೇಕಾಯ್ತು, ಮುಂದೆ ಕಾರಣ ನಿಮಗೇ ತಿಳಿಯುತ್ತೆ" ಎಂದು ಸವಿವರಣೆ ಕೊಟ್ಟಾಗ ದೀರ್ಘವಾದ ನಿಟ್ಟುಸಿರು ಬಿಟ್ಟೆವು ನಾವು.

"ಸರ್ ಮೊನ್ನೆಯವರೆಗೂ ತಾವು ನಾರ್ಮಲ್ ಆಗೇ ಇದ್ದಿರಿ. ಈ ದಿಢೀರ್ ವೇಷ ಭೂಷಣ ನಮಗೆಲ್ಲಾ ಕನ್‌ಫ್ಯೂಸ್ ಮಾಡಿಬಿಡ್ತು" ಎಂದೆ.

"ಇಟ್ ಈಸ್ ಟ್ರೂ. ಇದೆಲ್ಲಾ ನನ್ನ ತಂಗಿಯ ಮಗ ಕೋದಂಡನ ಪ್ರಭಾವ" ಎಂದು ಹುಸಿನಗೆ ನಕ್ಕರು ರಾಯರು.

'ಕೊಂಚ ಬಿಡ್ಸಿ ಹೇಳಿ ಸರ್' ಎಂದೆವು.

'ಮೊನ್ನೆಯವರೆಗೂ ನನ್ನ ಪಾಡಿಗೆ ನಾನು ನೆಟ್ಟಗೇ ಇದ್ದೆ. ಇದ್ದಕ್ಕಿದ್ದಂತೆ ಒಂದು ಮಧ್ಯಾಹ್ನ ಪ್ರತ್ಯಕ್ಷನಾದ ಕೋದಂಡ, 'ಮಾವ, ಒಂದು ಹದಿನೈದು ದಿವ್ಸ ನೀವು ಫ್ರೀ ಮಾಡ್ಕೊಳ್ಳೇ ಬೇಕು. ಭಾರತೀಯ ರೈಲ್ವೆ ಇಲಾಖೆ, ರಾಮನ ಬದುಕಿನ ಹೆಜ್ಜೆ ಗುರುತುಗಳ ದರ್ಶನ ಮಾಡಿಸುವ ಸಲುವಾಗಿ ವಿಶೇಷ ರೈಲಿನ ಮೂಲಕ, ಅಯೋಧ್ಯಾ ಪಟ್ಟಣದಿಂದ ಕೊಲಂಬೋವರೆಗೆ ಪ್ರವಾಸ ಏರ್ಪಡಿಸಿದ್ದಾರೆ. ಟಿಕೆಟ್ ಕಾಯ್ದಿರಿಸುವ ಜವಾಬ್ದಾರಿ ನನ್ನದು, ನಾನೂ ನಿಮ್ಮ ಜತೆ ಬರ್ತೀನಿ. ದಯವಿಟ್ಟು ಇಲ್ಲಾ ಅನ್ನಬಾರದು' ಎಂದು ಅಂಗಲಾಚಿಕೊಂಡ. ಹೋಗ್ಬನ್ನಿ, ಮಗು ಅಷ್ಟೊಂದು ಕೇಳ್ಕೋತಿದೆ' ಎಂದು ನನ್ನವಳ ಒತ್ತಾಯ ಬ್ಯಾರೆ.

"ಹೋಗ್ಬನ್ನಿ ಸಾರ್, ತಾವು ಎಂದೂ ಜೀವಿತ ಕಾಲದಲ್ಲಿ ಹೊರಗೆ ಹೋದವರಲ್ಲ. ಜತೆಗೆ ಕೋದಂಡ ಬ್ಯಾರೆ ಇರ್ತಾನೆ. ಅಂತಂದ್ರೆ ಹತ್ತಾನೆ ಬಲ. ಅಂದ್ಹಾಗೆ ಪ್ರಯಾಣಕ್ಕೆ ಸಿದ್ಧತೆ ಆಗಿದ್ಯಾ ಸರ್? ನಮ್ಮ ಹೆಲ್ಪ್ ಏನಾದ್ರೂ...!"

"ನೈಂಟಿ ಪರ್ಸೆಂಟು ಆಗಿದೆ ಅಂತನ್ಸುತ್ತೆ. ನಮ್ಮ ಕೋದಂಡ ತುಂಬಾ ಮುತುವರ್ಜಿ ವಹಿಸಿ ಮಲ್ಲೇಶ್ವರದ ಹತ್ತಿರಾ ಇರೊ ರಾಮಚಂದ್ರಪುರದ ಬಟ್ಟೆ ಅಂಗಡಿಯಲ್ಲಿ ತಲಾ ಮೂರು ಜತೆಯಂತೆ ಬಟ್ಟೆಯನ್ನು ನಮ್ಮಿಬ್ಬರಿಗೂ ತಂದ. ಆ ದಿರಿಸೇ ಇಂದು ನಾನು ತೊಟ್ಟಿರುವುದು. ಜತೆಗೆ ಚಾಮರಾಜಪೇಟೆ ಯಲ್ಲಿರುವ ವೇದಾಂತ ಬುಕ್ ಹೌಸ್‌ಗೆ ನನ್ನನ್ನೂ ಕರೆದೊಯ್ದು ವಾಲ್ಮೀಕಿ ರಾಮಾಯಣದ ಪ್ರತಿಗಳನ್ನು ಕೊಂಡುಕೊಂಡ. ಮರೆಯದೆ ಒಂದು ಲಕ್ಷ ರಾಮ ನಾಮ ಬರೆಯಲು ಬೇಕಾಗುವ ಪುಸ್ತಕ ಮತ್ತು ಇತರೇ ಪೂರಕ ಸಾಮಗ್ರಿಗಳನ್ನೂ ಕೊಂಡುಕೊಂಡ. ಆದರೆ ಅವನ ಹುಚ್ಚಾಟ ಅತಿರೇಕಕ್ಕೆ ಹೋಗಿ ಅವನ ಕೊನೆಯ ಸಲಹೆ ಮಾತ್ರ ನನಗೆ ಪಿತ್ಥ ನೆತ್ತಿಗೇರುವಂತೆ ಮಾಡಿ ಮೂರು ದಿವಸ ನನ್ನ ಜತೆ ಕೋದಂಡ ಮಾತು ಬಿಟ್ಟು ಬಿಟ್ಟಿದ್ದ"

"ವೆರಿಬ್ಯಾಡ್ ಸರ್. ಅದೇನು ಆ ತರ್ಲೆ ಸಲಹೆ ಸರ್" ಏನಿಲ್ಲ, ಪ್ರಯಾಣಿಕರ ಪೈಕಿ ಗಂಡಸರಾದ ನಾವು ಕಡ್ಡಾಯವಾಗಿ ಬಿದಿರಿನ ಬಿಲ್ಲು ಮತ್ತು ಬಿದಿರನ ಬಾಣಗಳು ತುಂಬಿರುವ ಬತ್ತಳಿಕೆಯನ್ನು ತರಬೇಕೆಂದು ಜತೆಗೆ ಹೆಂಗಸರು, ಹನ್ನೆರಡು ಮೊಳ ಉದ್ದದ ಹತ್ತಿಯ ನಾರು ಮುಡಿ ಸೀರೆಯನ್ನು ಕೊಂಡೊಯ್ಯಬೇಕೆಂಬ ಅವನ ಸಲಹೆ ತೀರಾ ಅಪ್ರಸ್ತುತ ಅಂತನ್ನಿಸಿತು ನನಗೆ. ವಾಚಾಮ ಗೋಚರವಾಗಿ ನನ್ನಿಂದ ಕೋದಂಡ ಬೈಸಿಕೊಂಡ"

"ಸರ್ ಅಷ್ಟು ಸುಲಭವಾಗಿ ನಮ್ಮ ಕೋದಂಡನನ್ನು ಹೀಗೆ ತೆಗಳಬ್ಯಾಡಿ. ಅವನ ಸಲಹೆಗೊಂದು ಅರ್ಥವಿರುತ್ತದೆ. ಈ ವಿಶೇಷ ರೈಲು ಬಹುಶಃ ಛತ್ತೀಸ್‌ಗಡದ ಕೆಲವು ಭಾಗಗಳಲ್ಲಿ ಚಲಿಸುತ್ತೆ ಅಂತ ಕಾಣುತ್ತೆ. ಅಲ್ಲಿ ವಿಪರೀತ ನಕ್ಸಲೀಯರ ಕಾಟ ಇದೆ. ಯಾವುದಕ್ಕೂ ಸೆಲ್ಫ್ ಡಿಫೆನ್ಸಿಗಿರಲಿ ಅಂತ ಈ ಬಿಲ್ಲು ಬಾಣದ ವ್ಯವಸ್ಥೆಯನ್ನು ಅವನು ಯೋಚಿಸಿದ್ದಾನೆ'.

'ಮತ್ತೆ ಹೆಂಗಸರಿಗೆ ನಾರು ಮುಡಿಯ ಸೀರೆಯ ವಿಷಯ...?'

'ಶ್ರೀಲಂಕಾದಲ್ಲಿ ಅಶೋಕ ವನದಲ್ಲಿ ಸೀತಾಮಾತೆಯಿದ್ದ ಸ್ಥಳ ವೀಕ್ಷಣೆಗೆ ಹೊರಡುವ ಹೆಂಗಸರು ಚಿತ್ರ-ವಿಚಿತ್ರ ದಿರಿಸು ಧರಿಸಿ ಮುಜುಗರ ಉಂಟು ಮಾಡದೆ ಆಕೆಯ ನೋವಿನಲ್ಲಿ ಸಮಭಾಗಿಯಾಗಿ ಸ್ಥಳದ ಮೆರಗನ್ನು ಹೆಚ್ಚಿಸಲಿ ಎಂಬ ಆಕಾಂಕ್ಷೆ ನಮ್ಮ ಕೋದಂಡನದು.

'ದೆನ್ ಇಟ್ ಈಸ್ ಓಕೆ" ಎಂದೊಪ್ಪಿಕೊಂಡರು ರಾಯರು. ಥಟ್ಟನೆ ಎಚ್ಚೆತ್ತುಕೊಂಡ ನಾನು,

"ಶ್ರೀಲಂಕಾ ಪ್ರವಾಸದಲ್ಲಿ ಯಾವುದಕ್ಕೂ ಹುಷಾರು ಸರ್. ಈಗ ಅಲ್ಲಿನ ರಾಜಕೀಯ ವಿದ್ಯಮಾನ ಸರಿಯಿಲ್ಲ. ಪ್ರಕ್ಷುಬ್ಧತೆ ತಲೆದೋರಿದೆ. ಲಂಕಾ ದಹನದ ಸ್ಪಾಟ್‌ಗೆ ಹೋಗುವಾಗ ಗೈಡ್ ದಾರಿ ತಪ್ಪದಿರಲಿ, ಅಲ್ಲಿ ಲೈಟ್

ಅಂಡ್ ಸೌಂಡ್ ಪ್ರದರ್ಶನದ ವ್ಯವಸ್ಥೆ ಇದೆಯಂತೆ' ಕೊಂಚ ಏ ಮಾರಿದ್ರೂ ತಮಗೆ ಲೈವ್ ದಹನದ...

'ಪ್ಲೀಸ್ ಸ್ಟ್ಟಾಪಿಟ್ ಐಸೆ.. ನೀ ಹೆದರಿಸ್ತಿರೋ ಪರಿ ನೋಡಿದ್ರೆ ಯಾಕೊ ಕೋದಂಡನ ಮೇಲೆ ಸಿಕ್ಕಾಪಟ್ಟೆ ಕೋಪ ಬರ್ತಿದೆ" ಎಂದು ರಾಯರು ಶಲ್ಯದಿಂದ ಮುಖದ ಮೇಲಿನ ಬೆವರಿನ ಸೆಲೆ ವರೆಸಿಕೊಂಡರು. ಈ ಕಹಾನಿ ಹೀಗೆಯೆ ಕಾಮನ್ ರೂಮು ಸಭೆಯಲಿ ಮುಂದುವರೆಯುತ್ತಿತ್ತೇನೊ, ಆಗಲೆ ರಾಯರ ಮೊಬೈಲ್ ಫೋನು ರಿಂಗುಗುಟ್ಟಿ,

ಹಲೋ ಕೋದಂಡ ಎಂದರು ರಾಯರು. ಐದು ನಿಮಿಷ ತುಟಿಕ್ ಪಿಟಿಕ್ ಎನ್ನದೆ ಆ ತುದಿಯ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ರಾಯರು ಇದ್ದಕ್ಕಿದ್ದಂತೆ ದೂರ್ವಾಸ ಮುನಿಗಳ ಅವತಾರ ತಳೆದು, "ಈಡಿಯಟ್ ಟಿಕೆಟ್ ಬುಕ್ಕು ಮಾಡಿಸೊ ಮುಂಚೆ ಸರಿಯಾಗಿ ವಿಚಾರಿಸ್ಬೇಡ್ವೇನಯ್ಯಾ ನೀನು, ಈ ಆನ್ ಲೈನ್ ವ್ಯವಹಾರವೇ ಹೀಗೆ. ಆಗ್ಲೆ ಪೇಮೆಂಟ್ ಮಾಡಿ ತಗ್ಲು ಹಾಕ್ಕೊಂಡಿದ್ದೀಯಾ....ಯು...ಸ್ಟುಪಿಡ್ ಫೆಲೋ..." ಎಂದು ರೇಗಿ ಹೆಚ್ಚೂ ಕಮ್ಮಿ ಫೋನನ್ನು ಕುಕ್ಕೇ ಬಿಟ್ಟಿದ್ದರು ರಾಯರು.

"ಕೂಲ್‌ಡೌನ್ ಸರ್' ಎಂದು ಸಮಧಾನ ಪಡಿಸಿದ ನಾವು ಏನು ಪ್ರಮಾದವಾಯ್ತು?' ಎಂದು ಆತಂಕದಿಂದ ಪ್ರಶ್ನಿಸಿದೆವು.

"ಎಲ್ಲಾ ಈ ಕೋದಂಡನ ಎಡವಟ್ಟು. ಸರಿಯಾಗಿ ವಿಚಾರಿಸಿ, ಟಿಕೇಟನ್ನು ಬುಕ್ ಮಾಡಿಲ್ಲ ಪೆದ್ದು ಮುಂಡೇದು. ಆ ಟ್ರಾವಲ್ ಏಜೆಂಟು ಪ್ಯಾರಲೆಲ್ಲಾಗಿ ಇದೇ ರೀತಿ ಇನ್ನೊಂದು 'ರಾಮನ ದರ್ಶನ'ದ ವ್ಯವಸ್ಥೆ ಮಾಡ್ತಿರೋದು ಈ ದ್ರಾಬೆಗೆ ತಿಳಿದಿಲ್ಲ. ಎಲ್ಲಾ ಮೊಬೈಲ್ ಫೋನಿನಲ್ಲೇ ವ್ಯವಹಾರ. ತಪ್ಪು ಮಾಹಿತಿ ಗ್ರಹಿಸಿದ ಆ ಏಜೆಂಟು ನಮ್ಮಿಬ್ಬರ ಹೆಸರನ್ನು ಎರಡನೇ ಲಿಸ್ಟಿಗೆ ರಿಜಿಸ್ಟರ್ ಮಾಡಿ ಸೀಟ್ ನಂಬರ್ರು ಕೊಟ್ಟಿದ್ದಾನೆ. ಆ ಕೋದಂಡ ಮೊದ್ಲು ನನ್ನ ಕೈಗೆ ಸಿಕ್ಕಲಿ...

"ಛೇ ಛೆ... ಎಂಥಾ ಅಚಾತುರ್ಯವಾಯ್ತು ಸರ್? ಅಂದ್ಹಾಗೆ ಆ ಇನ್ನೊಂದು ರಾಮದರ್ಶನ ಯಾವ ಊರಿನಿಂದ ಯಾವ ಊರಿಗೆ ಏರ್ಪಾಟಾಗಿದೆ? ಸರ್ ಕೋದಂಡ ಏನಾದ್ರು ಕ್ಲ್ಯಾರಿಫೈ ಮಾಡಿದ್ನೇ?"

"ಹ್ಞೂಂ...ಅದು ಮೈಸೂರಿನ ವರುಣ ದೇವರ ಸನ್ನಿಧಿಯಿಂದ ಹೊರಟು ಸಿಟಿ ರೈಲ್ವೆ ಸ್ಟೇಷನ್ ತಲುಪಿ, ಅಲ್ಲಿಂದ 'ಬಾದಾಮಿ'ಯವರೆಗೂ ವಿಶೇಷ ಪ್ರಯಾಣದ ಪ್ಯಾಕೇಜು ಅಂತೆ. ಆದರೆ ಪಾಂಪ್ಲೆಟ್‌ನಲ್ಲಿ ರಾಮನ ಹೆಜ್ಜೆ ಗುರುತುಗಳು ಎನ್ನುವ ಬದಲಿಗೆ ರಾಮನ 'ಕೈ' ಗುರುತುಗಳು ಅಂತಾ ಪ್ರಿಂಟಾಗಿದ್ಯೆಯಂತೆ. ಕೊಂಚ ಕನ್‌ಫ್ಯೂಸ್ ಆಗ್ತಾಯಿದೆ ಮಾವ' ಅಂತಂದ ಕೋದಂಡ. ಅದ್ಸರೀ ಬಾದಾಮಿಯ ಹೆಸರು ಕೇಳಿದಾಕ್ಷಣ ನೀನ್ಯಾಕಯ್ಯಾ ಬೆಚ್ಚಿಬಿದ್ದೆ?

'ಸರ್ ಇತ್ತೀಚೆಗೆ ಇದೇ ಮಾರ್ಗದಲ್ಲಿ ಬಾಗಲಕೋಟೆಗೆ ರೈಲಿನಲ್ಲಿ ಹೋಗಿದ್ದೆ. ಬಾದಾಮಿ ರೈಲು ನಿಲ್ದಾಣದಲ್ಲಿ ಯಾಪಾಟಿ ಕೋತಿಗಳ ಕಾಟ ಸರ್. ಅಲ್ಲಿನ ಕಲ್ಲು ಬೆಂಚುಗಳೇ ಅವಕ್ಕೆ ವಾಸಸ್ಥಾನ.

"ಯಾಕೆ? ರೈಲ್ವೆ ಇಲಾಖೆಯವರು ಈ ಮಂಗಗಳನ್ನು ಇನ್ನೂ ಹಿಡಿಸಿಲ್ವೆ? ಇದೇ ರೀತಿ ಬಾದಾಮಿ ಗುಹೆಗಳ ಬಳಿಯೂ, ಕೋತಿಗಳ ಕಾಟ ಇದೆ ಅಂತ ಎಲ್ಲೋ ಓದಿನ ನೆನಪು.

'ಸಾಧ್ಯವಾಗಿಲ್ಲ ಸರ್, ಪ್ರಾಣಿ ದಯಾ ಸಂಘದವರು ಈ ಬಗ್ಗೆ ಅಪೋಸ್ ಮಾಡಿ ಮನೇಕಾ ಗಾಂಧಿಯವರೆಗೂ ಕಂಪ್ಲೇಂಟು ನೀಡಿ, ಇನ್ನೂ ಅಲ್ಲಿಂದ ಪರ್ಮಿಷನ್ ಬಂದಿಲ್ವಂತೆ'

'ಮುಂದೇನಯ್ಯಾ ನಮ್ಮ ಗತಿ?'

'ಬಾದಾಮಿಯಲ್ಲಿ ನೀವು ಮತ್ತು ಕೋದಂಡ ರೈಲ್ವೆ ಬೋಗಿಯಿಂದ ಕೆಳಗಿಳಿಯದಿರುವುದೇ ಕ್ಷೇಮ' ಎಂದೆಚ್ಚರಿಸಿ, ರಾಯರ ಮುಖವನ್ನೇ ದಿಟ್ಟಿಸಿದೆ. ಅದಕ್ಕೆ ಕಾರಣವೂ ಇತ್ತು ಎನ್ನಿ.

ಹಿಂದೊಮ್ಮೆ ನಂಜನಗೂಡಿನ ಶ್ರೀಕಂಠೇಶ್ವರನ ಗುಡಿಯ ಬಳಿ, ಕೋತಿಯಿಂದ ಪರಚಿಸಿಕೊಂಡಿದ್ದ ರಾಯರು, ಇನ್ನೂ ಆ ನೆನಪಿನಿಂದ ಹೊರಬಂದಿಲ್ಲವೆಂದೆನ್ನಿಸಿತು. ನನ್ನನುಮಾನ ಖಾತ್ರಿಯಾಗಿತ್ತು.

'ಹಾಗಾದ್ರೆ...ಈ ಟ್ರಿಪ್ಪನ್ನೇ ಕ್ಯಾನ್ಸಲ್ ಮಾಡ್ತೀನಿ ಕಣಯ್ಯಾ' ಎಂದು ಭಯದಿಂದ ನುಡಿದರು ರಾಯರು.

'ಬ್ಯಾಡಿ ಸರ್, ಹ್ಯಾಗೂ ಹೊರಟ್ಟಿದ್ದಾಗಿದೆ. ಹಿಂತೆಗೆಯಬೇಡಿ. ಆ ಅಯೋಧ್ಯೆ ರಾಮನ ಜನ್ಮ ಭೂಮಿಯಾದರೆ, ಈ ಬಾದಾಮಿ ಇತ್ತೀಚಿನಿಂದ ರಾಮನ ಕರ್ಮಭೂಮಿಯಾಗಿದೆ. ಯಾರಿಗೆ ಗೊತ್ತು, ಅದೃಷ್ಟವಿದ್ದರೆ ಹನುಮಂತ ದರ್ಶನದ ಬಳಿಕ ತಮಗೆ ರಾಮನ ದರ್ಶನ ಆದರೂ ಆದೀತು ಎಂದೆ. ತುಂಬಾ ಖುಷಿಗೊಂಡ ರಾಯರು, ಸಭೆಯನ್ನು ಬರಖಾಸ್ತು ಮಾಡಿ, ಜೈ ರಾಮ್! ಎಂದು ಕೈ ಮುಗಿದರು, ನಾವೂ ಕೈ ಮುಗಿದವು.

## ಗ್ರೀನ್ ಟೀ

ಅತಿಥಿಗಳಿಗೆ ಕುಡಿಸುವದರಿಂದ ಆಗುವ ಉಪಯೋಗಗಳು:

1. ನೀವು ಶ್ರೀಮಂತರೆಂದು ತೋರಿಸಿಕೊಳ್ಳಬಹುದು
2. ಹಾಲಿನ ಹಣ ಉಳಿಸಬಹುದು
3. ಟೀ ಜತೆ ಬಿಸ್ಕಟ್ ಕೊಡಬೇಕಾಗಿ ಬರುವುದಿಲ್ಲ
4. ಇನ್ನಷ್ಟು ಟೀಗಾಗಿ ಬೇಡಿಕೆ ಇರದು
5. ಅವರು ಮತ್ತೆ ಬರರು

# ‘‘ನಾಯಿ ಬಂದಾವೋ ಬೆನ್ಹತ್ತಿ’’

**– ಎಂ.ಎಸ್. ರಘುನಂದನ್, ಮೈಸೂರು**

ಮಳೆ ಮುಗಿದು, ಛಳಿ ಶುರುವಾಗಬೇಕಾದ ಕಾಲ. ರಾತ್ರಿ ಸ್ವಲ್ಪ ಮಳೆ ಬಿದ್ದು ಹವೆ ತಂಪಾಗಿತ್ತು. ಅಕ್ಟೋಬರ್ ತಿಂಗಳ ಕೊನೆ. ಕತ್ತಲು ಹೆಚ್ಚು, ಜತೆಗೆ ಮುಂಜಾನೆ ನಸುಕಿನಲ್ಲಿ ಇಬ್ಬನಿ ಬೀಳಲು ಪ್ರಾರಂಭವಾಗಿತ್ತು. ಆರೂವರೆಯ ನಂತರವೇ ಬೆಳಕಾಯಿತೆನ್ನಿಸುವುದು. ಅದರಲ್ಲೂ ನಾನು ಬೆಳಗ್ಗೆ ತಿರುಗಾಡಲು ಹೋಗುವ ರಸ್ತೆಯಲ್ಲಿ ಅಕ್ಕ ಪಕ್ಕ ಇನ್ನೂ ಮರಗಳು ಉಳಿದಿರುವುದರಿಂದ ಬೀದಿ ದೀಪಗಳಿದ್ದರೂ ರಸ್ತೆ ಬಹುಪಾಲು ಕತ್ತಲೇ. ರಸ್ತೆಯಲ್ಲಿ ಮನೆಗಳು ವಿರಳ. ವಾಹನ ಸಂಚಾರ ಇಲ್ಲವೆಂದೇ ಹೇಳಬಹುದು. ಹಕ್ಕಿಗಳು ಐದಕ್ಕೇ ಎದ್ದು ಕಲರವಮಾಡಿ ಮತ್ತೆ ನಿದ್ದೆಯ ಗುಂಗಿಗೆ ಮರಳಿದ್ದವೇನೋ? ಸುತ್ತಲೂ ನಿಶ್ಯಬ್ದ. ಮುಂಜಾವಿನ ಐದೂವರೆಗೆ ಪರಿಸರ ಆಹ್ಲಾದಕರವಾಗಿತ್ತು. ನನ್ನ ಪಾಡಿಗೆ ನಾನು ಏನೋ ಯೋಚಿಸುತ್ತಾ, ಮತ್ತೇನೋ ಗುನುಗಿಕೊಳ್ಳುತ್ತಾ, ಹೆಚ್ಚುಕಡಿಮೆ ಸಮಾಧಿ ಸ್ಥಿತಿಯಲ್ಲಿ ಹೆಜ್ಜೆಹಾಕುತ್ತಿದ್ದೆ.

ಅದೆಲ್ಲಿ ಮಲಗಿತ್ತೋ? ಗವ್ವೆಂದು ಬೊಗಳುತ್ತಾ ಇದ್ದಕ್ಕಿದ್ದಂತೆ ನನ್ನೆಡೆ ಎಗರಿ ಬಂತೊಂದು ನಾಯಿ. ನಾನು ಬೆಚ್ಚಿಬಿದ್ದು ಒಂದುಮಾರು ಪಕ್ಕಕ್ಕೆ ಹಾರಿದೆ. ಅರೆಕ್ಷಣದಲ್ಲಿ ಆಹ್ಲಾದಕರ ಪರಿಸರ ಮಾಯವಾಗಿ, ಭಯಂಕರ ಪರಿಸರ ಸೃಷ್ಟಿಯಾಗಿ, ನನ್ನ ಯೋಚನೆ ಗುನುಗಾಟಗಳು ಸ್ಥಗಿತವಾಗಿ, ಎದೆ ಬಡಿತ ನೂರಿಪ್ಪತ್ತಾಗಿ, ಮೈ ಬೆವರಿಟ್ಟಿತು. ನಾನು ಸಾವರಿಸಿಕೊಂಡು ನನ್ನ ಕೈಲಿದ್ದ ಕೋಲನ್ನು ಟಿಪ್ಪುಸುಲ್ತಾನನ ಕತ್ತಿಯಂತೆ (ನೀವು ಬಿ ಜೆ ಪಿ ಯಾಗಿದ್ದರೆ ನನ್ನ ಮೇಲೆ ಎಗರಬೇಡಿ. ಕೃಷ್ಣದೇವರಾಯನ’ ಎಂದು ಒಂದು ಪದ ಬದಲಾಯಿಸಿಕೊಳ್ಳಿ) ಝಳಪಿಸುತ್ತಾ ನಾಯಿಯೊಡನೆ ಯುದ್ಧಕ್ಕೆ ತಯಾರಾಗುವುದರಲ್ಲಿ ನಾಯಿ ಥಣ್ಣಗಾಗಿ ಏನೂ ಆಗಿಲ್ಲದಂತೆ ವಾಪಸು ತಿರುಗಿ ರಸ್ತೆ ಬದಿಯ ದೀಪದ ಕೆಳಗಿನ ತನ್ನ ಸ್ಥಾನಕ್ಕೆ ಹೋಗಿ ಮಲಗಿಕೊಂಡಿತು. ನಾನು ಒಂದುಕ್ಷಣ ನಿಂತು, ಅದು ಮುದುರಿಕೊಳ್ಳುವವರೆಗೆ ಕಾದು, ನನಗೆ ಆಘಾತವೇನೂ ಆಗಿಲ್ಲವೆಂದು ಖಚಿತಪಡಿಸಿಕೊಂಡು ಮುಂದುವರೆದೆ. ಆದರೆ ನನ್ನ ಸಮಾಧಿ ಸ್ಥಿತಿ ಹಾಳಾಗಿತ್ತು. ನನ್ನ ಯೋಚನೆ, ಗುನುಗಾಟಗಳು ಮತ್ತೆ ಶುರುವಾಗಲು ನಿರಾಕರಿಸಿದವು. ಮೈ ಬೆವರಿದ್ದು ನಿಲ್ಲಲಿಲ್ಲ. ನಾನು ಮತ್ತೆ ಮತ್ತೆ ಹೆದರಿ ಹಿಂತಿರುಗಿ ನೋಡುತ್ತಾ ನನ್ನ ವಾಕಿಂಗ್ ಮುಂದುವರೆಸಿದೆ. ನನ್ನ ಮುಂಜಾನೆಯ ತಿರುಗಾಟದ ಉತ್ಸಾಹ ಅಡಗಿಹೋಗಿತ್ತು.

ಸ್ಮಾಲ್ ಪ್ಲೆಷರ್ಸ್ ಆಫ್ ಲೈಫ್ ಎನ್ನುತ್ತಾರಲ್ಲಾ, ಜೀವನದ ಸಣ್ಣ ಸಣ್ಣ ಸಂತೋಷದ ಕ್ಷಣಗಳು, ಅವುಗಳಲ್ಲಿ ನನ್ನ ಮುಂಜಾನೆಯ ತಿರುಗಾಟ ಒಂದು. ನಾನು ಬೆಳಗ್ಗೆ ಬಹಳ ಬೇಗ ಏಳುವುದರಿಂದ ಒಮ್ಮೊಮ್ಮೆ ಐದರ ಹೊತ್ತಿಗೇ ರಸ್ತೆಯಲ್ಲಿರುತ್ತೇನೆ. ಮುಂಜಾನೆಯ ತಂಪಾದ ಹಾಗೂ ಶಾಂತ ಪರಿಸರ ನನಗೆ ಬಹಳ ಪ್ರಿಯವಾದದ್ದು. ಆದರೆ ನಮ್ಮ ರಸ್ತೆಯ ನಾಯಿಗಳು ನನ್ನ ತಿರುಗಾಟದ ‘ಕಬಾಬ್’ ನಲ್ಲಿನ ‘ಹಡ್ಡಿ’ಗಳು. ಕೆಲವು ನಾನು ದೂರದಲ್ಲಿರುವಾಗಲೇ ನನ್ನನ್ನು ಗಮನಿಸಿ ಗುರುಗಟ್ಟಲು ಪ್ರಾರಂಭಿಸಿ ಒಂದೆರಡು ಕ್ಷಣ ಗುರುಗುಟ್ಟಿ ಹಾಗೆಯೇ ಮಲಗುತ್ತವೆ. ಕೆಲವು ನನ್ನನ್ನು ಕಂಡೊಡನೆ ತಾವು ಬೊಗಳುವುದಷ್ಟೇ ಅಲ್ಲದೆ ಮಲಗಿರುವ ಇತರ ನಾಯಿಗಳಿಗೂ ನನ್ನ ಇರುವನ್ನು ತಿಳಿಸಿಕೊಟ್ಟು ಎಲ್ಲವನ್ನೂ ಎಚ್ಚರಿಸಿ ನಾಲ್ಕೂದಿಕ್ಕಿನಿಂದ ರಣಕಹಳೆ ಮೊಳಗಿಸಲು ಅನುವುಮಾಡಿಕೊಡುತ್ತವೆ. ಕೆಲವು ನಾಯಿಗಳು ಹೀಗೆ ದೂರದಿಂದ

ಬೊಗಳಿ ಸುಮ್ಮನಾದರೆ ಕೆಲವು ನನ್ನ ಹತ್ತಿರಬಂದು ಮೇಲೆ ಹಾರುತ್ತಾ ಕೆಲಕಾಲ ನನಗೆ ಕತ್ತಿ(ಕೋಲು)ವರಸೆಯ ಅಭ್ಯಾಸ ಮಾಡಿಸಿಯೇ ವಾಪಸಾಗುತ್ತವೆ. ಒಟ್ಟಿನಲ್ಲಿ ಈ ಬೀದಿನಾಯಿಗಳ ದೆಸೆಯಿಂದ ನಾನು ಮುಂಜಾನೆ ನಿರಾಳವಾಗಿ ತಿರುಗಾಡುವಂತಿಲ್ಲ.

ಮಹಾಭಾರತದ ನಕುಲನೋ ಸಹದೇವನೋ ಯಾರೋ ಒಬ್ಬ ಅಶ್ವ ಹೃದಯ ಬಲ್ಲವನಂತೆ. ಅಂದರೆ ಕುದುರೆಗಳ ಮನಸ್ಸನ್ನರಿತು ಅವುಗಳನ್ನು ನೋಡಿಕೊಳ್ಳುವುದರಲ್ಲಿ ನಿಷ್ಣಾತನಂತೆ. ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಅವನು ವಿರಾಟರಾಜನ ಕುದುರೆಗಳನ್ನು ನೋಡಿಕೊಳ್ಳುತ್ತಿದ್ದನಂತೆ. ಹೀಗೆ ಯಾವಾಗಲೋ ಓದಿದ ನೆನಪು. ಹಾಗೆ ನನ್ನ ಸ್ನೇಹಿತರು ಕೆಲವರು ಶ್ವಾನಹೃದಯ ಬಲ್ಲವರಿದ್ದಾರೆ. ಅವರ ಪ್ರಕಾರ ಈ ಬೀದಿನಾಯಿಗಳಿಗೆ ನನ್ನ ಮೇಲೇನೂ ದ್ವೇಷವಿಲ್ಲವಂತೆ. ಮನುಷ್ಯನ ಪರಮಮಿತ್ರರಾದ ಅವುಗಳಿಗೆ ರಾತ್ರಿಯಿಡೀ ತಮ್ಮ ಮಿತ್ರರು ಜತೆಗಿಲ್ಲದೆ ಕಳೆದು ಬೇಜಾರಾಗಿದ್ದು, ನನ್ನನ್ನು ಕಂಡೊಡನೆ ಸಂತೋಷ ಉಕ್ಕಿಬಂದು ತಮ್ಮ ಪ್ರೀತಿ ತೋರಿಸಲೋಸ್ಕರ ನನ್ನ ಮೇಲೆ ಎಗರುತ್ತವಂತೆ. ಅದನ್ನು ನಾನು ತಪ್ಪುತಿಳಿದು ಅವುಗಳ ಮೇಲೆ ಕೋಲು ಝಳಪಿಸಿ ಅವುಗಳನ್ನು ಜಗಳಕ್ಕೆ ಪ್ರೇರೇಪಿಸುತ್ತೇನೆಂದು ಅವರ ಆಪಾದನೆ. ನಾಯಿಗಳು ಬೊಗಳುತ್ತಾ ಮೇಲೆ ಬಿದ್ದರೆ ನಾನು ಎಗರಾಡದೆ ನಿಂತು, ಅವುಗಳ ಬಾಲವನ್ನು ಗಮನಿಸಬೇಕಂತೆ. ನಾಯಿಗಳು ಬಾಲವಾಡಿಸುತ್ತಿದ್ದರೆ ಅವು ನನ್ನ ಮೇಲಿನ ಪ್ರೀತಿಯಿಂದ ಮೇಲೆ ಹಾರುತ್ತಿವೆ ಎಂದರ್ಥ ವಂತೆ. ಆಗ ನಾನು ಅವುಗಳನ್ನು ಅಪ್ಪಿಕೊಂಡು, ಮೈದಡವಿ ಕಳಿಸಬೇಕಂತೆ. ನನಗೆ ಅಂಥ ಪ್ರಸಂಗಾವಧಾನವಿಲ್ಲ. ನಾಯಿ ಹಲ್ಲುತೋರಿಸುತ್ತಾ ಮೇಲೆಹಾರಿದರೆ ಕೈಯಲ್ಲಿ ಕೋಲಿದ್ದರೆ ಕೋಲು, ಕಲ್ಲಿದ್ದರೆ ಕಲ್ಲು, ಯಾವುದು ಇರುತ್ತದೋ ಅದರ ಉಪಯೋಗಮಾಡಿ ಬಚಾವಾಗುವುದಷ್ಟೇ ನನಗೆ ತಿಳಿದಿರುವುದು. ಆದ್ದರಿಂದ ನಾನು ಕೋಲುಹಿಡಿದೇ ತಿರುಗಾಟಕ್ಕೆ ಹೊರಡುವುದು.

ಆದರೆ ಶ್ವಾನಹೃದಯ ಬಲ್ಲವರು ಇರುವುದು ನಿಜ. ಅಥವಾ ಏನಾದರೂ ಮಂತ್ರಶಕ್ತಿ ಇದ್ದರೂ ಇರಬಹುದು. ಒಮ್ಮೊಮ್ಮೆ ನಾನು ಹೊರಬೀಳುವುದು ತಡವಾದಾಗ ರಸ್ತೆಯಲ್ಲಿ ಮತ್ತೂ ಒಬ್ಬಿಬ್ಬರು ಕಾಣಬರುತ್ತಾರೆ. ನನ್ನಿಂದ ಕೊಂಚ ಮುಂದೆ ನಡೆಯುವ ಅವರು ರಸ್ತೆಬದಿಯಲ್ಲಿ ಮಲಗಿರುವ ನಾಯಿಗಳ ಪಕ್ಕದಲ್ಲೇ ಹಾದುಹೋದರೂ ಅವರ ಕಡೆ ತಿರುಗಿ ಕೂಡ ನೋಡದೆ ಮಲಗಿರುವ ನಾಯಿಗಳು, ನಾನು ಹೆಜ್ಜೆ ಮೇಲೆ ಹೆಜ್ಜೆ ಯಿಟ್ಟು ರಸ್ತೆದಾಟಿ ಮತ್ತೊಂದು ಬದಿ ತಲುಪಿ, ಸದ್ದುಮಾಡದೆ ದೂರದಿಂದ ನಡೆದರೂ, ಅದು ಹೇಗೋ ನನ್ನ ಇರುವನ್ನು ತಿಳಿದುಕೊಂಡು ಎಚ್ಚೆತ್ತುಕೊಂಡು ಬೊಗಳುತ್ತಾ ನನ್ನ ಮೇಲೆ ಹಾರಿ ಬರುತ್ತವೆ! ನಮ್ಮ ರಸ್ತೆಯಲ್ಲಿ ಸಾಮಾನ್ಯ ನನಗೆ ಕಾಣಸಿಗುವ ಒಬ್ಬನ ಮೇಲಂತೂ ಅದೇನೋ ಪ್ರೀತಿಯೋ ಅವುಗಳಿಗೆ. ಅವನು ಕಾಣುತ್ತಲೇ ಬಾಲವಾಡಿಸುತ್ತಾ ಅವನಬಳಿಸಾರಿ ಅವನ ಕಾಲಿಗೆ ಎರಗುತ್ತವೆ. ಅವನು ಬಗ್ಗಿ ಅವುಗಳ ಮೈದಡವಿ ಮುತ್ತಿಕ್ಕಿ ಮುಂದೆ ಹೋಗುತ್ತಾನೆ. ನನಗಂತೂ ಆಶ್ಚರ್ಯ. ನಾನು ಈ ನಾಯಿಗಳಿಗೆಂದೂ ದ್ವೇಷಬಗೆದಿಲ್ಲ, ಕಲ್ಲು ಬೀರಿಲ್ಲ, ಚಿಕ್ಕವನಿದ್ದಾಗ ನಮ್ಮ ಮನೆಯ ಬಳಿಯಿರುತ್ತಿದ್ದ ಬೀದಿನಾಯಿಯೊಂದನ್ನು ದತ್ತು ಪಡೆದು ನಿತ್ಯ ಅನ್ನ ಹಾಕಿ ಸಾಕಿದ್ದೇನೆ ಕೂಡ. ಆದರೂ ನನ್ನನ್ನು ಕಂಡರೆ ನಾಯಿಗಳೆಲ್ಲಾ ಗುರುಗುಟ್ಟುತ್ತವೆ. ಅದೇಕೋ ದೇವರೇ ಬಲ್ಲ.

ಮೊನ್ನೆ ಏನಾಯಿತು ಹೇಳುತ್ತೇನೆ ಕೇಳಿ. ಎಂದಿನಂತೆ ನಾನು ಬೆಳಗ್ಗೆ ವಾಯುವಿಹಾರ ನಡೆಸಿದ್ದೆ. ಹಿತಚಿಂತಕರ ಮಾತುಕೇಳಿ ಕೈಲಿ ಕೋಲುಹಿಡಿಯದೆಯೇ ಹೊರಟಿದ್ದೆ. ಸುಮಾರು ಹತ್ತುನಿಮಿಷ ನಡೆದಿರಬಹುದು. ನಾಯಿಗಳು ಅದೇಕೋ ನನ್ನನ್ನು ಲಕ್ಷ್ಯ ಮಾಡದೆ ಸುಮ್ಮನೆ

ಮಲಗಿದ್ದವು. ನಾನು ನಡೆಯುವ ರಸ್ತೆ ಸುಮಾರು ಒಂದು ಕಿ ಮೀ ಉದ್ದದ್ದು. ಅದರ ಎರಡೂ ತುದಿಗಳಲ್ಲಿ ಒಂದೊಂದು ಮತ್ತು ಮಧ್ಯದಲ್ಲೊಂದು ಒಟ್ಟು ಮೂರು ಬೀದಿ ನಾಯಿಗಳ ಗುಂಪಿವೆ. ಅವೆಲ್ಲಾ ತಮ್ಮದೇ ಆದ ಸರಹದ್ದುಗಳನ್ನು ಮಾಡಿಕೊಂಡು ಎಲ್ಲವೂ ತಮ್ಮ ತಮ್ಮ ಹದ್ದಿನೊಳಗೆ ತಮ್ಮ ಹಕ್ಕುಗಳನ್ನು ಕಾಯ್ದುಕೊಂಡು ಬದುಕಿರುತ್ತವೆ. ಏನಾದರೂ ಆಗಿ ಒಂದು ಗುಂಪಿನ ನಾಯಿ ಇನ್ನೊಂದು ಗುಂಪಿನ ಸರಹದ್ದು ದಾಟಿತೋ, ರಣಕಹಳೆ ಮೊಳಗಿ ಯುದ್ಧ ಶುರುವಾಗಿಬಿಡುತ್ತದೆ. ನಾನು ನಡೆಯುವ ರಸ್ತೆಪಕ್ಕದಲ್ಲಿ ಒಬ್ಬಾತ ಕೆಲವು ಎಮ್ಮೆ ಹಸುಗಳನ್ನು ಸಾಕಿಕೊಂಡಿದ್ದು, ಹಾಲು ಮಾರಿ ಜೀವನ ಸಾಗಿಸುತ್ತಾನೆ. ನಾನು ಈ ಲೇಖನದ ಶುರುವಿನಲ್ಲಿ ಬರೆದನಲ್ಲಾ, ನನ್ನ ಮೇಲೆ ಎಗರಿದ ನಾಯಿ, ಅದು ಅವನು ಸಾಕಿರುವ ಒಂಟಿ ನಾಯಿ. ಅದು ಯಾವ ಗುಂಪಿಗೂ ಸೇರಿದ್ದಲ್ಲ. ಪಕ್ಷೇತರ.

ನಾನು ರಸ್ತೆಯಲ್ಲಿ ಸಾಗುತ್ತಿದ್ದಂತೆ ಈ ಹಾಲು ಮಾರುವವನು ಕೈಲಿ ಹಾಲಿನ ಕ್ಯಾನ್ ಹಿಡಿದು ಮನೆಯಿಂದ ಹೊರಬಿದ್ದ. ತನ್ನ ವರ್ತನೆಯ ಮನೆಗಳಿಗೆ ಹಾಲುಕೊಡಲು ಹೊರಟಿದ್ದಿರಬೇಕು. ಅವನ ಮುಂದೆ ಅವನನಾಯಿ ನಡೆದಿತ್ತು. ನಾನು ಅವರಿಬ್ಬರ ಹಿಂದೆ. ನಾಯಿ ಅದೇಕೋ ನನ್ನನ್ನು ಲಕ್ಷಿಸದೆ ಸುಮ್ಮನೆ ನಡೆಯುತ್ತಿತ್ತು. ಸ್ವಲ್ಪನಡೆದು ಅವರಿಬ್ಬರೂ ಮತ್ತೊಂದು ಶ್ವಾನಗುಂಪಿನ ಸರಹದ್ದು ಪ್ರವೇಶಿಸುತ್ತಿದ್ದಂತೆ ಆ ಗುಂಪಿನ ನಾಯಿಗಳೆಲ್ಲವೂ ಈ ಒಂಟಿನಾಯಿಯ ವಾಸನೆ ಹಿಡಿದು, ನಿದ್ದೆ ಝಾಡಿಸಿಕೊಂಡು ಎದ್ದು, ಅರಚುತ್ತಾ ಕಾಳಗಕ್ಕೆ ಸಿಧ್ಧವಾಗಿಬಿಟ್ಟವು. ಅವೆಲ್ಲಾ ಸಿಧ್ಧವಾಗಿ ರಸ್ತೆಗಿಳಿಯುವಷ್ಟರಲ್ಲಿ ಹಾಲಿನವನು ಪಕ್ಕಕ್ಕೆ ತಿರುಗಿ ರಸ್ತೆಯಿಂದ ಕೊಂಚ ಒಳಗಿದ್ದ ಮನೆಯೊಂದಕ್ಕೆ ಹಾಲು ಹಾಕಲು ನಡೆದುಬಿಟ್ಟ. ಅವನೊಂದಿಗೆ ಅವನ ನಾಯಿಯೂ ಹೊರಟುಹೋಯಿತು. ನಿದ್ದೆ ಕೆಡಿಸಿಕೊಂಡು ಕಾಳಗಕ್ಕೆ ತಯಾರಾಗಿ ರಸ್ತೆಗಿಳಿದಿದ್ದ ನಾಯಿಗಳ ಚಕ್ರವ್ಯೂಹಕ್ಕೆ ಒಂಟಿನಾಯಿಯ ಬದಲು ನಾನು ಸಿಕ್ಕಿಬಿದ್ದೆ! ನನ್ನ ಕೈಯಲ್ಲಿ ಆಯುಧವಿಲ್ಲವೆಂದು ಅವೇನೂ ನನಗೆ ರಿಯಾಯಿತಿ ತೋರಿಸುವಂತೆ ಕಾಣಲಿಲ್ಲ. ನನ್ನ ಪುಣ್ಯಕ್ಕೆ ರಸ್ತೆ ಪಕ್ಕದಲ್ಲೇ ರಸ್ತೆ ರಿಪೇರಿಯವರು ಉಳಿಸಿಹೋಗಿದ್ದ ಕೆಲವು ಕಲ್ಲುಗಳು ಕೈಗೆ ಸಿಕ್ಕಿದವು. ನಾಲ್ಕೂ ದಿಕ್ಕಿಗೆ ಕಲ್ಲು ಬೀಸುತ್ತಾ ಹೇಗೋ ಮಾಡಿ ನಾಯಿಗಳ ದಾಳಿಯನ್ನು ನಿವಾರಿಸಿಕೊಂಡು, ಢವಗುಟ್ಟುತ್ತಿದ್ದ ಎದೆಯನ್ನು ಕೈಲಿಹಿಡಿದು ದೌಡಾಯಿಸಿ ಬದುಕಿಕೊಂಡೆ.

ನಮ್ಮ ಶಿಶುನಾಳ ಶರೀಫರೂ ಸಹ ನನ್ನಂತೆಯೇ ನಾಯಿಗಳ ಕಾಟ ಅನುಭವಿಸಿ ಬಲ್ಲವರಿರಬೇಕು. ಅದರಿಂದಲೇ ಅವರು ಕಾರಣವಿಲ್ಲದೆ ತಮ್ಮ ಮೇಲೆ ಗುರುಗುಟ್ಟುತ್ತಿದ್ದ ಜನರನ್ನು ಬೀದಿನಾಯಿಗಳಿಗೆ ಹೋಲಿಸಿ ಪದ ಬರೆದರು.

ದಾರಿಹಿಡಿದು ಬರುತಿರಲು, ವಾರಿಗಿ ನಾಯಿ ನೂರಾರು ಕೂಡಿರಲು,
ಯಾರಕೇಳಲಿ ನಮ್ಮವರಾರು, ಸಾರಿ ಹೇಳುವರಿಲ್ಲವಾಯ್ತು
ಗುರಗುಟ್ಟುತ ಮೇಲೆಬರಲು, ಕರವ ಮುಗಿದು ಬರುವಂಥ
ನಾಯಿಬಂದಾವೋ ಬೆನ್ಹತ್ತಿ , ನಾರಾಯಣ ನಾಯಿಬಂದಾವೋ ಬೆನ್ಹತ್ತಿ.
ನಾಯಿ ಅಂದರೆ ನಾಯಿ ಅಲ್ಲ ಮಾನವ ಜನ್ಮದ ಹೀನ ನಾಯಿ,
ಜ್ಞಾನಾನಂದ ತಿಳಿಯದಂಥ, ಶ್ವಾನಾನಂದದೊಳು ದುಂಥೆ
ನಾಯಿಬಂದಾವೋ ಬೆನ್ಹತ್ತಿ.........

ಪಾಪ ನಾಯಿ ಜನ್ಮದ ನಾಯಿಗಳಲ್ಲದೆ, ಮಾನವ ಜನ್ಮದ ನಾಯಿಗಳನ್ನೂ ಸಹಿಸಿಕೊಳ್ಳಬೇಕಾಯಿತು ಅವರು. ನನಗೆ ಬರಿ ಬೀದಿ ನಾಯಿಗಳ ಕಾಟವಷ್ಟೇ. ಮಾನವ ಜನ್ಮದ ನಾಯಿಗಳಾವೂ ನನ್ನ ಹಿಂದೆ ಬಿದ್ದಿಲ್ಲ! ಅದೇ ಸಮಾಧಾನ.

Published on 3rd of every month
Mailed on 5th of every month
Mailed at: Bangalore P.S.O. 560026

Registered - KA / BGW - 544 / 2018 - 2020
**RNI - KAR-KAN / 2005 / 15457**

Printed by: V.R. NATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55 Editor : M. SHIVAKUMAR No. of Pages: 40+4 APARANJI KANNADA MONTHLY.